# Society and Economy of Karnataka

## In News





VOL:1 | December 2023 | NO:15


An Initiative of ISEC to draw your attention to current socio-economic issues pertaining to Karnataka published in different daily newspapers.

## CONTENTS


Agriculture

Decentralisation

Economy

Education

Environment

Health

Gender

Governance

Social Issues

Urban Affairs

# AGRICULTURE

ವಿಜಯವಾಣಿ

## ಕನಿಷ್ಠ ನೂರು ರೈತರ ಮಕ್ಕಳಿಗೆ ಅವಕಾಶ । ₹100 ಕೋಟಿ ವೆಚ್ಚ?

## ಕೃಷಿಕರನ್ನು ಸ್ವಾವಲಂಬಿಯಾಗಿಸಲು ಸರ್ಕಾರದ ಮೂರು ಯೋಜನೆ

# ವಿದೇಶಿ ಕಲಿಕೆಗೆ ರೈತ ವಿದ್ಯಾನಿಧಿ

■ ರುದ್ರಣ್ಣ ಹರ್ತಿಕೋಟೆ ಬೆಂಗಳೂರು

ರೈತರ ಅಭ್ಯುದಯಕ್ಕೆ ವಿವಿಧ ಯೋಜನೆ ರೂಪಿಸುವ ಜತೆಜತೆಗೆ ಇಡೀ ಕೃಷಿ ವಲಯವನ್ನು ಸದೃಢ ಹಾಗೂ ಸ್ವಾವಲಂಬಿಯಾಗಿಸುವ ಉದ್ದೇಶದಿಂದ ಮಹತ್ವದ ಸುಧಾರಣೆಗಳತ್ತ ಸರ್ಕಾರ ಹೆಜ್ಜೆಯನ್ನಿಡಲು ತೀರ್ಮಾನಿಸಿದೆ. ಅಷ್ಟೇ ಅಲ್ಲ, ರೈತರ ಮಕ್ಕಳಿಗಾಗಿ ರೂಪಿಸಿರುವ ವಿದ್ಯಾನಿಧಿ ಯೋಜನೆಯನ್ನು ವಿದೇಶಿ ವ್ಯಾಸಂಗಕ್ಕೂ ವಿಸ್ತರಿಸಲು ಸರ್ಕಾರ ಮುಂದಾಗಿದೆ.

ಪ್ರಸ್ತುತ ರೈತರ ಮಕ್ಕಳಿಗೆ ವಿದೇಶದಲ್ಲಿ ವ್ಯಾಸಂಗ ಮರೀಚಿಕೆಯೇ ಆಗಿದೆ. ಪ್ರತಿಭೆ ಇದ್ದರೂ ವಿದೇಶದ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡಲು ಹಣಕಾಸಿನ ಸಮಸ್ಯೆ ಅಡ್ಡಿಯಾಗಿದೆ. ಇನ್ನು ರೈತರ ಮಕ್ಕಳ ಸಲುವಾಗಿ ರೂಪಿಸಿರುವ ವಿದ್ಯಾನಿಧಿ ಯೋಜನೆ ಕೇವಲ ಕಾಲೇಜು ಶಿಕ್ಷಣ ಹಂತಕ್ಕೆ ಸೀಮಿತವಾಗಿದೆ. ಮಾಸಿಕ 2 ಸಾವಿರ ರೂ. ಮಾತ್ರ ನೀಡಲಾಗುತ್ತದೆ. ಇದರಿಂದ ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ವಾರ್ಷಿಕ 100 ರೈತ ಮಕ್ಕಳಿಗಾದರೂ ವಿದೇಶದಲ್ಲಿ ಯಾವುದೇ ರೀತಿಯ ಶಿಕ್ಷಣ ಪಡೆಯಲು ಬೇಕಾದ ಸಂಪೂರ್ಣ ವೆಚ್ಚವನ್ನು ಭರಿಸುವ ಬಗ್ಗೆ ಚಿಂತನೆ ನಡೆಸಿದೆ. ಉನ್ನತ ಶಿಕ್ಷಣ, ಸಂಶೋಧನೆ ಹೀಗೆ ಯಾವುದೇ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದರೂ ನೆರವು ನೀಡಲಾಗುತ್ತದೆ. ಈ ಯೋಜನೆಗೆ ವಾರ್ಷಿಕ 100 ಕೋಟಿ ರೂ. ಬೇಕಾಗಬಹುದೆಂದು ಅಂದಾಜಿಸಲಾಗಿದೆ. ಮುಂದಿನ ಬಜೆಟ್‌ನಲ್ಲಿ ಈ ಯೋಜನೆ ಘೋಷಣೆಯಾಗಲಿದೆ ಎಂದು ತಿಳಿದುಬಂದಿದೆ. ಪುಟ 5C




### ಯೋಜನೆಗಳು

1. ವಿದೇಶದಲ್ಲಿ ವ್ಯಾಸಂಗ ಮಾಡುವ ರೈತರ ಮಕ್ಕಳಿಗೆ ರೈತ ವಿದ್ಯಾನಿಧಿ ವಿಸ್ತರಿಸುವುದು
2. ಬಿತ್ತನೆ ಬೀಜದಲ್ಲಿ ಕುಲಾಂತರಿ ಬೀಜಕ್ಕೆ ಕಡಿವಾಣ ಹಾಕಿ ಉತ್ತಮ ಬೀಜ ನೀಡುವುದು
3. ಮಣ್ಣಿನ ಸತ್ವ ಹೆಚ್ಚಿಸುವ ಮೂಲಕ ಸಾವಯವ ಮಣ್ಣು ಮಾಡುವುದು



ನಮ್ಮ ಸರ್ಕಾರ ರೈತರ ಆದಾಯ ವೃದ್ಧಿಗೆ ಗಮನ ಹರಿಸುವುದರೊಂದಿಗೆ ಸಮಗ್ರ-ಸಮೃದ್ಧಿ ಕೃಷಿಗೆ ಉತ್ತೇಜನ ನೀಡಲಿದೆ. ಮಣ್ಣಿನ ಸಂರಕ್ಷಣೆಗೆ ಸಾವಯವ ಕೃಷಿ, ರಾಸಾಯನಿಕ ಮುಕ್ತ ಆಹಾರ ಉತ್ಪಾದನೆಗೆ ಸಿರಿಧಾನ್ಯಗಳಿಗೆ ಪ್ರೋತ್ಸಾಹ, ಬೀಜೋತ್ಪಾದನೆಯಲ್ಲಿ ಸ್ವಾವಲಂಬಿತನ, ಅತಿಯಾದ ನೀರಿನ ಅವಲಂಬನೆ ತಪ್ಪಿಸಿ ಹವಾಮಾನಕ್ಕೆ ಅನುಗುಣವಾದ ಕೃಷಿ ಪದ್ಧತಿ ರೂಢಿಸುವತ್ತ ಗಮನ ಹರಿಸಿದೆ. । ಎನ್. ಚಲುವರಾಯಸ್ವಾಮಿ ಕೃಷಿ ಸಚಿವ

Bengaluru Edition
Dec 23, 2023 Page No. 1
Powered by : eReleGo.com

ವಿಜಯವಾಣಿ

# ವಿದೇಶಿ ಕಲಿಕೆಗೆ ರೈತರ ಮಕ್ಕಳಿಗೆ ವಿದ್ಯಾನಿಧಿ

**ಮೊದಲನೇ ಪುಟದಿಂದ...**

**ಸಾಂಪ್ರದಾಯಿಕ ಬಿತ್ತನೆ ಬೀಜ:** ರಾಜ್ಯದಲ್ಲಿ ಈಗ ಬಿತ್ತನೆ ಬೀಜಕ್ಕೆ ಖಾಸಗಿ ಕಂಪನಿಗಳ ಮೇಲೆ ಅವಲಂಬನೆಯೇ ಹೆಚ್ಚಾಗಿದೆ. ಆ ಕಂಪನಿಗಳು ಸರ್ಕಾರದ ಸಬ್ಸಿಡಿಯನ್ನು ನುಂಗುವುದರ ಜತೆಗೆ ರೈತರಿಗೆ ಆಗುವ ನಷ್ಟಕ್ಕೆ ಉತ್ತರದಾಯಿಗಳಾಗಿರುವುದಿಲ್ಲ. ಔಷಧ ಮಾಫಿಯಾದ ರೀತಿಯಲ್ಲಿಯೇ ಬೀಜ ಮಾಫಿಯಾ ಸದ್ದಿಲ್ಲದೇ ಬೀಡು ಬಿಟ್ಟಿದೆ. ರಾಜ್ಯಕ್ಕೆ ಪ್ರತಿವರ್ಷ ಅಂದಾಜು 24 ಲಕ್ಷ ಟನ್ ಬಿತ್ತನೆ ಬೀಜ ಬೇಕು. ಅದರಲ್ಲಿ 3 ಲಕ್ಷ ಬೀಜ ನಿಗಮ ಉತ್ಪಾದನೆ ಮಾಡಿದರೆ, 5 ಲಕ್ಷ ಟನ್ ಸಬ್ಸಿಡಿಯಿಂದ ಬರುತ್ತದೆ. ಉಳಿದ 16 ಲಕ್ಷ ಟನ್ ಖಾಸಗಿ ಕಂಪನಿಗಳ ಮೇಲೆ ಅವಲಂಬಿಸಿರುತ್ತೇವೆ. ಸರ್ಕಾರ ದಿಂದಲೇ ಪ್ರಮಾಣೀಕೃತ ಬೀಜ ಸರಬರಾಜು ಮಾಡದಿರುವುದೇ ಕುಲಾಂತರಿ ಬೀಜಗಳ ಹಾವಳಿಗೆ ಕಾರಣವಾಗಿದೆ. ಬೇರೆ ಬೇರೆ ರಾಜ್ಯ ಗಳಲ್ಲಿ ಆಯಾ ರಾಜ್ಯದ ಸಂಸ್ಥೆ ಗಳೇ ಬಿತ್ತನೆ ಬೀಜ ಉತ್ಪಾದನೆ ಮಾಡುತ್ತಿ ರುವಾಗ ಕೃಷಿ ವಿವಿಗಳು, ಇಲಾಖೆಗೆ ಸೇರಿದ ಸಾವಿರಾರು ಎಕರೆ ಫಾರಂಗಳಲ್ಲಿ ಖುದ್ದಾಗಿ ಬಿತ್ತನೆ ಬೀಜ ಉತ್ಪಾದನೆ ಏಕೆ ಸಾಧ್ಯವಿಲ್ಲ ವೆಂಬುದಕ್ಕೆ ಉತ್ತರ ಪಡೆಯಲು ಸರ್ಕಾರ ಮುಂದಾಗಿದೆ.

» **ಪ್ರತಿವರ್ಷ ಅಂದಾಜು 24 ಲಕ್ಷ ಟನ್ ಬಿತ್ತನೆ ಬೀಜ ಬೇಕು**

**ಸರ್ಕಾರ ಏನು ಮಾಡಲಿದೆ?:** ನಾಗಮಂಗಲ ತಾಲೂಕಿನಲ್ಲಿ 780 ಎಕರೆ, ದಾವಣಗೆರೆ ಜಿಲ್ಲೆಯ ಕತ್ತಲಗೆರೆಯಲ್ಲಿ 300 ಎಕರೆ ಹೀಗೆ ಬಹುತೇಕ ತಾಲೂಕುಗಳಲ್ಲಿ ಇಲಾಖೆಯ ಭೂಮಿ ಪಾಳು ಬಿದ್ದಿದೆ. ವಾರ್ಷಿಕ 2 ಸಾವಿರ ಕೋಟಿ ರೂ.ಗಳನ್ನು ವೆಚ್ಚ ಮಾಡುವ ಮೂಲಕ ವಿಶ್ವವಿದ್ಯಾಲಯಗಳ ಸಂಶೋಧನೆಯನ್ನು ಬಳಸಿಕೊಂಡು 16 ಲಕ್ಷ ಟನ್ ಬಿತ್ತನೆ ಬೀಜವನ್ನು ಉತ್ಪಾದನೆ ಮಾಡಿ ರೈತರಿಗೆ ನೀಡುವುದು ಸರ್ಕಾರದ ಉದ್ದೇಶವಾಗಿದೆ.

Bengaluru Edition
Dec 23, 2023 Page No. 8
Powered by : eReleGo.com

**Source: Vijayavani, p.1-8, Dec.23, 2023**

ಪ್ರಜಾವಾಣಿ

## ಕರ್ನಾಟಕದಲ್ಲಿ ಪ್ರತಿದಿನ 2 ಕೋಟಿ ಮೊಟ್ಟೆ ಉತ್ಪಾದನೆ

# ಮೊಟ್ಟೆ ದರ ಇನ್ನಷ್ಟು ಹೆಚ್ಚಳ?

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ಕಳೆದ ಎರಡೂವರೆ ತಿಂಗಳಿನಲ್ಲಿ ಕೋಳಿ ಮೊಟ್ಟೆಯ ಸಗಟು ಧಾರಣೆ ಹೆಚ್ಚಾಗಿದೆ. ಹಾಗಾಗಿ, ಹೊಸ ವರ್ಷಕ್ಕೆ ಚಿಲ್ಲರೆ ಮಾರಾಟ ತುಟ್ಟಿಯಾಗಬಹುದು ಎನ್ನಲಾಗಿದೆ.

ಅಕ್ಟೋಬರ್‌ನಲ್ಲಿ ಸಗಟು ದರ ₹535 (ಪ್ರತಿ 100 ಮೊಟ್ಟೆಗಳಿಗೆ) ಇತ್ತು. ಈ ತಿಂಗಳಿನಲ್ಲಿ ₹630ಕ್ಕೆ ಮುಟ್ಟಿದೆ. ಒಟ್ಟಾರೆ 95 ಪೈಸೆ ಹೆಚ್ಚಳವಾಗಿದೆ.

ಜನರು ಜನವರಿಯಲ್ಲಿ ಹೊಸ ವರ್ಷದ ಸಂಭ್ರಮಾಚರಣೆ ಮಾಡುತ್ತಾರೆ. ಇದರಿಂದ ಕೇಕ್‌ಗಳ ತಯಾರಿಕೆಗೆ ಬೇಡಿಕೆ ಹೆಚ್ಚುತ್ತದೆ. ಅಲ್ಲದೇ, ಚಳಿಗಾಲದಲ್ಲಿ ಮನೆ ಸೇರಿದಂತೆ ಹೋಟೆಲ್‌ಗಳಲ್ಲಿ ಮೊಟ್ಟೆಗಳನ್ನು ಬಳಕೆ ಮಾಡುವುದು ಹೆಚ್ಚು. ಹಾಗಾಗಿ, ಒಂದು ಮೊಟ್ಟೆಗೆ ಸಗಟು ದರ ₹6.50ರಿಂದ ₹6.75 ದಾಟುವ ಸಾಧ್ಯತೆಯಿದೆ. ಹಾಗಾಗಿ, ಚಿಲ್ಲರೆ ಮಾರಾಟ ದರವು ₹7ರಿಂದ ₹7.50ಕ್ಕೆ ಹೆಚ್ಚಳವಾಗಲಿದೆ ಎನ್ನುತ್ತಾರೆ ರಾಷ್ಟ್ರೀಯ ಮೊಟ್ಟೆ ಸಮನ್ವಯ ಸಮಿತಿಯ (ಎನ್‌ಇಸಿಸಿ) ಪ್ರತಿನಿಧಿಗಳು.

ಪ್ರಸ್ತುತ ರಾಜ್ಯದಲ್ಲಿ ವಿಜಯನಗರ, ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ಮೈಸೂರು, ಕೊಪ್ಪಳ ಜಿಲ್ಲೆ ಸೇರಿದಂತೆ ಬೆಂಗಳೂರು ಸುತ್ತಮುತ್ತಲಿನ ಪ್ರದೇಶದಲ್ಲಿ ಕೋಳಿ ಸಾಕಾಣಿಕೆ ನಡೆಯುತ್ತಿದೆ. ರಾಜ್ಯದಲ್ಲಿ ಪ್ರತಿನಿತ್ಯ 2 ಕೋಟಿಯಷ್ಟು ಮೊಟ್ಟೆಗಳ ಉತ್ಪಾದನೆಯಾಗುತ್ತದೆ. 'ಬೆಂಗಳೂರಿನಲ್ಲಿ ಜನರು ಪ್ರತಿದಿನ 90 ಲಕ್ಷ ಮೊಟ್ಟೆಗಳನ್ನು ಬಳಸುತ್ತಾರೆ. ದಾವಣಗೆರೆ ಸೇರಿದಂತೆ ರಾಜಧಾನಿ ಸುತ್ತ-ಮುತ್ತಲಿನ ಪ್ರದೇಶದಿಂದ ಇಲ್ಲಿಗೆ ನಿತ್ಯ 40 ಲಕ್ಷ ಮೊಟ್ಟೆಗಳು ಪೂರೈಕೆಯಾಗುತ್ತವೆ. ಉಳಿದಂತೆ




ತಮಿಳುನಾಡಿನ ನಾಮಕ್ಕಲ್‌ನಿಂದ 40 ಲಕ್ಷದಿಂದ 50 ಲಕ್ಷ ಮೊಟ್ಟೆಗಳು ಪೂರೈಕೆಯಾಗುತ್ತಿವೆ' ಎಂದು ವಿವರಿಸುತ್ತಾರೆ ಎನ್‌ಇಸಿಸಿ ಬೆಂಗಳೂರು ವಲ ಯದ ಪ್ರಭಾರ ಉಸ್ತುವಾರಿಯಾಗಿರುವ ರವೀಂದ್ರ ರೆಡ್ಡಿ.

ನೆರೆಯ ಗೋವಾ, ಮಹಾರಾಷ್ಟ್ರ ಹಾಗೂ ತೆಲಂಗಾಣ ರಾಜ್ಯಗಳಿಗೂ ರಾಜ್ಯದಲ್ಲಿ ಉತ್ಪಾದನೆಯಾಗುವ ಕೋಳಿ ಮೊಟ್ಟೆಗಳು ಪೂರೈಕೆಯಾಗುತ್ತವೆ. ಬಳ್ಳಾರಿ ಭಾಗದ ಕೋಳಿ ಸಾಕಾಣಿಕೆ ಕೇಂದ್ರಗಳಲ್ಲಿ ಉತ್ಪಾದನೆಯಾಗುವ ಮೊಟ್ಟೆಗಳು ತೆಲಂಗಾಣದ ರಾಯಲಸೀಮೆ ಭಾಗಕ್ಕೆ ಹೆಚ್ಚಾಗಿ ಪೂರೈಕೆಯಾಗುತ್ತವೆ.

### ವಾರ್ಷಿಕ ವಹಿವಾಟು ₹5 ಸಾವಿರ ಕೋಟಿ

'ಕರ್ನಾಟಕದಲ್ಲಿ ಪ್ರತಿವರ್ಷ ಮೊಟ್ಟೆ ಉತ್ಪಾದನೆಯು ಶೇ 5ರಿಂದ 6ರಷ್ಟು ಹೆಚ್ಚಳ ವಾಗುತ್ತಿದೆ. ಜತೆಗೆ, ಬಳಕೆ ಪ್ರಮಾಣವೂ ಹೆಚ್ಚುತ್ತಿದೆ' ಎಂದು ಹೇಳುತ್ತಾರೆ ರವೀಂದ್ರ ರೆಡ್ಡಿ.

'ಕರ್ನಾಟಕವು ಮೊಟ್ಟೆ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದೆ. ಹೊರರಾಜ್ಯಗಳ ಅವಲಂಬನೆಯ ಅಗತ್ಯವಿಲ್ಲ. ಆದರೆ, ಹೊರ ಜಿಲ್ಲೆಗಳಿಂದ ಬೆಂಗಳೂರಿಗೆ ಸಾಗಾಣಿಕೆ ವೆಚ್ಚ ದುಬಾರಿಯಾಗಲಿದೆ. ಹಾಗಾಗಿ, ತಮಿಳುನಾಡಿನಲ್ಲಿ ಉತ್ಪಾದನೆಯಾಗುವ ಮೊಟ್ಟೆಗಳ ಖರೀದಿಗೆ ಇಲ್ಲಿನ ಡೀಲರ್‌ಗಳು ಹೆಚ್ಚು ಆಸ್ಥೆವಹಿಸುತ್ತಾರೆ' ಎಂದು ಹೇಳುತ್ತಾರೆ.

'ಅಲ್ಲದೇ, ರಾಜ್ಯದಲ್ಲಿ ಪ್ರತಿದಿನ ಮೊಟ್ಟೆ ವಹಿವಾಟು ₹10 ಕೋಟಿ ದಾಟುತ್ತದೆ. ಕೋಳಿಗಳು, ಮೊಟ್ಟೆ ಹಾಗೂ ಗೊಬ್ಬರದ ಮಾರಾಟವನ್ನು ಪರಿಗಣಿಸಿದರೆ ಈ ಉದ್ಯಮದ ವಾರ್ಷಿಕ ವಹಿವಾಟು ಸುಮಾರು ₹4,500 ಕೋಟಿಯಿಂದ ₹5 ಸಾವಿರ ಕೋಟಿ ಇದೆ' ಎಂಬುದು ಅವರ ವಿವರಣೆ.

**Source: Prajavani, p.8, Dec.26,2023**

ವಿಶ್ವವಾಣಿ

### ಬರದಿಂದ ಇಳುವರಿ ಕಡಿಮೆ | 13 ಸಾವಿರ ರು.ನಿಂದ 7 ಸಾವಿರಕ್ಕೆ ಇಳಿಕೆ

# ಹತ್ತಿ ಬೆಳೆದ ರೈತರಿಗೆ ಶಾಕ್

**ವೀರೇಶ ಎಸ್ ಕೆಂಭಾವಿ** ಯಾದಗಿರಿ

ಬರದಿಂದ ಈಗಾಗಲೇ ಹತ್ತಿ ಬೆಳೆ ಇಳುವರಿ ಇಳಿಕೆಯಾಗಿರುವ ಹೊತ್ತಲ್ಲೇ ಇದೀಗ ಅದರ ಬೆಲೆಯೂ ಕುಸಿತ ಕಂಡಿದ್ದು, ರೈತರಿಗೆ ಡಬ್ಬಲ್ ಶಾಕ್ ಜತೆಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ.

ತಿಂಗಳ ಹಿಂದೆ ಹತ್ತಿ ಬೆಳೆಗೆ ಪ್ರತಿ ಕ್ವಿಂಟಲ್ 12 ರಿಂದ 14 ಸಾವಿರ ರು. ಬೆಲೆ ಇತ್ತು. ಹತ್ತಿ ಬಿಡಿಸಿ ಮನೆಗೆ ತರುವ ಹೊತ್ತಿಗೆ ಧಾರಣೆ 10 ಸಾವಿರಕ್ಕೆ ತಲುಪಿತು. ಇದೀಗ 7 ಸಾವಿರದ ಆಸುಪಾಸಿನಲ್ಲಿ ಮಾರಾಟವಾಗುತ್ತಿದ್ದು, ಬೆಲೆ ಇಳಿಕೆ ಆತಂಕದಲ್ಲಿ ಕೂಲಿಕಾರರಿಗೆ ಹೆಚ್ಚು ಹಣ ನೀಡಿ ಹತ್ತಿ ಬಿಡಿಸಿ ಮನೆಗೆ ತಂದಿದ್ದ ರೈತರಿಗೆ ಇದು ನುಂಗಲಾರದ ತುತ್ತಾಗಿದೆ.

ಪ್ರತಿ ವರ್ಷವೂ ಹತ್ತಿ ಬೆಳೆ ಬೆಳೆಯುವುದರಲ್ಲಿ ಕಲ್ಯಾಣ ಕರ್ನಾಟಕ ಭಾಗದ ಬಳ್ಳಾರಿ, ರಾಯಚೂರು, ಹುಬ್ಬಳ್ಳಿ, ಹಾವೇರಿ, ಚಿತ್ರದುರ್ಗ, ಯಾದಗಿರಿ ಜಿಲ್ಲೆಯ ರೈತರು ಮುಂಚೂಣಿಯಲ್ಲಿದ್ದಾರೆ. ಜಿಲ್ಲೆಯಲ್ಲಿ ಕಳೆದ ಬಾರಿ ಸುಮಾರು 1.82 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ರೈತರು ಹತ್ತಿ ಬೆಳೆಯನ್ನು ಬೆಳೆದಿದ್ದರು. ಮಳೆ ಕೂಡ ಚೆನ್ನಾಗಿ ಆಗಿದ್ದರಿಂದ ಇಳುವರಿ ಚೆನ್ನಾಗಿ ಬಂದಿತ್ತು. ಇದರ ಜತೆಗೆ ಬೆಲೆ ಕೂಡ ಭರ್ಜರಿಯಾಗಿ ಸಿಕ್ಕ ಕಾರಣಕ್ಕೆ ರೈತರು ಭರ್ಜರಿಯಾಗಿ ಲಾಭ ಪಡೆದಿದ್ದರು. ಈ ಸಲವೂ ಕಳೆದ ವರ್ಷದಂತೆ ಹೆಚ್ಚಿನ ಬೆಲೆ ಸಿಗುತ್ತದೆಂದು ಜಿಲ್ಲೆಯ ರೈತರು ಸುಮಾರು 2 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಹತ್ತಿಯನ್ನು ಬೆಳೆದಿದ್ದಾರೆ. ಆದರೆ, ಈ ವರ್ಷ ರೈತರಿಗೆ ಮಳೆ ಬಾರದ ಕಾರಣಕ್ಕೆ ಭೀಕರ ಬರದ ಎಫೆಕ್ಟ್ ಆಗಿದೆ ಈಗಾಗಲೇ ಇಳುವರಿ ಸಹ ಕಡಿಮೆಯಾಗಿದೆ. ಹತ್ತಿ ಬೆಳೆಗೆ ಕಳೆದ ಕೆಲ ವರ್ಷದಿಂದ ಕಾಣಿಸಿಕೊಂಡ ಪಿಂಕ್ ಬೋಲ್ ವಾರ್ಮ್ ಎನ್ನುವ ರೋಗ, ಬೀಜ ಮತ್ತು ಔಷಧೀಯ ಗುಣಮಟ್ಟದಲ್ಲಿ ಕೊರತೆಯಿಂದ ಪ್ರತಿ ಎಕರೆಗೆ ಸರಾಸರಿ 15 ಕ್ವಿಂಟಲ್ ಹತ್ತಿಯ ಇಳುವರಿ ಈಗ 5 ರಿಂದ 10 ಕ್ವಿಂಟಲ್‌ಗೆ ಇಳಿಕೆಯಾಗಿದೆ. ಇದರ ಜತೆಗೆ ಬೆಲೆಯೂ ಕುಸಿತವಾಗಿರುವುದು ದುಬಾರಿ ಬೀಜ, ಗೊಬ್ಬರ, ಬಿತ್ತನೆ ವೆಚ್ಚ ಹಾಗೂ ಹತ್ತಿ ಬಿಡಿಸುವ ಕೂಲಿ ಸೇರಿ ಪ್ರತಿ ಎಕರೆಗೆ 25 ಸಾವಿರಕ್ಕೂ ಅಧಿಕ ಖರ್ಚು ಮಾಡಿರುವ ರೈತನಿಗೆ ಹಾಕಿದ ದುಡ್ಡು ಬಂದರೆ ಸಾಕು ಎನ್ನುವಂತಾಗಿದೆ. ಈ ಕುರಿತು ಸರಕಾರ ಹೆಚ್ಚಿನ ದರದಲ್ಲಿ ರೈತರು ಬೆಳೆದ ಹತ್ತಿ ಬೆಳೆ ಖರೀದಿಗೆ ಮುಂದಾಗಬೇಕು ಎನ್ನುವುದು ರೈತರ ಆಗ್ರಹವಾಗಿದೆ.

**ಹತ್ತಿ ಬಿತ್ತನೆ ಮಾಡುವು ದಕ್ಕೆ ಮೊದಲು ಕ್ವಿಂಟಲ್‌ಗೆ 12 ಸಾವಿರವಿದ್ದ ಬೆಲೆ ಈಗ 7 ಸಾವಿರಕ್ಕೆ ಇಳಿಕೆಯಾಗಿದೆ. ಸರಕಾರ ಈ ಕೂಡಲೇ ಮಧ್ಯ ಪ್ರವೇಶಿಸಿ ಹೆಚ್ಚಿನ ಬೆಲೆಗೆ ಹತ್ತಿ ಖರೀದಿಸಲು ಮುಂದಾಗಲಿ.**

-ಬಸನಗೌಡ ಬಿರಾದಾರ ಚಿಂಚೋಳಿ, ರಾಜ್ಯ ಕಾರ್ಯದರ್ಶಿಗಳು, ರೈತ ಸಂಘ



### ಹಳದಿ ಬಣಕ್ಕೆ ತಿರುಗುವ ಭೀತಿ

**ನೆಟೆರೋಗದಿಂದ ತೊಗರಿ ಬೆಳೆ ಸಂಪೂರ್ಣ ಹಾನಿಯಾಗುತ್ತದೆ. ಹತ್ತಿಯಾದರೂ ಸ್ವಲ್ಪ ಮಟ್ಟಿಗೆ ಕೈ ಹಿಡಿಯುತ್ತದೆ ಎಂಬ ಭರವಸೆಯಲ್ಲಿದ್ದ ರೈತರಿಗೆ ಹತ್ತಿ ಬೆಲೆ ತೀವ್ರ ಇಳಿಕೆಯಾಗಿರುವುದು ನಿದ್ದೆಗೆಡಿಸಿದೆ. ಇನ್ನು ದರ ಏರಬಹುದು ಎಂದು ಮನೆಯಲ್ಲಿಟ್ಟುಕೊಂಡರೆ ಹಳದಿ ಬಣ್ಣಕ್ಕೆ ತಿರುಗಿ ಹತ್ತಿಯ ಗುಣಮಟ್ಟ ಕೆಡುತ್ತದೆ. ಹೀಗಾಗಿ ಹತ್ತಿ ಬೆಳೆಗಾರರು ಆತಂಕದಲ್ಲೇ ದಿನದೂಡುವಂತಾಗಿದೆ.**

- **ಕಳೆದ ಸಲ ಉತ್ತಮ ಬೆಲೆ ಸಿಕ್ಕಿದರಿಂದ ಈ ಬಾರಿ 2 ಲಕ್ಷ ಹೆಕ್ಟೇರ್‌ನಲ್ಲಿ ಹತ್ತಿ ಬೆಳೆದಿರುವ ರೈತರು**
- **ಮಳೆಯ ಕೊರತೆಯಿಂದ ಇಳುವರಿ ಕಡಿಮೆಯಗಿರುವ ಹೊತ್ತಲ್ಲೇ ಬೆಲೆ ಕುಸಿತ**
- **ಲಾಭ ಬೇಡ, ಹಾಕಿದ ಹಣ ಬಂದರೆ ಸಾಕು ಎನ್ನುವುದು ರೈತನ ಆಶಯ**
- **13 ಸಾವಿರವಿದ್ದ ಬೆಲೆ ಇದೀಗ 7 ರಿಂದ 8 ಸಾವಿರ ರು. ಗಳಿಗೆ ಇಳಿಕೆ**

**Source: Vishwavani, p.4, Dec.24, 2023**

# ಕೊಬ್ಬರಿ ಕನಿಷ್ಠ ಬೆಂಬಲ ಬೆಲೆ 300 ರೂ. ಹೆಚ್ಚಳ

**ಹೊಸದಿಲ್ಲಿ:** ಕೊಬ್ಬರಿ ಧಾರಣೆ ಕುಸಿತದಿಂದ ಸಂಕಷ್ಟಕ್ಕೆ ಸಿಲುಕಿರುವ ತೆಂಗು ಬೆಳೆಗಾರರ ನೆರವಿಗೆ ಧಾವಿಸಿರುವ



ಕೇಂದ್ರ ಸರಕಾರ, ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) ಹೆಚ್ಚಳ ಮಾಡಿದೆ. ಮಿಲ್ಲಿಂಗ್ ಕೊಬ್ಬರಿಯ ಕನಿಷ್ಠ ಬೆಂಬಲ ಬೆಲೆಯನ್ನು ಕ್ವಿಂಟಾಲ್‌ಗೆ 300 ರೂ., ಉಂಡೆ ಕೊಬ್ಬರಿಯ 'ಎಂಎಸ್‌ಪಿ'ಯನ್ನು ಕ್ವಿಂಟಾಲ್‌ಗೆ 250 ರೂ. ಏರಿಕೆ ಮಾಡಲಾಗಿದೆ.

ಆರ್ಥಿಕ ವ್ಯವಹಾರಗಳ ಕುರಿತಾದ ಸಂಪುಟ ಸಮಿತಿ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಇದರೊಂದಿಗೆ 2024ನೇ ಋತುವಿಗೆ ಮಿಲ್ಲಿಂಗ್ ಕೊಬ್ಬರಿಯ ಕನಿಷ್ಠ ಬೆಲೆಯು ಕ್ವಿಂಟಾಲ್‌ಗೆ 11,160 ರೂ.ಗೆ ಹೆಚ್ಚಳಗೊಂಡಿದೆ. ಇದೇ ವೇಳೆ, ಉತ್ತಮ ಗುಣಮಟ್ಟದ ಉಂಡೆ ಕೊಬ್ಬರಿ ಬೆಲೆ 12,000 ರೂ.ಗೆ ಏರಿಕೆಯಾಗಿದೆ. ಕೃಷಿ ವೆಚ್ಚಗಳು ಮತ್ತು ಬೆಲೆಗಳ ಆಯೋಗದ (ಸಿಎಸಿಪಿ) ಶಿಫಾರಸುಗಳು, ರಾಜ್ಯಗಳ ಅಭಿಪ್ರಾಯಗಳನ್ನು ಆಧರಿಸಿ ಈ ಏರಿಕೆ ಮಾಡಲಾಗಿದೆ ಎಂದು ಸರಕಾರ ತಿಳಿಸಿದೆ.

**Source: Vijayakarnataka, p.1, Dec 28, 2023**

# K'taka earns ₹25k cr from sugar sector

ENS @ Belagavi

STATING that the sugar industry will continue to prosper in the country even in the future, Sugar Minister Shivanand Patil informed that the state government has been getting revenue to the tune of Rs 25,000-35,000 crore from it.

Patil was handing over awards to sugar factories at a programme organised by S Nijalingappa Sugar Institute here on Friday, where he underlined the key role played by the sector in the global scientific revolution. "A large number of people were able to secure jobs from the sugar industry in India," he said.

Patil advised sugar factories to protect the larger interests of farmers in the state. He reminded them of a time when the country had to import sugar, but today, sugarcane is a major crop that has contributed to the country's economy. He added that Karnataka is in the second place in terms of growing sugarcane in the country at present, and is poised to attain the top spot.

Claiming that sugarcane was the only crop which fetched better dividends for farmers, Patil appealed to the latter to explore various modern scientific agriculture technologies to improve yield, besides practising traditional agricultural techniques.

Earlier, the minister presented awards to Sameerwadi Godavari Sugar Factory of Bagalkot and Halasiddanath Sugar Factory of Nipani for their technical discipline.

The first prize among the sugar factories (North-West region) was presented to Shivashakti Sugars, second to Krishna Sugars of Sankanatti and the third prize was bagged by Renuka Sugars of Munavalli. In the North-East region, KPR Sugars of Kalaburagi and Mahatma Gandhi SSKN Sugars of Kalaburagi bagged the first and second prizes, respectively.

**Source: The New Indian Express, 23 Dec, 2023., p.05**

# *New cotton variety a boon for farmers of drought-prone areas*

BOSKY KHANNA @ Bengaluru

WHILE Karnataka is reeling under drought and farmers crying foul over their losses, those cultivating cotton have a reason to smile.

The drought seems to have proved helpful for research on cotton. Researchers from Indian Council for Agricultural Research (ICAR)-Central Institute for Cotton Research (CICR) conducted a pilot study of cultivating high density cotton crops in Yadgir and Dharwad early this year on 175 hectares of land. They found high density cotton cultivation to be successful and helpful to farmers of drought-hit areas. With this success, the researchers have asked the union government to implement the same in the eight cotton growing states -- Maharashtra, Gujarat, Rajasthan, Madhya Pradesh, Andhra Pradesh, Telangana, Tamil Nadu and Karnataka.

Elaborating on the pilot study, ICAR-CICR Director Dr YG Prasad told The New Indian Express that usually three to eight quintals of cotton can be harvested from one acre. But with the high density cultivation, the yield will be 37-50% higher. Normally, 18,000 saplings are planted on one hectare, but under the pilot project, 74,000 saplings were planted. The sapling grows faster and in an aligned manner, so cotton picking is easier.

The saplings were grown in light soil (shallow soil where water holding capacity is also



less) in drought-prone areas and it was found to be ideal for cultivation. Ideally, a cotton plant will be ready for harvest in 180 days, but in the new format, it was ready in 150 days. The distance between the saplings was 19x15cm, Prasad said.

Rajesh S Patil, principal scientist (genetics and plant breeding) and head of University of Agricultural Sciences-Dharwad, said it is not BT cotton, but a new hybrid variety. Last year, the yield was good, but prices weren't. This year, there is a demand. But due to late sowing and poor monsoon, the crop has taken a hit by 30 to 40%. Ideally, per hectare 493kg lint can be harvested. One bale is equal to 170kg lint (the fibrous coat covering the cotton seeds).

Patil said the plots where the high density crop was grown showed positive results. However, the final market report on overall cotton production will be known in February-March, when the markets open.

Against the usual practice, sowing in Karnataka was done in August this year. The new high density cultivation will help farmers, the researchers said.

**Source: The New Indian Express, 28 Dec, 2023., p.05**

# KSDL ties up with 670 farmers for commercial cultivation on 3,586 acres

**Nagesh Prabhu**
BENGALURU

The State-run Karnataka Soaps and Detergents Ltd. (KSDL), which is facing a shortage of sandalwood oil essential for its flagship brand "Mysore Sandal" soap, has tied up with 670 farmers for commercial cultivation of 3,586 acres, largely in dry regions of north Karnataka, including Dharwad, Haveri, Gadag, to reduce its oil import bill. This is under the 'grow more sandalwood' policy.

The company will supply saplings to farmers under the principle of "share and prosper" basis. KSDL has planted 2,800 saplings in the Bengaluru and Mysuru division in the last few months.

On an average, sources said four to five kg of oil will be extracted from 100 kg of wood.

Oil is largely extracted from the root stem and branches of the tree. KSDL has one root from Kerala costing ₹1.25 crore, the official said.

Farmers can earn in the range of ₹30,000 to ₹50,000 per tree if it was 20 to 25 years old and grown in dry regions. The average price of wood per kg is around ₹6,000.

However, the official said many farmers are reluctant to grow sandalwood following a fear of theft. In fact, many sandalwood trees located in police stations, court and university campuses have been stolen, the official said.



Farmers can earn in the range of ₹30,000 to ₹50,000 per sandalwood tree if it was 20 to 25 years old and grown in dry regions. FILE PHOTO

**KSDL purchased 94 tonnes of wood from farmers last year but the wood quality was inferior, as farmers cut trees before it had grown fullly**

KSDL purchased 94 tonnes of wood from farmers in Karnataka last year but the wood quality was inferior, as farmers cut trees before it had grown fullly owing to a fear of theft.

"A national-level sandalwood policy is needed to ensure protected cultivation" sources maintained.

### Monetising land

Meanwhile, KSDL has planned to monetise its unutilised land by developing an office complex on its premises at Yeshwanthpur in Bengaluru, for providing space for offices of various government departments.

The company has 37.04 acres in Bengaluru and it has utilised only 7.12 acres. In Mysuru, SKDL has 33.16 acres and has utilised 24.15 acres, while in Shivamogga, the firm has 25.09 acres and utilised 11.03 acres, leaving 14.06 acres free.

### Huge vacancies

KSDL is likely to commence a recruitment drive to fill 771 vacant posts. It has sanctioned 985 posts, including both executive and non-executive posts. But it has only 214 regular executive and non-executive employees.

The company has hired a large number of employees on contract. It has introduced several measures to increase the work productivity of 1,860 employees by increasing the shifts. The production increased from 100 tonnes to 125 tonnes per day in the last few months, official sources said.

**Source: The Hindu, 24 Dec, 2023, p.6**

# Centre yet to hold K'taka drought-relief meeting

## Panel's Dec 23 Meeting Didn't Take Place

**BV.Shivashankar**
@timesgroup.com



**AWAITING AID:** In September, the state government declared 195 of 236 taluks drought-hit and later added 28 more taluks to the list

**Bengaluru:** The much-awaited meeting of the high-level committee (HLC) headed by Union home minister Amit Shah scheduled Saturday last (December 23) to decide on granting drought relief to Karnataka did not materialise.

Much to the chagrin of the state government, the Centre has not even communicated anything about postponement of the meeting and this is likely to escalate the ongoing political slugfest between Congress and BJP over the issue.

"There was no HLC meeting on December 23. No word from the government of India on this subject," said revenue minister Krishna Byregowda.

While it was the state government's grouse that the Centre was not responsive to its plea for drought relief of Rs 18,177 crore from the National Disaster Response Fund (NDRF), the HLC meeting was scheduled after chief minister Siddaramaiah along with revenue minister Gowda met both prime minister Narendra Modi and Shah in New Delhi last week and requested them to expedite the process of releasing grant.

Both Siddaramaiah and Byregowda had confirmed this saying Shah had told them that the meeting had been called on Saturday.

"The BJP functionaries of Karnataka unit want to blame us that we have betrayed Kannadigas, but our people know who has actually betrayed them. I personally met the PM and the Union home minister with our team and explained to them the plight of our farmers as we placed the request for Rs 18,177 crore relief. Our revenue minister met the Union agriculture minister and finance minister separately. But, the Centre has not yet released even a single paise," Siddaramaiah wrote in his Facebook post.

The state government on September 13 declared 195 of 236 taluks drought-hit and later added 28 more taluks to the list. An inter-ministerial team sent by the Centre studied drought situation in the state between October 5 and 9 and submitted its report.

It sent multiple memorandums seeking central relief on assessment of a total loss at around Rs 35,000 crore. But there was no NDRF grant barring Rs 929 crore released from the State Disaster Response Fund (SDRF) earmarked for all natural disasters to be witnessed in the entire 2023-24 fiscal.

"The Centre is committed to helping the distressed farmers and the HLC will definitely be convened," said Shobha Karandlaje, Union minister of state for agriculture. "While it is subject to procedure, the state has to do its bit first," she added.

The BJP's alliance partner Janata Dal (Secular) joined forces in attacking the Congress government. "The state government has failed to spend from the SDRF. It has just announced Rs 2,000 per farmer, while the amount is yet to be released. Congress must focus on drought relief in right earnest instead of blaming the Centre for political reasons," said JD(S) state president HD Kumaraswamy.

**Source: Times of India, 27 Dec, 2023, p.4**

Back to Contents

# Decentralisation

## ಸೀಮಾ ನಿರ್ಣಯ ಆಯೋಗದ ಶಿಫಾರಸಿಗೆ ಅಸ್ತು | ಪ್ರವರ್ಗವಾರು ಮೀಸಲು ಪ್ರಕಟ

# ಪಂಚಾಯಿತಿ ಎಲೆಕ್ಷನ್ ಸುಗಮ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದ ಜಿಲ್ಲಾ ಮತ್ತು ತಾಲೂಕು ಪಂಚಾಯಿತಿಗಳ ಕ್ಷೇತ್ರ ಮರುವಿಂಗಡಣೆ ಹಾಗೂ ಪ್ರವರ್ಗವಾರು ಮೀಸಲು ಕೊನೆಗೂ ಅಂತಿಮಗೊಂಡಿದೆ. ಈ ಸಂಬಂಧ ಕರ್ನಾಟಕ ಪಂಚಾಯತ್‌ರಾಜ್ ಸೀಮಾ ನಿರ್ಣಯ ಆಯೋಗದ ಶಿಫಾರಸನ್ನು ಸರಕಾರ ಅಂಗೀಕರಿಸಿದ್ದು, ಕೊಡಗು ಜಿಲ್ಲೆ ಹೊರತುಪಡಿಸಿ ಇತರ 30 ಜಿಲ್ಲಾ ಪಂಚಾಯತಿಗಳಿಗೆ ಒಟ್ಟು 1,101 ಸದಸ್ಯರು ಹಾಗೂ 234 ತಾಲೂಕು ಪಂಚಾಯಿತಿಗಳಿಗೆ 3,621 ಸದಸ್ಯರ ಸಂಖ್ಯೆಯನ್ನು ನಿರ್ಧರಿಸಿ ಅಧಿಸೂಚನೆ ಹೊರಡಿಸಿದೆ.

ಕ್ಷೇತ್ರ ಪುನರ್ ವಿಂಗಡಣೆ, ಮೀಸಲು ನಿಗದಿ ಸಮಸ್ಯೆ ಮತ್ತಿತರ ಕಾರಣಕ್ಕೆ ಸುಮಾರು ಎರಡೂವರೆ ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಜಿ.ಪಂ. ಮತ್ತು ತಾ.ಪಂ.ಗಳಿಗೆ ಚುನಾವಣೆ ನಡೆಸುವ ಹಾದಿ ಈ ಮೂಲಕ ಭಾಗಶಃ ಸುಸೂತ್ರವಾಗಿದೆ. ಸದಸ್ಯರ ಸಂಖ್ಯೆ ನಿರ್ಣಯಿಸುವ ಜತೆಗೆ ಪ್ರವರ್ಗವಾರು ಶೇ.33 ಹಾಗೂ ಶೇ.50 ಮಹಿಳಾ ಮೀಸಲು ನಿಗದಿಪಡಿಸಲಾಗಿದೆ. ಈ ಸಂಬಂಧ ಡಿ.16 ರಂದು ಸರಕಾರ ಅಧಿಸೂಚನೆ ಹೊರಡಿಸಲಾಗಿದೆ. ಕ್ಷೇತ್ರವಾರು ಮೀಸಲು ನಿಗದಿ ಪ್ರಕ್ರಿಯೆ ಇನ್ನೂ ಬಾಕಿ ಉಳಿದಿದೆ.

**ಜಿ.ಪಂ.ಗಳಿಗೆ 1,126 ಸದಸ್ಯರು**

ರಾಜ್ಯದ 31 ಜಿ.ಪಂ.ಗಳಿಗೆ ಒಟ್ಟು 1,126 ಸದಸ್ಯರ ಸಂಖ್ಯೆ ನಿರ್ಧರಿಸಿ ಸೀಮಾ ಆಯೋಗ ಶಿಫಾರಸು ಮಾಡಿತ್ತು. ಈ ಪೈಕಿ ಕೋರ್ಟ್ ಪ್ರಕರಣ ಬಾಕಿ ಇರುವ ಕೊಡಗು ಜಿಲ್ಲೆ ಹೊರತುಪಡಿಸಿ ಉಳಿದಂತೆ 30 ಜಿ.ಪಂಗಳಿಗೆ ಚುನಾಯಿತರಾಗಬೇಕಿರುವ 1,101 ಸದಸ್ಯರ ಸಂಖ್ಯೆಯನ್ನು ನಿರ್ಧರಿಸಲಾಗಿದೆ.




**ಮತ್ತೊಂದು ಹೆಜ್ಜೆ ಬಾಕಿ**

**ಜಿ.ಪಂ ಮತ್ತು ತಾ.ಪಂ.ಗಳಿಗೆ ಕ್ಷೇತ್ರವಾರು ಮೀಸಲು ನಿಗದಿ ಆಗಬೇಕಿದ್ದು, ಬಳಿಕ ಆಕ್ಷೇಪಣೆ ಆಹ್ವಾನಿಸಿ ಅಂತಿಮಗೊಳಿಸುವುದು ಬಾಕಿ ಇದೆ. ಈ ಪ್ರಕ್ರಿಯೆ ಯಾವಾಗ ಪೂರ್ಣಗೊಳ್ಳಲಿದೆ ಮತ್ತು ಬಹುನಿರೀಕ್ಷಿತ ಈ ಚುನಾವಣೆಗೆ ಯಾವಾಗ ಕಾಲ ಕೂಡಿಬರಲಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.**

ಅಂತೆಯೇ, ಕೊಡಗು ಜಿಲ್ಲೆ ಹೊರತುಪಡಿಸಿ ಉಳಿದಂತೆ 234 ತಾಲೂಕು ಪಂಚಾಯಿತಿಗಳಿಗೆ 3,621 ಸದಸ್ಯರ ಸಂಖ್ಯೆಯನ್ನು ನಿರ್ಧರಿಸಲಾಗಿದೆ.

ಪ್ರತಿ ಜಿ.ಪಂ. ಮತ್ತು ತಾ.ಪಂ.ಗಳಿಗೆ ನಿಗದಿಪಡಿಸಲಾದ ಒಟ್ಟು ಸದಸ್ಯರ ಸಂಖ್ಯೆಯಲ್ಲಿ ಶೇ.50 ಸ್ಥಾನಗಳನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಪ್ರವರ್ಗ –'ಅ' ಮತ್ತು 'ಬ' ಮೀಸಲಿರಿಸಲಾಗಿದೆ. ಉಳಿದ ಅರ್ಧದಷ್ಟು ಸ್ಥಾನಗಳು ಸಾಮಾನ್ಯ ವರ್ಗದ ಸ್ಥಾನಗಳೆಂದು ಪರಿಗಣಿಸಲಾಗಿದೆ. ಪ್ರತಿ ಪ್ರವರ್ಗದಲ್ಲಿ ಮಹಿಳೆಯರಿಗೆ ಶೇ.50 ಮೀಸಲು ನಿಗದಿಪಡಿಸಲಾಗಿದೆ.

**ದೀರ್ಘ ಕಸರತ್ತು**

ಜಿ.ಪಂ ಮತ್ತು ತಾ.ಪಂ.ಗಳಿಗೆ ಎರಡೂವರೆ ವರ್ಷಗಳ ಹಿಂದೆಯೇ ಚುನಾವಣೆ ನಡೆಯಬೇಕಿತ್ತು. ಕೋವಿಡ್ ಸಾಂಕ್ರಾಮಿಕದ ಬೆನ್ನಲ್ಲೇ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲು ಸಮಸ್ಯೆ ಚುನಾವಣೆಗೆ ತೊಡಕಾಗಿತ್ತು. 2021ರ ಆರಂಭದಲ್ಲಿ ರಾಜ್ಯ ಚುನಾವಣಾ ಆಯೋಗ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲು ನಿಗದಿ ಮಾಡಿ ಮತದಾರರ ಕರಡು ಪಟ್ಟಿಯನ್ನೂ ಪ್ರಕಟಿಸಿತ್ತು. ಆದರೆ, ಕ್ಷೇತ್ರ ಮರುವಿಂಗಡಣೆ ಬೇಕಾಬಿಟ್ಟಿ ನಡೆದಿದೆ ಎಂದು ವ್ಯಾಪಕ ಆಕ್ಷೇಪಗಳು ವ್ಯಕ್ತವಾದ ಹಿನ್ನೆಲೆಯಲ್ಲಿ ಸರಕಾರ 'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ 1993' ಕ್ಕೆ ತಿದ್ದುಪಡಿ ತಂದು 'ಕರ್ನಾಟಕ ಪಂಚಾಯಿತಿ ರಾಜ್ ಸೀಮಾ ನಿಯಂತ್ರಣ ಆಯೋಗ'ವನ್ನು ರಚಿಸಿತ್ತು.

ನಿವೃತ್ತ ಐಎಎಸ್ ಅಧಿಕಾರಿ ಲಕ್ಷ್ಮೀನಾರಾಯಣ ನೇತೃತ್ವದ ಆಯೋಗವು ಜಿ.ಪಂ ಮತ್ತು ತಾ.ಪಂ.ಗಳಿಗೆ ಚುನಾಯಿತರಾಗಬೇಕಾದ ಸದಸ್ಯರ ಸಂಖ್ಯೆಯನ್ನು ನಿರ್ಧರಿಸಿ, ಪ್ರವರ್ಗವಾರು ಮೀಸಲು ನಿಗದಿಪಡಿಸಿ ಸರಕಾರಕ್ಕೆ ಶಿಫಾರಸು ಮಾಡಿತ್ತು. ಮತ್ತೊಬ್ಬ ಐಎಎಸ್ ಅಧಿಕಾರಿ ಎಂ.ಆರ್.ಕಾಂಬ್ಳೆ ನೇತೃತ್ವದ ಸಮಿತಿ ಪರಿಶೀಲನೆ ನಡೆಸಿದ ಬಳಿಕ ಈ ಶಿಫಾರಸುಗಳನ್ನು ಸರಕಾರ ಒಪ್ಪಿ ಅಧಿಸೂಚನೆ ಹೊರಡಿಸಿದೆ.

**Source: Vijayakarnataka, p.3, Dec.27, 2023**

ರಾಜ್ಯಾದ್ಯಂತ ಚಾಲನೆಗೆ ಸರಕಾರ ಸಿದ್ಧತೆ | ಇಲಾಖೆ ಪೇಪರ್‌ಲೆಸ್ ಆದ ಮೇಲೆ ಒತ್ತಡ ಕಡಿಮೆ

ಜನರಿಗೆ ಆನ್‌ಲೈನ್‌ನಲ್ಲಿ ಸಿಗಲಿವೆ ದಾಖಲೆ | ದಾಖಲೆ ತಿದ್ದಿ ವಂಚಿಸುವ ಪ್ರಕರಣಗಳಿಗೆ ಕಡಿವಾಣ

# ಭೂದಾಖಲೆ ಸಂಪೂರ್ಣ ಡಿಜಿಟಲ್

■ **ಕೆಂಚೇಗೌಡ** ಬೆಂಗಳೂರು
kenche.gowda@timesgroup.com

## ಯಾವುದಕ್ಕೆ ಎಷ್ಟು ವೆಚ್ಚ?

| | |
|---|---|
| **31.55** | ಕೋಟಿ ರೂ.: ಭೂದಾಖಲೆಗಳ ಕಂಪ್ಯೂಟರೀಕರಣಕ್ಕೆ |
| **79.58** | ಕೋಟಿ ರೂ.: ಸ್ಕ್ಯಾನಿಂಗ್, ಡಿಜಿಟಲೈಜೇಷನ್, ಕಂಪ್ಯೂಟರೀಕರಣಕ್ಕೆ |
| **118** | ಕೋಟಿ ರೂ.: ಎಲ್ಲ 236 ತಾಲೂಕುಗಳಲ್ಲಿ ರೆಕಾರ್ಡ್ ರೂಂಗೆ |
| **516** | ಕೋಟಿ ರೂ.: ಸರ್ವೆ ಮತ್ತು ಮರು ಸರ್ವೆ ಕಾರ್ಯಕ್ಕೆ |
| **3.38** | ಕೋಟಿ ರೂ.: ರೆವಿನ್ಯೂ ಕೋರ್ಟ್‌ಗಳ ಕಂಪ್ಯೂಟರೀಕರಣಕ್ಕೆ |
| **19.44** | ಕೋಟಿ ರೂ.: ಭೂದಾಖಲೆ ಜತೆ ಆಧಾರ್ ಜೋಡಣೆಗೆ |
| **4.91** | ಕೋಟಿ ರೂ.: ಕಲಬುರಗಿ, ಮೈಸೂರಿನಲ್ಲಿ ಡಿಜಿಟಲ್ ಭೂದಾಖಲೆಗಳ ಘಟಕಕ್ಕೆ |
| **03** | ಕೋಟಿ ರೂ.: ರಾಜ್ಯ ಮಟ್ಟದ ಡಾಟಾಬೇಸ್ ಸ್ಥಾಪನೆಗೆ |

## ಡಿಜಿಟಲೀಕರಣದ ಪ್ರಮುಖಾಂಶ

- ಡ್ರೋನ್ ಮೂಲಕ ಭೂಮಿ ಮರು ಸರ್ವೆ
- ಭೂದಾಖಲೆಗಳ ಸಂಪೂರ್ಣ ಗಣಕೀಕರಣ
- ಆಧುನಿಕ ದಾಖಲೆ ಕೊಠಡಿಗಳ ಸ್ಥಾಪನೆ
- ರಾಜ್ಯ ಮಟ್ಟದ ಡಾಟಾ ಬೇಸ್ ಸ್ಥಾಪನೆ
- ಭೂದಾಖಲೆ ಡಾಟಾಬೇಸ್ ಜತೆ ಆಧಾರ್ ಲಿಂಕ್
- ರೆವಿನ್ಯೂ ಕೋರ್ಟ್‌ಗಳ ಕಂಪ್ಯೂಟರೀಕರಣ ಮತ್ತು ಭೂದಾಖಲೆ ಜೋಡಣೆ

ರೆವಿನ್ಯೂ ದಾಖಲೆಗಳ ಡಿಜಿಟಲೀಕರಣದಿಂದ ಆಸ್ತಿ ದಾಖಲೆಗಳ ಫೋರ್ಜರಿ ತಪ್ಪಲಿದ್ದು, ವಂಚನೆಗೆ ಕಡಿವಾಣ ಬೀಳಲಿದೆ. ಆರ್‌ಟಿಸಿಗಳಿಗೆ ಆಧಾರ್ ಜೋಡಣೆಯಾಗಲಿದೆ. ದಾಖಲೆಗಳಿಗಾಗಿ ಜನರ ಅಲೆದಾಟ ನಿಲ್ಲಲಿದೆ. ತಾಲೂಕು ಕಚೇರಿಗಳ ಮೇಲಿನ ಒತ್ತಡ ಕಡಿಮೆಯಾಗಲಿದೆ.

**-ಕೃಷ್ಣ ಬೈರೇಗೌಡ** ಕಂದಾಯ ಸಚಿವ

ಆಸ್ತಿ ದಾಖಲೆ ತಿದ್ದುವ ಮೂಲಕ ನಡೆಯುತ್ತಿರುವ ವಂಚನೆ, ಫೋರ್ಜರಿಗಳಿಗೆ ಸಂಪೂರ್ಣ ಕಡಿವಾಣ ಹಾಕಿ, ಸಾರ್ವಜನಿಕರು ಅವಶ್ಯಕ ಕಂದಾಯ ದಾಖಲೆಗಳಿಗಾಗಿ ತಾಲೂಕು ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಲು ರಾಜ್ಯಾದ್ಯಂತ ದಾಖಲೆಗಳ ಡಿಜಿಟಲೀಕರಣ ಪ್ರಕ್ರಿಯೆಯನ್ನು ಸರಕಾರ ಕೈಗೆತ್ತಿಕೊಂಡಿದೆ.

ಎಲ್ಲ ರೆಕಾರ್ಡ್ ರೂಂಗಳನ್ನು ಡಿಜಿಟಲೈಜ್ ಮಾಡಿ ಭೂದಾಖಲೆಗಳೊಂದಿಗೆ ಸಂಬಂಧಪಟ್ಟ ಮಾಲೀಕರ ಆಧಾರ್ ಜೋಡಣೆ ಕಾರ್ಯವನ್ನು ಜನವರಿಯಿಂದ ಆಂದೋಲನ ರೂಪದಲ್ಲಿ ಆರಂಭಿಸಲಾಗುತ್ತಿದೆ.

ಡಿಜಿಟಲ್ ಇಂಡಿಯಾ ಭೂದಾಖಲೆಗಳ ಆಧುನೀಕರಣ ಕಾರ್ಯಕ್ರಮದಡಿ (ಡಿಐಎಲ್‌ಆರ್‌ಎಂಪಿ) ಕಂದಾಯ ಇಲಾಖೆ ಕೈಗೆತ್ತಿಕೊಂಡಿರುವ ಈ ಯೋಜನೆಯಡಿ ಎರಡು ವರ್ಷಗಳಲ್ಲಿ ರಾಜ್ಯದ ಎಲ್ಲ 236 ತಾಲೂಕು ಕಚೇರಿಗಳ ರೆಕಾರ್ಡ್ ರೂಂಗಳನ್ನು ಡಿಜಿಟಲೀಕರಣ ಗೊಳಿಸಲಾಗುತ್ತಿದೆ. 20 ವರ್ಷಗಳ ಹಿಂದೆ ಚಾಲನೆ ಪಡೆದುಕೊಂಡಿದ್ದ 'ಭೂಮಿ' ಯೋಜನೆಯ ಮುಂದುವರಿದ ಭಾಗವಾಗಿದೆ. ಈ ಡಿಜಿಟಲೀಕರಣದಿಂದ ಕಂದಾಯ ಕಚೇರಿಗಳ ಮೇಲಿನ ಒತ್ತಡ ತಗ್ಗಲಿದ್ದು, ಜನಸಾಮಾನ್ಯರಿಗೆ ಅವಶ್ಯಕ ಆಸ್ತಿ ದಾಖಲೆಗಳು ಆನ್‌ಲೈನ್‌ನಲ್ಲಿ ಸಿಗಲಿವೆ.

ಡ್ರೋನ್ ಬಳಕೆ ಮೂಲಕ ಸ್ವತ್ತುಗಳ ಮರುಸಮೀಕ್ಷೆ ನಡೆಸಿ, ದಾಖಲೆಗಳನ್ನು ಸ್ಕ್ಯಾನ್ ಮಾಡಿ ಆನ್‌ಲೈನ್‌ನಲ್ಲಿ ಸಾರ್ವಜನಿಕರಿಗೆ ಸಿಗುವಂತೆ ಮಾಡಲಾಗುತ್ತಿದೆ. ಸರ್ವೆ ನಕ್ಷೆಗಳೊಂದಿಗೆ ದಾಖಲೆಗಳನ್ನು ರೆಕಾರ್ಡ್ ರೂಂಗಳ ಡಿಜಿಟಲೀಕರಣದಿಂದ ತಾಲೂಕು ಕಚೇರಿಗಳ ಆಡಳಿತ ಸುಸೂತ್ರವಾಗಲಿದ್ದು, ಬಹುತೇಕ ಕಾಗದ ರಹಿತ ಆಗಲಿದೆ. ಭೂದಾಖಲೆಗಳ ಡಾಟಾಬೇಸ್‌ನೊಂದಿಗೆ ಆಧಾರ್ ಸಂಖ್ಯೆ ಜೋಡಣೆಯಿಂದ ಆರ್‌ಟಿಸಿ ಸೇರಿ ಆಸ್ತಿಗಳ ಎಲ್ಲ ದಾಖಲೆ ಸಾರ್ವಜನಿಕರಿಗೆ ಆನ್‌ಲೈನ್‌ನಲ್ಲಿ ದೊರಕಲಿವೆ.

**ಪೂರ್ಣ ಸಿದ್ಧತೆ:** ಕಂದಾಯ ದಾಖಲೆಗಳ ಡಿಜಿಟಲೀಕರಣ ಬಿಡಿಬಿಡಿಯಾಗಿ ಕೆಲವು ತಾಲೂಕುಗಳಲ್ಲಿ ಆರಂಭವಾದರೂ, ನಿರೀಕ್ಷಿತ ಮಟ್ಟದಲ್ಲಿ ಆಗಿರಲಿಲ್ಲ. ಹೀಗಾಗಿ, ಕಂದಾಯ ಇಲಾಖೆ ಕಾರ್ಯವೈಖರಿಯಲ್ಲಿ ಸಮಗ್ರ ಸುಧಾರಣೆ ತಂದು ಜನಸ್ನೇಹಿ ವ್ಯವಸ್ಥೆಜಾರಿ ಮೂಲಕ ಸುಸೂತ್ರ ಮತ್ತು ಪಾರದರ್ಶಕತೆಗಾಗಿ ಭೂದಾಖಲೆಗಳ ಸಂಪೂರ್ಣ ಡಿಜಿಟಲೀಕರಣವನ್ನು ಆಂದೋಲನ ರೂಪದಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದೆ ಎಂದು ಕಂದಾಯ ಇಲಾಖೆ ಉನ್ನತ ಮೂಲಗಳು ತಿಳಿಸಿವೆ.



**ಕೇಂದ್ರದ ನೆರವು:** ಡಿಐಎಲ್‌ಆರ್‌ಎಂಪಿನ ಉದ್ದೇಶಕ್ಕೆ ಲಭ್ಯವಿರುವ ಅನುದಾನದ ಸದ್ಬಳಕೆಗೆ ನಿರ್ಧರಿಸಲಾಗಿದೆ. ರಾಜ್ಯಕ್ಕೆ ಈ ಯೋಜನೆಯಡಿ 229 ಕೋಟಿ ರೂ. ಅನುದಾನ ಲಭ್ಯವಿದ್ದು, ಈ ಸಾಲಿಗೆ 62 ಕೋಟಿ ರೂ. ಮಂಜೂರಾಗಿದೆ. ಈ ಪೈಕಿ 42 ಕೋಟಿ ರೂ. ಬಿಡುಗಡೆಯಾಗಿದೆ. ಮಾರ್ಚ್ ಬಳಿಕ ಮತ್ತೆ 100 ಕೋಟಿ ರೂ. ಬಿಡುಗಡೆಯಾಗುತ್ತಿದೆ. ಡಿಜಿಟಲೀಕರಣಕ್ಕಾಗಿ ಹೊರಗುತ್ತಿಗೆ ಮೂಲಕ ಹೆಚ್ಚುವರಿ ಸಿಬ್ಬಂದಿ ನೇಮಕಕ್ಕೂ ಸೂಚಿಸಿದೆ.

**ಡಿಜಿಟಲೈಜ್ ಹೇಗೆ?:** ಡ್ರೋನ್ ಮೂಲಕ ಭೂಮಿ ಮರು ಸರ್ವೆ ಮಾಡಿ, ನಕ್ಷೆಗಳನ್ನು ಸ್ಕ್ಯಾನ್ ಮಾಡಲಾಗುತ್ತದೆ ಮತ್ತು ಗಣಕೀಕೃತ ಭೂದಾಖಲೆಗಳೊಂದಿಗೆ ಜೋಡಿಸಲಾಗುತ್ತದೆ. ಈ ಡಾಟಾಬೇಸ್‌ನೊಂದಿಗೆ ಆಧಾರ್ ಸಂಖ್ಯೆ ಜೋಡಣೆಯಾಗುತ್ತದೆ. ತಾಲೂಕು ಮಟ್ಟದ ರೆಕಾರ್ಡ್ ರೂಂಗಳನ್ನು ಆಧುನೀಕರಣಗೊಳಿಸಿ, ರಾಜ್ಯ ಮಟ್ಟದ ಡಾಟಾಬೇಸ್ ಸ್ಥಾಪಿಸಲಾಗುತ್ತದೆ. ಭೂವ್ಯಾಜ್ಯಗಳ ಇತ್ಯರ್ಥವೂ ಸುಲಭವಾಗುವಂತೆ ರೆವಿನ್ಯೂ ಕೋರ್ಟ್‌ಗಳನ್ನು ಕಂಪ್ಯೂಟರೀಕರಣ ಮಾಡಿ ಭೂದಾಖಲೆಗಳನ್ನು ಜೋಡಣೆ ಮಾಡಲಾಗುತ್ತದೆ. ಈ ಯೋಜನೆ ನಿಗದಿಯಂತೆ ಪೂರ್ಣಗೊಂಡರೆ ಮುಂದಿನ 2 ವರ್ಷಗಳ ಬಳಿಕ ಇಲಾಖೆ ಕಾರ್ಯವೈಖರಿ ಸಂಪೂರ್ಣ ಪಾರದರ್ಶಕವಾಗಲಿದ್ದು, ದಾಖಲೆ ತಿದ್ದಿ ವಂಚಿಸುವುದು ಮತ್ತಿತರ ಅಕ್ರಮಗಳಿಗೆ ಕಡಿವಾಣ ಬೀಳಲಿದೆ ಎಂದು ಕಂದಾಯ ಸಚಿವರ ಕೃಷ್ಣ ಬೈರೇಗೌಡ 'ವಿಕ'ಗೆ ತಿಳಿಸಿದ್ದಾರೆ.

**Source: Vijaya Karnataka, 26 Dec, 2023, p.10**

Separation of powers between the legislature, executive and judiciary is an ancient doctrine. But it is not set in stone. It has evolved to suit the needs of the times

# EVOLUTION OF THE RULE OF 3 IN GOVERNANCE




FALI S NARIMAN

Constitutional jurist and senior advocate to the Supreme Court





SOURAV ROY

SEPARATION of powers was once thought to be the only sensible rule of constitutional behaviour. Fundamental differences between the three branches of government—the legislature, the executive and the judiciary—prompted the conclusion that they should be separate and distinct. But this does not reflect how democratic governments around the world actually work.

In 1920, British historian Albert Pollard wrote in his book, *The Evolution of Parliament*, that the doctrine of separation of powers in politics "was an ingenious attempt to reduce the infinite complexity of government to the subtle simplicity of a constitutional Rule of Three".

In the first half of the 20th century, academics—who were generally hostile to the traditional tripartite theory of separation of powers—argued for a system of government based on only two functions: policy and administration. This is because the problem at the centre of constitutional government today is how to achieve a balance between the different branches—a balance that will safeguard the freedom of the individual and at the same time ensure that governments provide their citizens with essential services, without which modern-day society cannot survive.

The initial doctrine of separation of powers had its roots in antiquity. Greek philosopher and polymath Aristotle (384-322 BCE) first mentioned the idea of "a mixed government" in his treatise *Politics*. Greek historian Polybius (200-118 BCE) later explained in some detail the system of checks and balances, crediting Spartan king Lycurgus with having established the first government of this kind.

In more recent times, scholars, governments and constitutions have approached the subject in different ways, adding layers of understanding to it.

One of the earliest and clearest statements of the separation of powers was propounded by French philosopher and judge Montesquieu (1689-1755) in his famous book, *The Spirit of the Laws* (1748). He noted: "When the legislative and executive powers are united in the same person, or in the same body of magistrates, there can be no liberty... there is no liberty if the power of judging is not separated from the legislative and executive... There would be an end to everything, if the same man or the same body... were to exercise those three powers."

By way of illustration, he added, "Among the Turks, where the three powers are united in the person of the sultan, an atrocious despotism reigns."

THROUGH THE LOOKING GLASS

Since the British constitutional system functioned quite smoothly between the king, parliament and the courts, Montesquieu boldly asserted that separation of powers was a necessary, if not sufficient, condition for liberty "since its absence promotes tyranny".

English philosopher John Locke (1632-1704) reasoned about the need for separation of powers within a monarchial state: "It may be too great a temptation to human frailty for the same persons who have the power of making laws to also have in their hands the power to execute them, whereby they may exempt themselves from obedience to the laws they make, and suit the law both in its making and execution to their own private advantage."

As to why the doctrine of separation of powers—more accurately, of shared powers—was important, and was considered worth fighting for, was also emphasised by the author of one of the *Federalist Papers*, which were a precursor to the adoption of the Constitution of the United States of America in 1789—the modern world's shortest written constitution, of less than 8,000 words. In *Federalist Paper No 51*, James Madison wrote: "In framing a government which is to be administered by men over men, the great difficulty lies in this—you must first enable the government to control the governed; and in the next place, oblige it to control itself. A dependence on the people is no doubt the primary control on the government; but experience has taught mankind the necessity of taking auxiliary precautions."

In the Constitution of India, believed to be the world's longest document of governance after the Constitution of the state of Alabama in the US, the doctrine of separation of powers is indeed recognised, "but not in its absolute rigidity", observed a Constitution bench of India's Supreme Court way back in 1955.

The court added: "But the functions of the different parts or branches of government are sufficiently differentiated, and consequently, it could be confidently said that our Constitution does not contemplate assumption by one organ, or part of the State, of functions that essentially belong to another."

Separation of powers alone does not operate as a canonical principle of constitutionalism. In an article published in the *Boston College Law Review* in March 2013, law professor Jeremy Waldron proposed a close-knit set of five principles that are designed to work both separately and together. The principle of the separation of the functions of government from one another (the separation of powers principle); the principle that warns against the concentration of too much political power in the hands of any one person, group or agency (the division of power principle); the principle that requires the ordinary concurrence of one governmental entity in the actions of another, and thus permits one entity to check or veto the actions of another (the checks and balances principle); the principle that requires laws to be enacted by votes in two coordinate legislative assemblies (the bicameralism principle); and the principle that distinguishes between powers assigned to the federal government and powers reserved for states (the federalism principle).

None of these 'principles', of course, are made enforceable in written constitutions, because every written constitution divides power in its own particular way.

The principle of separation of powers continues to survive in 2023-24, but under its more appropriate umbrella term—the division of powers.

(falinariman@gmail.com)

**Source: The New Indian Express, 28 Dec, 2023, p.8**

Back to Contents

ವಿಜಯವಾಣಿ

# ರಾಜ್ಯದ ಸ್ವಂತ ತೆರಿಗೆ ಆದಾಯದಲ್ಲಿ ಬೆಳವಣಿಗೆ

## ಹೆಚ್ಚುವರಿ ತೆರಿಗೆ ಸಂಗ್ರಹಣೆ ಅವಕಾಶಗಳ ಪರಿಶೀಲನೆಗೆ ಸಲಹೆ | ಗ್ಯಾರಂಟಿ ಅನುಷ್ಠಾನಕ್ಕೆ ಶ್ಲಾಘನೆ

■ **ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ಪ್ರಸಕ್ತ ವರ್ಷದ ಮೊದಲಾರ್ಧದಲ್ಲಿ ರಾಜ್ಯ ಸ್ವಂತ ತೆರಿಗೆ ಆದಾಯವು ಶೇಕಡ 15ರಷ್ಟು ಬೆಳವಣಿಗೆ ಕಂಡಿದೆ. ಆದಾಗ್ಯೂ ವಾಣಿಜ್ಯ ತೆರಿಗೆ, ಅಬಕಾರಿ, ನೋಂದಣಿ ಮತ್ತು ಮುದ್ರಾಂಕ, ನೋಂದಣಿಯೇತರ ಆದಾಯ, ತೆರಿಗೆಯೇತರ ರಾಜಸ್ವ ಸ್ವೀಕೃತಿಗಳ ಮೂಲಕ ಹೆಚ್ಚು ಸಂಪನ್ಮೂಲ ಕ್ರೋಡೀಕರಿಸಲು ಅವಕಾಶಗಳಿದ್ದು, ಅವುಗಳನ್ನು ಗಂಭೀರವಾಗಿ ಪರಿಶೀಲನೆ ಮಾಡುವಂತೆ ವಿತ್ತೀಯ ನಿರ್ವಹಣೆ ಮತ್ತು ಪರಿಶೀಲನಾ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ವಿಧಾನಮಂಡಲದಲ್ಲಿ ಗುರುವಾರ ಮಂಡನೆಯಾದ ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿಯಲ್ಲಿ ಈ ಅಂಶವನ್ನು ಒತ್ತಿ ಹೇಳಲಾಗಿದೆ. ವಿಧಾನಸಭೆಯಲ್ಲಿ ಮುಖ್ಯಮಂತ್ರಿಗಳ ಪರವಾಗಿ ಕಾನೂನು ಸಚಿವ ಎಚ್.ಕೆ.ಪಾಟೀಲ ಈ ವರದಿಯನ್ನು ಮಂಡಿಸಿದರು.

ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದಲ್ಲಿ ರಾಜ್ಯ ಸ್ವಂತ ತೆರಿಗೆ ಆದಾಯ ಶೇ.15 ರಷ್ಟು ಬೆಳವಣಿಗೆಯಾಗಿರುವುದನ್ನು ವರದಿ ಉಲ್ಲೇಖಿಸಿದೆ. ಜಿಎಸ್‌ಟಿ ಸಂಗ್ರಹಣೆ ಶೇ.18 ರಷ್ಟು ಬೆಳವಣಿಗೆ ಸಾಧಿಸಿದೆ. ಕೇಂದ್ರ ಜಿಎಸ್‌ಟಿ ಸಂಗ್ರಹಣೆ ಶೇ.8 ರಷ್ಟಿದ್ದರೆ, ರಾಜ್ಯ ಜಿಎಸ್‌ಟಿ ಬೆಳವಣಿಗೆ ಉತ್ತಮವಾಗಿದೆ.

ತೆರಿಗೆ ಮೂಲದ ರಾಜಸ್ವ ಸ್ವೀಕೃತಿಯ ಜತೆಗೆ ತೆರಿಗೆಯೇತರ ರಾಜಸ್ವ ಸ್ವೀಕೃತಿಗಳ ಬಗ್ಗೆಯೂ ವರದಿ ಕೆಲವು ಶಿಫಾರಸುಗಳನ್ನು




ನೀಡಿದೆ. ಗಣಿಗಾರಿಕೆ ಗುತ್ತಿಗೆದಾರರಿಗೆ ಇ-ಹರಾಜು ನಂತರದ ಪ್ರಕ್ರಿಯೆ ಸುಗಮಗೊಳಿಸಬೇಕು, ಬಿಲ್ಡಿಂಗ್ ಸ್ಟೋನ್, ಗ್ರಾನೈಟ್ ಮುಂತಾದ ಉಪಖನಿಜಗಳ ಗಣಿಗಾರಿಕೆಯ ಮೌಲ್ಯಮಾಪನ ಮಾಡಲು ಡ್ರೋನ್/ಉಪಗ್ರಹ ದತ್ತಾಂಶಗಳನ್ನು ಉಪಯೋಸಬೇಕು, ಸಾಮ್ಯತೆ ಇರುವ ರಾಜ್ಯಗಳ ಮಾನದಂಡ ಅನುಸರಿಸಿ ಖನಿಜಗಳ ಮೇಲಿನ ರಾಜಧನ ಪರಿಷ್ಕರಿಸಬೇಕು, ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡಿಸಲು ಕ್ರಮ ವಹಿಸಬೇಕು ಎಂದು ಸಲಹೆ ನೀಡಿದೆ.

ರಾಜ್ಯದ ಅಭಿವೃದ್ಧಿ ಹಾಗೂ ಕಲ್ಯಾಣ ಕಾರ್ಯಕ್ರಮಗಳಿಗೆ ಹಣ ಕ್ರೋಡೀಕರಿಸಲು ಅನುತ್ಪಾದಕ ವೆಚ್ಚ ಕಡಿಮೆ ಮಾಡಬೇಕು, ಅನಗತ್ಯ ಹುದ್ದೆ ಗುರುತಿಸುವುದು ಅವಶ್ಯವೆಂದು ಸಮಿತಿ ಹೇಳಿದೆ. ಅನರ್ಹ ಕುಟುಂಬಗಳನ್ನು ಬಿಪಿಎಲ್ ವ್ಯಾಪ್ತಿಯಿಂದ ಬೇರ್ಪಡಿಸಿ ಸಹಾಯಧನದ ಹೊರೆ ಕಡಿಮೆ ಮಾಡಿಕೊಳ್ಳಬೇಕು, ಹೆಚ್ಚಿದ ವಿದ್ಯುತ್ ಉತ್ಪಾದನಾ ವೆಚ್ಚದಿಂದ ವಿದ್ಯುತ್ ಕಂಪನಿಗಳ ಸ್ಥಿತಿಗತಿ ಸುಧಾರಣೆಗೆ ಕ್ರಮ ಕೈಗೊಳ್ಳಬೇಕು, ಆಸ್ತಿ ನಗದೀಕರಣದಿಂದ ರಾಜ್ಯ ಸರ್ಕಾರಕ್ಕೆ ಹೆಚ್ಚು ಆದಾಯ ಬರುವುದರಿಂದ ಹಾಗೂ ರಾಜ್ಯದಲ್ಲಿ ಹೂಡಿಕೆ ಹೆಚ್ಚಾಗುವುದರಿಂದ ಆಸ್ತಿ ನಗದೀಕರಣ ಪ್ರಕ್ರಿಯೆಯನ್ನು ತ್ವರಿತಗೊಳಿಸಬೇಕು ಎಂದು ಸಮಿತಿ ನಿರ್ದೇಶಿಸಿದೆ.

**ಗ್ಯಾರಂಟಿ ಅನುಷ್ಠಾನ ಶ್ಲಾಘನೆ:** ಸರ್ಕಾರದ ಐದು ಮಹತ್ವಾಕಾಂಕ್ಷಿ ಗ್ಯಾರಂಟಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಇರುವ ಸಂಕೀರ್ಣತೆಗಳನ್ನು ಅಲ್ಪಾವಧಿಯಲ್ಲೇ ನಿವಾರಿಸಿ ಹಾಗೂ ವಿತ್ತೀಯ ಕೊರತೆ ಶೇ.3 ರಷ್ಟು ಮಿತಿ ಉಲ್ಲಂಘಿಸದೆ ಗ್ಯಾರಂಟಿ ಯೋಜನೆಗಳ ಜಾರಿಗೆ ಅಗತ್ಯ ಸಂಪನ್ಮೂಲ ಕ್ರೋಡೀಕರಿಸಲು ಕೈಗೊಂಡ ಆರ್ಥಿಕ ಇಲಾಖೆಯ ಪ್ರಯತ್ನವನ್ನು ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನೆಯಲ್ಲಿ ಶ್ಲಾಘಿಸಲಾಗಿದೆ.

**ಯಾವುದೇ ಸಾಲ ಪಡೆದಿಲ್ಲ:** ಪ್ರಸಕ್ತ ಹಣಕಾಸು ವರ್ಷದಲ್ಲಿ ಮುಕ್ತ ಮಾರುಕಟ್ಟೆಯಿಂದ 78,363 ಕೋಟಿ ರೂ. ಸಾಲ ಪಡೆಯುವುದಾಗಿ ಅಂದಾಜಿಸಲಾಗಿತ್ತು. ಪ್ರಥಮಾರ್ಧದಲ್ಲಿ ಯಾವುದೇ ಸಾಲ ಪಡೆದಿಲ್ಲ. ರಾಜ್ಯವು ಆರ್‌ಬಿಐ ಸಲಹೆ ನೀಡಿರುವಂತೆ ಗ್ಯಾರಂಟೀ ರಿಡಂಪ್ಶನ್ ಫಂಡ್(ಜಿಆರ್‌ಎಫ್) ರೂಪಿಸಿದೆ. ಮತ್ತು ಹೂಡಿಕೆಯನ್ನು ಮಾಡುವ ಮೂಲಕ ಈ ನಿಧಿಯ ಮೊತ್ತವನ್ನು ಹೆಚ್ಚಿಸಿ ಯಾವುದೇ ಅನಿಶ್ಚಿತ ಸಂದರ್ಭ ಬಂದಲ್ಲಿ ಅದನ್ನು ಬಳಸಿಕೊಳ್ಳಲಿದೆ.

Bengaluru Edition
Dec 15, 2023 Page No. 10
Powered by : eReleGo.com

**Source: Vijayavani, p.10, Dec.27, 2023**

**ಹೊಸ ನಿಯಮ?** ಅಕ್ರಮ ಬಡಾವಣೆ ನಿರ್ಮಿಸುವವರಿಗೆ ಜೈಲು ಶಿಕ್ಷೆ?

# ರೆವಿನ್ಯೂ ಸೈಟ್‌ನಲ್ಲಿ ಮನೆ: ದುಪ್ಪಟ್ಟು ತೆರಿಗೆ?

## ಸಚಿವ ಸಂಪುಟ ಉಪಸಮಿತಿ ಸಭೆಯಲ್ಲಿ ಮಹತ್ವದ ಚರ್ಚೆ | ಶೀಘ್ರ ಶಿಫಾರಸು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಭೂ ಪರಿವರ್ತನೆ ಹಾಗೂ ನಕ್ಷೆ ಮಂಜೂರಾತಿ ಇಲ್ಲದೆ ನಿಯಮ ಉಲ್ಲಂಘಿಸಿ ಕಂದಾಯ ನಿವೇಶನಗಳಲ್ಲಿ ನಿರ್ಮಿಸಿರುವ ಕಟ್ಟಡಗಳ ಮಾಲೀಕರಿಂದ ದಂಡ ಹಾಗೂ ದುಪ್ಪಟ್ಟು ಆಸ್ತಿ ತೆರಿಗೆ ವಸೂಲಿ ಮಾಡುವ ಕುರಿತು ಬಿಬಿಎಂಪಿ ಮಾದರಿಯಲ್ಲೇ ರಾಜ್ಯಾದ್ಯಂತ ಏಕರೂಪ ತೆರಿಗೆ ನಿಯಮ ಜಾರಿಗೊಳಿಸುವ ಕುರಿತು ಗುರುವಾರ ನಡೆದ ಸಚಿವ ಸಂಪುಟ ಉಪ ಸಮಿತಿ ಸಭೆಯಲ್ಲಿ ಚರ್ಚೆ ನಡೆಸಲಾಗಿದೆ.

ಅಲ್ಲದೆ, ಇನ್ನು ಮುಂದೆ ಪರಿವರ್ತನೆ, ನಕ್ಷೆ ಮಂಜೂರಾತಿ ಇಲ್ಲದೆ ಅಕ್ರಮ ಬಡಾವಣೆ ನಿರ್ಮಾಣ ಮಾಡುವವರಿಗೆ ದಂಡ ಹಾಗೂ ಜೈಲು ಶಿಕ್ಷೆ ವಿಧಿಸುವ ಕುರಿತು ಕಾನೂನು ತಿದ್ದುಪಡಿಗೂ ಚರ್ಚಿಸಲಾಗಿದೆ.

ಗುರುವಾರ ವಿಧಾನಸೌಧದ ಸಮಿತಿ ಸಭಾಂಗಣದಲ್ಲಿ ಬಿಬಿಎಂಪಿ ಕಾಯ್ದೆ 2020ರ ಕಲಂ 144(6) ಮತ್ತು (21)ರ ಅಂಶಗಳನ್ನು ರಾಜ್ಯದ ಇತರ ಮಹಾನಗರ ಪಾಲಿಕೆಗಳಿಗೆ,



ನಗರ ಸ್ಥಳೀಯ ಸಂಸ್ಥೆಗಳಿಗೆ ವಿಸ್ತರಣೆ ಮಾಡಿ ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ 1976 ಹಾಗೂ ಕರ್ನಾಟಕ ಪುರಸಭೆ ಕಾಯ್ದೆ 1964ಕ್ಕೆ ತಿದ್ದುಪಡಿ ತರುವ ಕುರಿತು ತೀರ್ಮಾನ ಕೈಗೊಳ್ಳಲು ಸಚಿವ ಈಶ್ವರ ಖಂಡ್ರೆ ಅಧ್ಯಕ್ಷತೆ ಸಚಿವ ಸಂಪುಟ ಉಪಸಮಿತಿಯು ಸುದೀರ್ಘ ಸಭೆ ನಡೆಸಿತು.

ಈ ವೇಳೆ ಅನಧಿಕೃತವಾಗಿ ಕಟ್ಟಿರುವ ಕಟ್ಟಡಗಳಿಗೆ ಒಂದು ಬಾರಿ ದಂಡ ವಿಧಿಸಿ, ಮೊದಲ ವರ್ಷ ದುಪ್ಪಟ್ಟು ತೆರಿಗೆ ವಿಧಿಸಿ ನಂತರದ ವರ್ಷಗಳಲ್ಲಿ ನಿಯಮಿತವಾಗಿ ತೆರಿಗೆ ವಿಧಿಸಬಹುದು. ಅಥವಾ ಎಷ್ಟು ವರ್ಷ ದುಪ್ಪಟ್ಟು ತೆರಿಗೆ ವಿಧಿಸಬಹುದು ಎಂಬುದರ ಬಗ್ಗೆ ವಿಸ್ತೃತ ಚರ್ಚೆ ಮಾಡಬಹುದು. ಈ ರೀತಿ ತೆರಿಗೆ ಸಂಗ್ರಹಿಸಿದ ತಕ್ಷಣ ಕಟ್ಟಡದ ನಿಯಮ ಉಲ್ಲಂಘನೆ ಸಕ್ರಮ ಎಂದಲ್ಲ. ಮುಂದೆ ಯಾವುದೇ ಕ್ರಮಗಳಿಗೂ ಸಂಬಂಧಪಟ್ಟ ಕಟ್ಟಡ ಮುಕ್ತವಾಗಿರುತ್ತದೆ ಎಂಬ ಸಲಹೆ ವ್ಯಕ್ತವಾಗಿದೆ.

ಇನ್ನು ಮುಂದೆ ಯಾರೇ ಆದರೂ ಅನಧಿಕೃತವಾಗಿ ಬಡಾವಣೆ ನಿರ್ಮಿಸಿದರೆ ಅಥವಾ ಸಂಬಂಧಿತ ಸ್ಥಳೀಯ ಸಂಸ್ಥೆಗಳಿಂದ ನಕ್ಷೆ ಮಂಜೂರಾತಿ ಇಲ್ಲದೆ ಕಟ್ಟಡ ನಿರ್ಮಿಸಿದರೆ ಅಂತಹವರಿಗೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸುವಂತೆ ಕಾನೂನಿಗೆ ತಿದ್ದುಪಡಿ ತರುವುದು ಅಗತ್ಯ. ಜತೆಗೆ ಯಾರೇ ನ್ಯಾಯಸಮ್ಮತವಾಗಿ ಸಾರ್ವಜನಿಕ ಉದ್ದೇಶಕ್ಕೆ ಜಾಗ ಬಿಟ್ಟು ಬಡಾವಣೆ ನಿರ್ಮಿಸಲು ಮುಂದಾದರೆ ಮತ್ತು ಮನೆ ನಿರ್ಮಾಣ ಮಾಡಲು ನಿಯಮಾನುಸಾರ ನಕ್ಷೆ ಮಂಜೂರಾತಿ ಬಯಸಿದಲ್ಲಿ ನಿಯಮ ಸರಳೀಕರಣ ಮಾಡಿ ಅವರಿಗೆ ಮಂಜೂರಾತಿ ನೀಡಬೇಕು. ಈ ಬಗ್ಗೆ ಕಾನೂನು ರೂಪಿಸಲು ಶಿಫಾರಸು ಸಲ್ಲಿಸಲು ನಿರ್ಧರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

**Source: Kannada Prabha, 29 December, 2023., p.7**

ಪ್ರಜಾವಾಣಿ

# ಮನೆ ಮಾರಾಟ ಶೇ 29 ಹೆಚ್ಚಳ

## ಬೆಂಗಳೂರು: ಪ್ರಸಕ್ತ ವರ್ಷದಲ್ಲಿ 63,980 ಗೃಹ ಮಾರಾಟ

ನವದೆಹಲಿ (ಪಿಟಿಐ): ಬೆಂಗಳೂರು ಸೇರಿದಂತೆ ದೇಶದ ಪ್ರಮುಖ ಏಳು ನಗರಗಳಲ್ಲಿ ಪ್ರಸಕ್ತ ವರ್ಷದಲ್ಲಿ ಮನೆ ಮಾರಾಟವು ಶೇ 31ರಷ್ಟು ಹೆಚ್ಚಳವಾಗಿದೆ ಎಂದು ಆಸ್ತಿ ಸಲಹಾ ಸಂಸ್ಥೆ ಅನರಾಕ್ ಹೇಳಿದೆ.

2022ರಲ್ಲಿ ಈ ನಗರಗಳಲ್ಲಿ ಒಟ್ಟು 3,64,870 ಮನೆಗಳು ಮಾರಾಟವಾಗಿದ್ದವು. ಈ ವರ್ಷ 4,76,530 ಮನೆಗಳು ಮಾರಾಟವಾಗಿವೆ ಎಂದು ಗುರುವಾರ ಸಂಸ್ಥೆಯು ಬಿಡುಗಡೆಗೊಳಿಸಿರುವ ತನ್ನ ವಾರ್ಷಿಕ ವರದಿಯಲ್ಲಿ ವಿವರಿಸಿದೆ.

ಮುಂಬೈ, ಪುಣೆ, ದೆಹಲಿ, ಬೆಂಗಳೂರು, ಹೈದರಾಬಾದ್, ಕೋಲ್ಕತ್ತ ಮತ್ತು ಚೆನ್ನೈ ನಗರದಲ್ಲಿನ ಮನೆಗಳ ಮಾರಾಟದ ಆಧಾರದ ಮೇಲೆ ಸಂಸ್ಥೆಯು ಈ ವರದಿ ಸಿದ್ಧಪಡಿಸಿದೆ.

2022ರಲ್ಲಿ ಬೆಂಗಳೂರಿನಲ್ಲಿ 49,480 ಮನೆಗಳ ಮಾರಾಟವಾಗಿತ್ತು. ಪ್ರಸಕ್ತ ವರ್ಷ ಈ ಸಂಖ್ಯೆ 63,980ಕ್ಕೆ ಮುಟ್ಟಿದೆ. ಒಟ್ಟಾರೆ ಮಾರಾಟವು ಶೇ 29ರಷ್ಟು ಹೆಚ್ಚಳವಾಗಿದೆ ಎಂದು ವರದಿ ಹೇಳಿದೆ.

ಮುಂಬೈನಲ್ಲಿ ಅತಿಹೆಚ್ಚು ಮನೆಗಳು ಮಾರಾಟವಾಗಿವೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಮಾರಾಟವು ಶೇ 40ರಷ್ಟು ಹೆಚ್ಚಳವಾಗಿದೆ. ಈ ನಗರದಲ್ಲಿ ಕಳೆದ ವರ್ಷ 1,09,730 ಮನೆಗಳು ಮಾರಾಟವಾಗಿದ್ದರೆ, ಈ ಬಾರಿ 1,53,870 ಮನೆಗಳು ಮಾರಾಟವಾಗಿವೆ.

ಪ್ರಸಕ್ತ ವರ್ಷ ಪುಣೆಯಲ್ಲಿ 57,245, ದೆಹಲಿ 63,710, ಹೈದರಾಬಾದ್ 61,715, ಕೋಲ್ಕತ್ತ 23,030 ಮತ್ತು ಚೆನ್ನೈನಲ್ಲಿ 21,630 ಮನೆಗಳು ಮಾರಾಟವಾಗಿವೆ.

‘ಗೃಹ ವಲಯದ ಪಾಲಿಗೆ ಇದು ಉತ್ತಮ ವರ್ಷವಾಗಿದೆ. ಜಾಗತಿಕ ಬಿಕ್ಕಟ್ಟು, ದೇಶೀಯವಾಗಿ ಆಸ್ತಿ ಮೌಲ್ಯ ಹೆಚ್ಚಳ ಹಾಗೂ ಗೃಹ ಸಾಲದ ಮೇಲಿನ ಬ್ಯಾಂಕ್‌ಗಳ ಬಡ್ಡಿದರ ಹೆಚ್ಚಳದ ನಡುವೆಯೂ ಈ ವಲಯ ಅತ್ಯುತ್ತಮ ಪ್ರಗತಿ ಸಾಧಿಸಿದೆ’ ಎಂದು ಅನರಾಕ್ ಸಂಸ್ಥೆಯ ಮುಖ್ಯಸ್ಥ ಅನುಜ್ ಪುರಿ ಹೇಳಿದ್ದಾರೆ.

**ಖರೀದಿ ದರ ಎಷ್ಟು?:** ಪ್ರಸಕ್ತ ವರ್ಷ ಈ ಏಳು ನಗರಗಳಲ್ಲಿ ಹೊಸ ಮನೆಗಳ ನಿರ್ಮಾಣವು ಶೇ 25ರಷ್ಟು ಹೆಚ್ಚಳವಾಗಿದೆ. ಒಟ್ಟು 4,45,770 ಮನೆಗಳ ನಿರ್ಮಾಣಕ್ಕೆ ಚಾಲನೆ ಸಿಕ್ಕಿದೆ.

ಅಲ್ಲದೇ, ಮನೆ ಖರೀದಿಯ ಸರಾಸರಿ ದರವೂ ಹೆಚ್ಚಳವಾಗಿದೆ. ಹಿಂದಿನ ಸಾಲಿನಲ್ಲಿ ಒಂದು ಚದರ ಅಡಿಗೆ ₹6,150 ಇತ್ತು. ಈ ವರ್ಷ ₹7,080ಕ್ಕೆ ಮುಟ್ಟಿದೆ ಎಂದು ಹೇಳಿದೆ.

**Source: Prajavani, 29 December, 2023., p.3**

# Siddaramaiah to lead Karnataka delegation to WEF in Davos

## It is expected to woo industrialists from across the globe for investment in key sectors

Nagesh Prabhu
BENGALURU

Chief Minister Siddaramaiah will lead a 15-member delegation from Karnataka for the 54th annual meeting of the World Economic Forum (WEF) in Davos in Switzerland, which is scheduled from January 15 to 19, 2024, for attracting investment in various sectors in the State.

The delegation is expected to woo industrialists from across the globe for investment on key sectors such as semiconductors, aerospace, defence, precision manufacturing, electronics. It is expected to hold talks with Satya Narayana Nadella, chairman and CEO of Microsoft, and other leading honchos of IT and manufacturing giants, official sources told *The Hindu* on Saturday.



Siddaramaiah

The Chief Minister will be accompanied by Major Industries Minister M B Patil and IT/BT and RDPR Minister Priyank Kharge. Senior IAS officer and Additional Chief Secretary to the Chief Minister L.K. Atheeq, principal secretaries and secretaries of industry and IT/BT departments will be part of the delegation.

The State will set up a pavilion at Davos for holding dialogues with leading industrialists, entrepreneurs, and Ministers of various nations. It is said that the government has entered into an agreement with a leading media house for setting up the pavilion and publicity.

The delegation is expected to follow-up the discussions held with businessmen during the tour of Mr. Patil to the U.S. this September-October. After the U.S. tour, Mr. Patil and Mr. Kharge said that several American companies have expressed interest to invest around ₹25,000 crore in Karnataka.

Union Commerce and Industries Minister Piyush Goyal will lead the team from India at the WEF. Representatives of over 100 governments, all major international organisations, civil society leaders, experts, youth representatives. and social entrepreneurs will participate in the five-day summit.

The summit this year is largely focused on four key themes: achieving security and cooperation in a fractured world, creating growth and jobs, Artificial Intelligence as a driving force for the economy and society, and a long-term strategy for climate, nature and energy.

The government is planning to hold a global investors' meet either at the end of 2024 or early 2025.

**Source: The Hindu, 24 Dec, 2023, p.7**

DH
DECCAN HERALD

# Housing sales register a decade-high record in 2023: Report

## Sales across top-7 cities registered 31% annual surge

**SHAKSHI JAIN**
BENGALURU, DHNS

Amid a strong rally in the Indian real estate market, 2023 registered the highest housing sales in at least a decade, across the top seven cities, a new report by property consultancy Anarock revealed on Thursday.

With approximately 4.77 lakh units sold across the seven biggest cities in 2023, the residential segment registered a 31% year-on-year growth over the 3.6 lakh units in the previous year.

"The last peak in the decade was seen in 2022, after 2014, when approximately 3.43 lakh units were sold in the top-7 cities," the report highlighted.

"2023 has been phenomenal for the Indian housing sector, despite global headwinds, rising domestic property prices and interest rate hikes over the first half this year," Anarock Group Chairman Anuj Puri remarked.

The report credited unchanged home loan rates in the back half of the year for sustaining the overall positive consumer sentiment.




The sales momentum was led by the western markets of Mumbai Metropolitan Region and Pune, which sold around 1,53,870 and 86,680 units, respectively. Kolkata stood at the bottom of the chart with approximately 23,030 units sold during the year.

At the same time, fresh supply of newly built homes saw a 25% year-on-year growth with around 4.6 lakh units launched in 2023, against 3.6 lakh units in 2022. About 31% of the overall supply of residential units in 2023 ranged in the Rs 40-80 lakh bracket. With 51% of launches in the Rs 80 lakh-plus bracket, affordable housing - comprising homes priced below Rs 40 lakh - secured the smallest share of the pie at 18%.

Industry players blame difficulties in sustaining profit margins for the declining share of the budget housing segment.

As per the report, the annual jump in housing prices across the seven geographies ranged between 10-24% - driven by demand and increased input costs. M Murali, chairman and managing director of Bengaluru-based Sriram Properties cited a 5-8% increase in expenditure on raw material, cost of capital and labour.

Unsold inventory, on the other hand, saw a 5% year-on-year decline towards 2023-end, despite a strong supply of new units during the year.

According to the report, housing demand is expected to remain undeterred in 2024, even with a likely average price hike of 8-10% across the top-7 cities. "The Indian economy remains bullish, and this directly correlates to residential demand," Puri said.

**Source: Deccan Herald, 29 December, 2023., p.11**

Back to Contents

# EDUCATION

ಪ್ರಜಾವಾಣಿ





| ಶಾಲೆಗಳಲ್ಲಿ ಮಕ್ಕಳ ದಾಖಲಾತಿ | | |
|---|---|---|
| ವರ್ಷ | ಸರ್ಕಾರಿ | ಖಾಸಗಿ |
| 2023-24 | 42,90,948 | 46,43,225 |
| 2022-23 | 45,45,432 | 45,13,902 |
| 2021-22 | 47,04,038 | 42,99,819 |
| 2020-21 | 43,87,974 | 44,37,669 |
| 2019-20 | 42,89,442 | 45,14,893 |

(ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮಾಹಿತಿ)

## ಸಂಪೂರ್ಣ ಮಾಹಿತಿ ಸಂಗ್ರಹಿಸಿ ಕ್ರಮ



ಸರ್ಕಾರಿ ಶಾಲೆಗಳಿಂದ ಹೊರಗುಳಿಯುವ ಮಕ್ಕಳು ಹಾಗೂ ಶೂನ್ಯ ದಾಖಲಾತಿ ಶಾಲೆಗಳಿರುವ ಪ್ರದೇಶದ ಸಂಪೂರ್ಣ ಮಾಹಿತಿ ಕಲೆ ಹಾಕಲಾಗುತ್ತಿದೆ. ಎಲ್ಲ ಕಡೆಯೂ ಅಂತಹ ಸಮಸ್ಯೆ ಇಲ್ಲ. ಮಲೆನಾಡು ಸೇರಿದಂತೆ ಮಕ್ಕಳ ಸಂಖ್ಯೆ ಕ್ಷೀಣಿಸುತ್ತಿರುವ ಭಾಗಗಳಲ್ಲಿ ಇರುವ ಸಮಸ್ಯೆಗಳನ್ನು ಪಟ್ಟಿ ಮಾಡಿ ಕ್ರಮ ಕೈಗೊಳ್ಳಲಾಗುವುದು. ಕೆಪಿಎಸ್ ಶಾಲೆಗಳ ಆರಂಭದ ನಂತರ ಆ ಭಾಗಗಳಲ್ಲಿ ಮಕ್ಕಳ ದಾಖಲಾತಿಯಲ್ಲಿ ಏರಿಕೆಯಾಗಿದೆ. ಹಾಗಾಗಿ, ಕೆಪಿಎಸ್ ಸಂಖ್ಯೆಇನ್ನಷ್ಟು ಹೆಚ್ಚಿಸಲಾಗುವುದು. ಶಾಲಾ ಸೌಕರ್ಯಗಳ ಹೆಚ್ಚಳ ಮಾಡಲಾಗುತ್ತಿದ್ದು, ಮುಂದಿನ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಶಲೆಗಳಲ್ಲಿ ಮಕ್ಕಳ ಸಂಖ್ಯೆಯಲ್ಲಿ ಏರಿಕೆಯಾಗುವ ನಿರೀಕ್ಷೆ ಇದೆ.

**ಮಧು ಬಂಗಾರಪ್ಪ,** ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ

# ಶೂನ್ಯ ದಾಖಲೆ 'ಸಾಧನೆ'

ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕು ಮೋರಟಗಿಯ ಶತಮಾನ ಕಂಡ ಶಾಲೆಯಲ್ಲಿ ಶೂನ್ಯ ದಾಖಲಾತಿ ಹಿನ್ನೆಲೆಯಲ್ಲಿ ಬಾಗಿಲು ಮುಚ್ಚಲಾಗಿದೆ



**ನಾವು ಕಲಿಯುತ್ತಿದ್ದಾಗ ಮಕ್ಕಳಿದ್ದರು. ಈಗ ಸ್ವಂತ ಕಟ್ಟಡವಿದ್ದರೂ ಪಾಳು ಬಿದ್ದಿದೆ. ಪಾಲಕರ ವಿಶ್ವಾಸ ಗಳಿಸುವಲ್ಲಿ ಶಿಕ್ಷಣ ಇಲಾಖೆ ವಿಫಲವಾಗಿದೆ.**

**ಈರಪ್ಪ ಕಾಡೇಶನವರ,** ಹಳೆಯ ವಿದ್ಯಾರ್ಥಿ, ಸರ್ಕಾರಿ ಪ್ರಾಥಮಿಕ ಶಾಲೆ ನಂ-2, ಬೈಲಹೊಂಗಲ



**ನಾವು ಇದೇ ಸರ್ಕಾರಿ ಶಾಲೆಯಲ್ಲಿ ಕಲಿತೆವು. ಈಗ ಮಕ್ಕಳಿಗೆ ಶ್ರದ್ಧೆಯಿಂದ ಕಲಿಸುವ ಪ್ರಯತ್ನ ಕಡಿಮೆಯಾಗಿದೆ. ಶಾಲೆ ಬಿಕೋ ಎನ್ನುತ್ತಿದೆ.**

**ರಮೇಶ್,** ಕಿರಿಸೊಡ್ಲು, ಹುಣಸೂರು ತಾಲ್ಲೂಕು



**ಶಾಲೆಗಳನ್ನು ಮುಚ್ಚಬಾರದೆಂಬ ಉದ್ದೇಶದಿಂದ ಪಂಚಾಯಿತಿ ಮಟ್ಟದಲ್ಲಿ ಹೈಟೆಕ್ ಸರ್ಕಾರಿ ಶಾಲೆ ನಿರ್ಮಾಣಕ್ಕೆ ಮುಂದಾಗಿದ್ದೇವೆ.**

**ಎಚ್.ಎ. ಇಕ್ಬಾಲ್ ಹುಸೇನ್,** ಶಾಸಕ, ರಾಮನಗರ

**ಒಂದನೇ ಪುಟದಿಂದ...**

ಈ ಶೈಕ್ಷಣಿಕ ವರ್ಷದಲ್ಲಿ ಮೂರೂವರೆ ಸಾವಿರಕ್ಕೂ ಹೆಚ್ಚು ಶಾಲೆಗಳಲ್ಲಿ ಹತ್ತಕ್ಕಿಂತ ಕಡಿಮೆ ಮಕ್ಕಳಿದ್ದಾರೆ.

ಇಂಥ ದುರ್ಗತಿ ಶಾಲೆಗಳಿಗೆ ಈ ವರ್ಷ ದಿಢೀರನೇ ಎದುರಾಗಿಲ್ಲ. ಮೂರ್ನಾಲ್ಕು ವರ್ಷಗಳಲ್ಲಿ ಈ ಬದಲಾವಣೆಯಾಗಿದೆ. ಒಂದರಿಂದ ಐದನೇ ತರಗತಿವರೆಗಿನ ಪ್ರಾಥಮಿಕ ಶಾಲೆಗಳಲ್ಲಿ ಒಂದನೇ ತರಗತಿಗೆ ಶೂನ್ಯ ದಾಖಲಾತಿ ಕಂಡು ಬರುವ ಮುಂಚೆ ಎರಡು ಮತ್ತು ಮೂರನೇ ತರಗತಿಯಲ್ಲಿ ಮಕ್ಕಳಿಲ್ಲದ ಪರಿಸ್ಥಿತಿ ಎದುರಾದ ವರ್ಷವೇ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಎಚ್ಚೆತ್ತುಕೊಳ್ಳಲಿಲ್ಲವೇಕೆ ಎಂಬ ಪ್ರಶ್ನೆಯೂ ಮೂಡುತ್ತದೆ.

**ಕಾರಣಗಳು ಹಲವು:** 'ಸರ್ಕಾರಿ ಶಾಲೆಗಳ ಈ ದುಸ್ಥಿತಿಗೆ ನೀವು ಗುರುತಿಸಿರುವ ಕಾರಣಗಳೇನು' ಎಂದು ಕೇಳಿದರೆ, ಮೈಸೂರು ಹಾಗೂ ಬೆಳಗಾವಿ ಭಾಗದ ಶಿಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, 'ಪೋಷಕರ ವಲಸೆಯಿಂದ ಮಕ್ಕಳು ನಗರ, ಪಟ್ಟಣ ಸೇರಿದ್ದಾರೆ. ಜೊತೆಗೆ ಕೆಲವು ಹಳ್ಳಿಗಳಲ್ಲಿ ಒಂದನೇ ತರಗತಿಗೆ ಸೇರುವ ವಯಸ್ಸಿನ ಮಕ್ಕಳೇ ಇಲ್ಲ' ಎಂಬ ಕಾರಣವನ್ನು ನೀಡುತ್ತಾರೆ.

ಆದರೆ, 'ಅಂಥ ವಲಸೆ ಹೋದ ಕುಟುಂಬಗಳೆಷ್ಟು' ಎಂಬ ಬಗ್ಗೆ ಅವರ ಬಳಿ ನಿಖರ ಅಂಕಿ ಅಂಶಗಳಿಲ್ಲ. ಆ ಬಗ್ಗೆ ಸಮೀಕ್ಷೆಯಾಗಲೀ, ಪರಿಸ್ಥಿತಿಯ ಕುರಿತು ಸ್ಥಳೀಯ ಆಡಳಿತ ಸಂಸ್ಥೆಗಳೊಂದಿಗೆ ಚರ್ಚೆಗಳಾಗಲೀ ನಡೆದಿಲ್ಲ.

ಶಾಲಾ ಶಿಕ್ಷಣ ವ್ಯವಸ್ಥೆಯ ಭಾಗೀದಾರರಾದ ಪೋಷಕರು, ಶಿಕ್ಷಕರು, ಅಧಿಕಾರಿಗಳು, ಜನಪ್ರತಿನಿಧಿಗಳು, ಸ್ಥಳೀಯ ಆಡಳಿತ ಸಂಸ್ಥೆಗಳ ನಡುವೆ ಶೈಕ್ಷಣಿಕ ಸಂವಾದ ಸ್ಥಗಿತಗೊಂಡಿದೆ ಎಂಬುದಕ್ಕೂ ಇದು ಸಾಕ್ಷಿಯಂತೆ ಕಾಣುತ್ತಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳೊಂದಿಗೆ ಮಾತ್ರ ಇವರೆಲ್ಲರ ಬಾಂಧವ್ಯ ಗಟ್ಟಿಯಾಗಿದೆ ಎಂಬುದು, ಖಾಸಗಿ ಶಾಲೆಗಳಲ್ಲಿ ತುಂಬಿತುಳುಕುವ ಮಕ್ಕಳನ್ನು ನೋಡಿದರೆ ಗೊತ್ತಾಗುತ್ತದೆ.

'ಮಕ್ಕಳಿಲ್ಲವೆಂದು ಶಾಲೆಯನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದೆ ಅಷ್ಟೇ. ಶಿಕ್ಷಕರನ್ನು, ಸಿಬ್ಬಂದಿಯನ್ನು ಹತ್ತಿರದ ಶಾಲೆಗೆ ನಿಯೋಜಿಸಲಾಗಿದೆ. ಮಕ್ಕಳು ಬಂದರೆ ಖಂಡಿತಾ ಮತ್ತೆ ಶಾಲೆ ಆರಂಭಿಸಲಾಗುವುದು. ನಿಯಮಗಳ ಪ್ರಕಾರ, ಈ ಶಾಲೆಗಳನ್ನು 3 ವರ್ಷ ಹಾಗೆಯೇ ಉಳಿಸಿಕೊಳ್ಳಲಾಗುತ್ತದೆ. ಈ ಅವಧಿಯಲ್ಲಿ ಪೋಷಕರು ಮುಂದೆ ಬಂದರೆ ಶಾಲೆಗೆ ಮಕ್ಕಳನ್ನು ದಾಖಲಿಸುವ ಪ್ರಯತ್ನ ನಡೆಯುತ್ತದೆ' ಎಂಬುದು ಅಧಿಕಾರಿಗಳ ನಿರುಮ್ಮಳ ನುಡಿ.

'ಸರ್ಕಾರಿ ಶಾಲೆಗೆ ಮಕ್ಕಳು ಬೇಕಾಗಿದ್ದಾರೆ' ಎಂದು ಅವರು ಕಾಯುತ್ತಿದ್ದಾರೆ. ಶಾಲೆ ಮುಚ್ಚಿರುವ ಯಾವ ಊರಿಗೇ ಹೋದರೂ ಇದೇ ಸನ್ನಿವೇಶ. ತಲೆಮಾರುಗಳಿಗೆ ಪಾಠ ಹೇಳಿದ ಶಾಲೆಗಳು ಮಾತ್ರ ಒಂಟಿಯಾಗಿ ನಿಂತಿವೆ. ಪಾಳು ಬಿದ್ದಿವೆ.

ಅಧಿಕಾರಿಗಳ ಈ ಮಾತುಗಳಿಗಿಂತ ಭಿನ್ನವಾಗಿ ಪೋಷಕರ ವಾದ ಗಮನ ಸೆಳೆಯುತ್ತದೆ. 'ಸೌಕರ್ಯವಿರಲಿ, ಇಲ್ಲದಿರಲಿ, ನಮಗೆ ಸರ್ಕಾರಿ ಶಾಲೆ ಬೇಡ' ಎನ್ನುವ ಹೊಸ ಕಾಲಮಾನದ ಸುಶಿಕ್ಷಿತ ಪೋಷಕರ ನಡುವೆ, 'ಸೌಕರ್ಯವಿದ್ದಿದ್ದರೆ ಮಕ್ಕಳನ್ನು ಸರ್ಕಾರಿ ಶಾಲೆಗೇ ಸೇರಿಸುತ್ತಿದ್ದೆವು' ಎನ್ನುವ ಜಾಣ ಪೋಷಕರೂ ಕಾಣುತ್ತಾರೆ. ತಾವು ಓದುವಾಗ ಮಕ್ಕಳಿಂದ ತುಂಬಿ ತುಳುಕುತ್ತಿದ್ದ ಶಾಲೆಗಳು ಈಗ ಕಣ್ಣುಮುಚ್ಚುತ್ತಿರುವ ಬಗ್ಗೆ ಹಲವರಲ್ಲಿ ದಟ್ಟ ವಿಷಾದವೂ ಇದೆ. ಅಸಹಾಯಕತೆಯೂ ಇದೆ.

## ಡಿಸಿಎಂ ತವರಲ್ಲೂ ಶೂನ್ಯ ದಾಖಲೆ

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿನಿಧಿಸುವ ಕನಕಪುರ ತಾಲ್ಲೂಕಿನಲ್ಲಿ 13, ಮಾಗಡಿ 9, ರಾಮನಗರ ಮತ್ತು ಚನ್ನಪಟ್ಟಣದಲ್ಲಿ ತಲಾ 6 ಶಾಲೆಗಳಿಗೆ ಬೀಗ ಬಿದ್ದಿದೆ. ತಲಾ 3 ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳೂ ಬಂದ್ ಆಗಿವೆ. ಕೆಲವು ವರ್ಷಗಳಿಂದ ಬೆರಳೆಣಿಕೆಯ ದಾಖಲಾತಿ ಕಂಡು, ಕಡೆಗೆ ಶೂನ್ಯ ತಲುಪಿವೆ.

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕು ಕೇಂದ್ರದಿಂದ 8 ಕಿಮೀ ದೂರದಲ್ಲಿರುವ ಕಿರಿಸೊಡ್ಲು ಗ್ರಾಮದಲ್ಲಿ, 'ಕಟ್ಟಡವಿದ್ದರೂ ಇಬ್ಬರು ಶಿಕ್ಷಕರ ನಡುವಿನ ಸಮನ್ವಯದ ಕೊರತೆ, ಅಶಿಸ್ತಿನ ಕಾರಣಕ್ಕೆ ಮಕ್ಕಳನ್ನು ಖಾಸಗಿ ಶಾಲೆಗೆ ಸೇರಿಸಿದೆವು' ಎನ್ನುತ್ತಾರೆ ಪೋಷಕರು. 'ನಮ್ಮ ದೂರುಗಳನ್ನು ಇಲಾಖೆ ಗಂಭೀರವಾಗಿ ಪರಿಗಣಿಸಲಿಲ್ಲ' ಎಂದೂ ಆರೋಪಿಸುತ್ತಾರೆ.

'2-3 ವರ್ಷದಿಂದ ಮೂರ್ನಾಲ್ಕು ಮಕ್ಕಳಷ್ಟೇ ಇದ್ದರು. ಈ ವರ್ಷ ಯಾರೂ ಇಲ್ಲ. ಕ್ಷೇತ್ರ ಶಿಕ್ಷಣಾಧಿಕಾರಿ ಬಂದು 'ಶಾಲೆ ಉಳಿಸಿಕೊಳ್ಳಿ' ಎಂದರು. 'ನಾವು ಹೇಗೆ ಉಳಿಸಿಕೊಳ್ಳುವುದು' ಎಂಬುದು ಅವರ ಪ್ರಶ್ನೆ.

**ಇಂಗ್ಲಿಷ್ ಮಾಧ್ಯಮ ವ್ಯಾಮೋಹ:** ಶಾಲೆ ಮುಚ್ಚಿರುವ ಊರುಗಳಲ್ಲಿ ಇಂಗ್ಲಿಷ್ ಮಾಧ್ಯಮ ಅನಿವಾರ್ಯವೆಂಬ ಒತ್ತಾಸೆ, ಸೌಕರ್ಯಗಳ ಕೊರತೆಯೇ ಮುಂದೆ ಬರುತ್ತವೆ. ಆಯಾ ಶಾಲೆಗಳಲ್ಲಿ ಕೊರತೆಗಳನ್ನು ನೀಗಿಸುವಲ್ಲಿ ಕೈಗೊಂಡ ಕ್ರಮಗಳೇನು ಎಂಬ ಬಗ್ಗೆಯೂ ಇಲಾಖೆಯಲ್ಲಿ ನಿಖರ ಮಾಹಿತಿಗಳಿಲ್ಲ.

ಆರಂಭದಲ್ಲೇ ಉಲ್ಲೇಖವಾದ ರಾಮನಗರದ್ದು ಏಕಶಿಕ್ಷಕ ಶಾಲೆ. 'ನಮ್ಮೂರ ಶಾಲೆಯಲ್ಲಿ ಒಬ್ಬರೇ ಶಿಕ್ಷಕರಿದ್ದರು. ಅವರಿಗೋ ನೂರೆಂಟು ಜವಾಬ್ದಾರಿ. ಈಗಿನ ಖಾಸಗಿ ಶಾಲೆಯಲ್ಲಿ ವಿಷಯವಾರು ಶಿಕ್ಷಕರು, ಪಿ.ಟಿ ಮೇಷ್ಟ್ರು ಇದ್ದಾರೆ. ಸೌಕರ್ಯವಿದೆ. ಪ್ರತಿ ಮಗುವಿನ ಕಲಿಕಾ ಪ್ರಗತಿ ಪರಿಶೀಲನೆಗೆ ಪ್ರತ್ಯೇಕ ವ್ಯವಸ್ಥೆ ಇದೆ. ನಮ್ಮೂರ ಶಾಲೆಯಲ್ಲೇ ಇವೆಲ್ಲ ಇದ್ದಿದ್ದರೆ, ನಾವ್ಯಾಕೆ ಡೊನೇಶನ್ ಕೊಟ್ಟು ಪ್ರೈವೇಟ್ ಶಾಲೆಗೆ ಸೇರಿಸುತ್ತಿದ್ದೆವು' -ಪೋಷಕರ ಈ ಪ್ರಶ್ನೆ, ಸರ್ಕಾರಿ ಶಾಲೆಯ 'ನಲಿ-ಕಲಿ' ಪರಿಕಲ್ಪನೆಯನ್ನೇ ಅಣಕ ಮಾಡುವಂತಿದೆ.

'ಮಕ್ಕಳನ್ನು ಯಾವ ಶಾಲೆಗೆ ಸೇರಿಸಬೇಕೆಂದು ನಿರ್ಧರಿಸುವುದು ಪೋಷಕರ ಹಕ್ಕು. ಅದನ್ನು ಕಸಿದುಕೊಳ್ಳಲಾಗದು' ಎಂದೂ ಕೆಲವು ಅಧಿಕಾರಿಗಳು ಹೇಳುತ್ತಾರೆ. ಆದರೆ, 'ಆ ಹಕ್ಕು ಚಲಾವಣೆಗೆ ಕಾರಣವಾದ ಪ್ರಮುಖ ಅಂಶಗಳೆಲ್ಲವೂ ನೇರವಾಗಿ ತಮ್ಮ ಇಲಾಖೆಗೇ ಸೇರುತ್ತವೆ' ಎಂದು ಹೇಳುವುದನ್ನು ಮರೆಯುತ್ತಾರೆ.

ಮಕ್ಕಳು ಬಾರದಿರಲು ಆಯಾ ಪ್ರದೇಶಕ್ಕೆ ವಿಶಿಷ್ಟವಾದ ಕಾರಣಗಳೂ ಇರುತ್ತವೆ ಎಂಬುದನ್ನು ಮರೆಯುವಂತಿಲ್ಲ. ಅಂಥ ಕಾರಣಗಳನ್ನು ಕೆಲವೆಡೆ ಪಟ್ಟಿ ಮಾಡಿದ್ದರೂ ಪರಿಹಾರ ಹುಡುಕುವ ಪ್ರಯತ್ನಗಳೂ ನಡೆದಿಲ್ಲ.

ಬೆಳಗಾವಿ ಮತ್ತು ಖಾನಾಪುರ ತಾಲ್ಲೂಕಿನ ಕೆಲವು ಶಾಲೆಗಳನ್ನು ಗಮನಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ. 'ಕೆಲವು ಕಾಡಿನ ನಡುವೆ ಇವೆ. ಮಳೆಗಾಲದಲ್ಲಿ ಶಾಲೆಗೆ ಹೋಗಲು ದಾರಿಯೇ ಇಲ್ಲ. ಕೆಲವು ತೋಟದ ಶಾಲೆಗಳಿದ್ದು, ಅಲ್ಲಿಗೆ ಬಸ್ ಸೌಕರ್ಯವಿಲ್ಲ. ಅದೇ ಕಾರಣಕ್ಕೆ ಆ ಶಾಲೆಗಳಿಗೆ ಮಕ್ಕಳು ದಾಖಲಾಗಿಲ್ಲ' ಎನ್ನುತ್ತಾರೆ ಚಿಕ್ಕೋಡಿ ಡಿಡಿಪಿಐ ಮೋಹನಕುಮಾರ್ ಹಂಚಾಟೆ. ವಿವಿಧ ಇಲಾಖೆಗಳ ಸಮನ್ವಯ ಸಾಧಿಸಿ ಈ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಿದರೆ, ನಿರಾಶೆ ಎದುರಾಗುತ್ತದೆ.

**ಪರಿಹಾರವೇನು?:** ಶೂನ್ಯ ದಾಖಲಾತಿಯ ಸಮಸ್ಯೆಗೆ ಪರಿಹಾರವೇನು? ಎಂದರೆ, 'ಹಳ್ಳಿಗಳ ಬಲವರ್ಧನೆ' ಎನ್ನುತ್ತಾರೆ ನಂಜನಗೂಡು ಕ್ಷೇತ್ರ ಶಿಕ್ಷಣಾಧಿಕಾರಿ ಶಿವಲಿಂಗಯ್ಯ. 'ಪೋಷಕರು ಹಳ್ಳಿಗಳನ್ನು ಬಿಟ್ಟು ಹೋಗಬಾರದು. ಇಲ್ಲಿಯೇ ಅವರ ಬದುಕು ಹಸನಾಗಿರಬೇಕು. ಆಗ ಅವರು ಇಲ್ಲಿಯೇ ಉಳಿಯುತ್ತಾರೆ. ಮಕ್ಕಳೂ ಹಳ್ಳಿಯ ಶಾಲೆಯಲ್ಲೇ ಓದುತ್ತಾರೆ' ಎಂಬುದು ಅವರ ಪ್ರತಿಪಾದನೆ.

'ಪ್ರಾಥಮಿಕ ಹಂತದ ಕಲಿಯುವ ವ್ಯವಸ್ಥೆ, ಅಂದರೆ, ಸರ್ಕಾರಿ ಶಾಲೆಗಳ ಉಳಿವು, ಹಳ್ಳಿಯ ಬಲವರ್ಧನೆಯನ್ನು ಅವಲಂಬಿಸಿದೆ' ಎಂಬ ಅವರ ಮಾತು, 'ವಲಸೆಯನ್ನು ಆಧರಿಸಿದ ಬದುಕು ತಪ್ಪಬೇಕು. ಹಳ್ಳಿಯ ಶಾಲೆಯಲ್ಲೇ ಹೊಸ ಕಾಲ ಬಯಸುವ ಎಲ್ಲ ಕಲಿಕೆಗಳಿಗೂ ಅವಕಾಶವಿರಬೇಕು' ಎಂದು ಪ್ರತಿಪಾದಿಸುತ್ತದೆ.

'ಸದ್ಯ, ಆ ಕಲಿಕೆಯ ಮಾದರಿಗಳನ್ನು ಖಾಸಗಿ ಶಾಲೆಗಳು ಕೊಡುತ್ತಿವೆ' ಎಂಬ ಜನಪ್ರಿಯ ಹೇಳಿಕೆಯನ್ನು ವಿಶ್ಲೇಷಿಸಿದರೆ, ಈ ಅಭಿಪ್ರಾಯ ಪೂರ್ಣ ಸತ್ಯವಲ್ಲ ಎನಿಸುತ್ತದೆ. ಏಕೆಂದರೆ, ಬಹುತೇಕ ಖಾಸಗಿ ಶಾಲೆಗಳಲ್ಲಿ ತರಬೇತಿ ಪಡೆಯದ, ಅನುಭವವಿಲ್ಲದ ಶಿಕ್ಷಕರೇ ಹೆಚ್ಚು. ಚೆನ್ನಾಗಿರುವಂತೆ ಕಂಡರೂ, ಅಲ್ಲಿಯೂ ಹುಳುಕುಗಳಿವೆ ಎಂಬ ದೂರು, ಅಸಮಾಧಾನ ಪೋಷಕರಲ್ಲಿವೆ ಎನ್ನುವುದು ಹಲವರನ್ನು ಮಾತನಾಡಿಸಿದಾಗ ಅರಿವಾಗುತ್ತದೆ.

'ಸೌಲಭ್ಯಗಳ ಸದ್ಬಳಕೆ' ಕುರಿತು ಮಾತನಾಡುವ ಸರ್ಕಾರವು ಅಗತ್ಯವಿದ್ದ ಕಡೆ ಮುಚ್ಚಿದ ಶಾಲೆಗಳನ್ನು ತೆರೆಯುವ ದಾರಿಗಳ ಕಡೆಗೆ ಹೆಚ್ಚು ಗಮನ ಕೊಡಬೇಕಾಗಿದೆ. ಶೂನ್ಯ ದಾಖಲಾತಿಯುಳ್ಳ ಶಾಲೆಯ ಪರಿಸ್ಥಿತಿಯನ್ನು ಪ್ರತ್ಯೇಕವಾಗಿಯೇ ಅಧ್ಯಯನ ಮಾಡಿ, ಸಮಸ್ಯೆಗಳನ್ನು ಕಂಡು ಹಿಡಿದು ಪರಿಹರಿಸುವ ಪ್ರಯತ್ನವೂ ಶುರುವಾಗಬೇಕಾಗಿದೆ. ಅದಕ್ಕಾಗಿ ಶಾಲಾ ಶಿಕ್ಷಣ ವ್ಯವಸ್ಥೆಯ ಎಲ್ಲ ಭಾಗೀದಾರರನ್ನೂ ಒಳಗು ಮಾಡಿಕೊಳ್ಳುವುದು ಅತ್ಯವಶ್ಯ. ಇಲ್ಲದಿದ್ದರೆ, ಸರ್ಕಾರಿ ಶಾಲೆಗಳೇ ಕಾಣೆಯಾಗುವ ಪರಿಸ್ಥಿತಿಗೆ ದಾರಿಗಳು ತೆರೆದುಕೊಳ್ಳುತ್ತವೆ.

**ಪೂರಕ ಮಾಹಿತಿ:** ಚಂದ್ರಹಾಸ ಹಿರೇಮಳಲಿ, ಓದೇಶ ಸಕಲೇಶಪುರ, ವಿಕ್ರಂ ಕಾಂತಿಕೆರೆ, ಸಂತೋಷ ಈ. ಚಿನಗುಡಿ, ಮನೋಜ್‌ಕುಮಾರ್ ಗುದ್ದಿ, ಬಸವರಾಜ ಸಂಪಳ್ಳಿ, ಜಿ.ಎಚ್.ವೆಂಕಟೇಶ್, ಜಿ.ಬಿ.ನಾಗರಾಜ್, ಅನಿತಾ ಎಚ್., ಶಿವಪ್ರಸಾದ್ ರೈ. ಎಚ್.ಎಸ್.ಸಚ್ಚಿತ್.

## ಸೌಕರ್ಯಗಳ ಕೊರತೆ

ಶಾಲೆಗಳಲ್ಲಿ ಕುಡಿಯುವ ನೀರು ಮತ್ತು ಶೌಚಾಲಯದಂಥ ಮೂಲಸೌಕರ್ಯಗಳ ಕೊರತೆಯ ಸಮಸ್ಯೆ ಇಂದಿಗೂ ನೀಗಿಲ್ಲ. ಪ್ರಸಕ್ತ ಶೈಕ್ಷಣಿಕ ವರ್ಷದ ಆರಂಭದಲ್ಲೇ ಹೈಕೋರ್ಟ್ ಈ ಬಗ್ಗೆ ಅಸಮಾಧಾನವನ್ನೂ ವ್ಯಕ್ತಪಡಿಸಿತ್ತು.

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಕರೆ ತರುವ ಸಂಬಂಧ ಹೈಕೋರ್ಟ್ ದಾಖಲಿಸಿಕೊಂಡಿರುವ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆಯ ವೇಳೆ, ಕಳೆದ ಅಕ್ಟೋಬರ್‌ನಲ್ಲೂ ಈ ಅಸಮಾಧಾನ ಮತ್ತೆ ಪ್ರಕಟವಾಗಿತ್ತು.

ಕಲ್ಯಾಣ ಕರ್ನಾಟಕದ ವಿವಿಧ ಜಿಲ್ಲೆಗಳ ಸರ್ಕಾರಿ ಶಾಲೆಗಳಲ್ಲಿ ಅಗತ್ಯವಿರುವಷ್ಟು ಕೊಠಡಿ ನಿರ್ಮಾಣವೂ ನಡೆದಿಲ್ಲ. ಹಿಂದಿನ ಬಿಜೆಪಿ ಸರ್ಕಾರ 'ವಿವೇಕ' ಯೋಜನೆ ಅಡಿ ಕೊಠಡಿಗಳ ನಿರ್ಮಾಣಕ್ಕೆ ಮುಂದಾಗಿತ್ತು. ನಂತರ, ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಯೋಜನೆಯನ್ನು ಪಕ್ಕಕ್ಕೆ ಇಟ್ಟಿದ್ದು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ನಿಧಿಯಡಿ ಕೊಠಡಿಗಳನ್ನು ನಿರ್ಮಿಸಲು ಪ್ರಸ್ತಾವ ಸಿದ್ಧಪಡಿಸಿದೆ. ಆದರೆ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ.



ಪಾಳುಬಿದ್ದ ಬೈಲಹೊಂಗಲ ಪಟ್ಟಣದ ಕನ್ನಡ ಗಂಡು ಮಕ್ಕಳ ಶಾಲೆ

**Source: Prajavani, p.4, Dec.24, 2023**

ಪ್ರಜಾವಾಣಿ

# ಶಿಕ್ಷಕರ ಜೇಬಿಗೆ ಹೊರೆಯಾದ ಮೊಟ್ಟೆ

• ಚಂದ್ರಹಾಸ ಹಿರೇಮಳಲಿ

**ಬೆಂಗಳೂರು:** ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟಕ್ಕೆ ನೀಡುವ ಬೇಯಿಸಿದ ಮೊಟ್ಟೆಯ ಹೆಚ್ಚುವರಿ ಖರ್ಚು ಭರಿಸಲು ಶಿಕ್ಷಕರು ಹರಸಾಹಸ ಮಾಡುತ್ತಿದ್ದಾರೆ.

ಮೊಟ್ಟೆ ಧಾರಣೆ ನಿರಂತರವಾಗಿ ಏರಿಕೆಯಾಗುತ್ತಿದ್ದು, ಮೊಟ್ಟೆ ಖರೀದಿಸಲು ಶಾಲಾ ಶಿಕ್ಷಣ ಇಲಾಖೆ ನೀಡುವ ಮೊತ್ತಕ್ಕೂ, ಮಾರುಕಟ್ಟೆ ದರಕ್ಕೂ ಬಹಳ ವ್ಯತ್ಯಾಸವಾಗುತ್ತಿರುವುದು ಶಿಕ್ಷಕರಿಗೆ ಹೊರೆಯಾಗಿ ಪರಿಣಮಿಸಿದೆ.



ಪೌಷ್ಟಿಕಾಂಶದ ಕೊರತೆ ನೀಗಿಸಲು ರಾಜ್ಯದ ಸರ್ಕಾರಿ, ಅನುದಾನಿತ ಶಾಲೆಗಳ 1ರಿಂದ 10ನೇ ತರಗತಿಯವರೆಗಿನ ಮಕ್ಕಳಿಗೆ ವಾರದಲ್ಲಿ ಎರಡು ದಿನ ಮೊಟ್ಟೆ ನೀಡುವುದನ್ನು ಶಾಲಾ ಶಿಕ್ಷಣ ಇಲಾಖೆ ಕಡ್ಡಾಯಗೊಳಿಸಿದೆ. ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ 38.37 ಲಕ್ಷ ಮಕ್ಕಳು ಮೊಟ್ಟೆಗೆ ಬೇಡಿಕೆ ಸಲ್ಲಿಸಿದ್ದಾರೆ.

ಪ್ರತಿ ಮಗುವಿಗೂ ವರ್ಷದಲ್ಲಿ 100 ಮೊಟ್ಟೆಗಳನ್ನು ನೀಡಲಾಗುತ್ತಿದೆ. ಒಂದು ಮೊಟ್ಟೆಗೆ ₹6 ನಿಗದಿ ಮಾಡಲಾಗಿದೆ.

7ನೇ ಪುಟ ನೋಡಿ

ಪ್ರಜಾವಾಣಿ

ಶಿಕ್ಷಕರ ಜೇಬಿಗೆ ಹೊರೆಯಾದ ಮೊಟ್ಟೆ

ಒಂದನೇ ಪುಟದಿಂದ...

ಈ ಹಣವನ್ನು ಶಾಲಾ ಶಿಕ್ಷಣ ಇಲಾಖೆ ಆಯಾ ಶಾಲೆಗಳ ಮುಖ್ಯ ಶಿಕ್ಷಕರು ಹಾಗೂ ಶಾಲಾಭಿವೃದ್ಧಿ ಸಮಿತಿಯ ಜಂಟಿ ಖಾತೆಗೆ ಹಾಕುತ್ತದೆ. ಅದರಲ್ಲಿ ಮೊಟ್ಟೆ ಬೇಯಿಸಲು ಇಂಧನ ವೆಚ್ಚ 30 ಪೈಸೆ, ಮೊಟ್ಟೆಯ ಗಟ್ಟಿಪದರ (ಪ್ಪೋಡು) ಸುಲಿದು ಕೊಡುವ ಬಿಸಿಯೂಟ ತಯಾರಕರು ಮತ್ತು ಸಹಾಯಕರಿಗೆ 30 ಪೈಸೆ, ಸಾಗಣೆ ವೆಚ್ಚ 20 ಪೈಸೆ ನೀಡಬೇಕಿದೆ. ಮೊಟ್ಟೆ ಖರೀದಿಗೆ ಉಳಿಯುವುದು ₹5.20 ಮಾತ್ರ.

**ದರ–ಹೊಂದಾಣಿಕೆ ಕಷ್ಟ:** ನವೆಂಬರ್‌ನಲ್ಲಿ ₹6 ಇದ್ದ ಮೊಟ್ಟೆಯ ಚಿಲ್ಲರೆ ಮಾರಾಟ ದರ ಪ್ರಸಕ್ತ ತಿಂಗಳು ₹7 ದಾಟಿದೆ. ಮೊಟ್ಟೆಯ ಬೇಡಿಕೆ ಹೆಚ್ಚುತ್ತಲೇ ಇದ್ದು, ದರ ಇನ್ನಷ್ಟು ಹೆಚ್ಚಳವಾಗುವ ಸಾಧ್ಯತೆ ಇದೆ. ಇಂತಹ ಸಮಯದಲ್ಲಿ ಶಿಕ್ಷಕರು ಮೊಟ್ಟೆಯ ವ್ಯತ್ಯಾಸದ ಹಣ ಭರಿಸುವುದು ಕಷ್ಟವಾಗಿದೆ.

‘ಕಡಿಮೆ ಮಕ್ಕಳು ಇರುವ ಶಾಲೆಗಳಲ್ಲಿ ಶಿಕ್ಷಕರು ಹೇಗೋ ತಾವೇ ನಿಭಾಯಿಸುತ್ತಾರೆ. ನಮ್ಮ ಶಾಲೆಯಲ್ಲಿ 300ಕ್ಕೂ ಹೆಚ್ಚು ಮಕ್ಕಳು ಇದ್ದಾರೆ. ತಿಂಗಳಿಗೆ ₹5 ಸಾವಿರ ಹೆಚ್ಚುವರಿ ಹೊಂದಾಣಿಕೆ ಮಾಡಬೇಕಿದೆ. ಕೆಲ ಪೋಷಕರು ಒಂದೆರಡು ಬಾರಿ ಸಹಾಯ ಮಾಡಿದರು. ಒಂದಷ್ಟು ವಾರ ಶಿಕ್ಷಕರೇ ಭರಿಸಿದ್ದೇವೆ’ ಎನ್ನುತ್ತಾರೆ ಬೆಂಗಳೂರು ಗ್ರಾಮಾಂತರ ಹಿರಿಯ ಪ್ರಾಥಮಿಕ ಶಾಲೆಯೊಂದರ ಮುಖ್ಯ ಶಿಕ್ಷಕ.

‘ವಾರದಲ್ಲಿ ಎರಡು ದಿನ ನಾವೇ ಅಂಗಡಿ ಹೋಗಿ ತೆಗೆದುಕೊಂಡು ಬರಬೇಕು. ಶಾಲೆಯಿಂದ ಅಂಗಡಿಗೆ 4.5 ಕಿ.ಮೀ ಆಗುತ್ತದೆ. ಶಾಲೆ ಬಳಿಗೆ ತಂದುಕೊಡಲು ಹೆಚ್ಚು ಹಣ ಕೇಳುತ್ತಾರೆ. ಕೆಲವೊಮ್ಮೆ ಹಲವು ಮೊಟ್ಟೆಗಳು ಒಡೆದು ಹೋಗುತ್ತವೆ. ಒಡೆದ, ಹಾಳಾದ ಮೊಟ್ಟೆಗಳಿಗೂ ಶಿಕ್ಷಕರೇ ಜವಾಬ್ದಾರರು’ ಎನ್ನುತ್ತಾರೆ ಹೊಸನಗರ ತಾಲ್ಲೂಕಿನ ಸರ್ಕಾರಿ ಪ್ರೌಢಶಾಲೆಯೊಂದರ ಶಿಕ್ಷಕ.

**ಬಾಳೆಹಣ್ಣು, ಚಿಕ್ಕಿಗೆ ಆದ್ಯತೆ:** ಬೇಡಿಕೆ ಸಲ್ಲಿಸುವ ಮಕ್ಕಳಿಗೆ ಕಡ್ಡಾಯವಾಗಿ ಮೊಟ್ಟೆ ನೀಡಬೇಕು ಎಂಬ ನಿಯಮವಿದ್ದರೂ, ದರ ಏರಿಕೆಯ ಕಾರಣ ಗ್ರಾಮೀಣ ಪ್ರದೇಶಗಳಲ್ಲಿ ಸುಲಭವಾಗಿ, ಕಡಿಮೆ ದರಕ್ಕೆ ದೊರೆಯುವ ಬಾಳೆಹಣ್ಣು ನೀಡಲು ಹೆಚ್ಚಿನ ಶಾಲೆಗಳು ಒಲವು ತೋರಿವೆ. ಹಲವು ಸರ್ಕಾರಿ ಶಾಲೆಗಳ ಶಿಕ್ಷಕರು ಮೇಲಧಿಕಾರಿಗಳ ಭಯದಿಂದ ತಾವೇ ಹಣ ಹಾಕಿ ಮೊಟ್ಟೆಯ ವ್ಯತ್ಯಾಸದ ದರ ಹೊಂದಾಣಿಕೆ ಮಾಡಿಕೊಂಡರೆ, ಕೆಲ ಶಾಲೆಗಳು ಪೋಷಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಚಿಕ್ಕಿ, ಬಾಳೆಹಣ್ಣು ನೀಡುತ್ತಿವೆ. ಕೆಲ ಅನುದಾನಿತ ಶಾಲೆಗಳಲ್ಲಿ ವಾರಕ್ಕೆ ಒಂದೇ ದಿನ ಮೊಟ್ಟೆ ನೀಡುತ್ತಿರುವ ಪ್ರಕರಣಗಳಿವೆ.

‘ನಮ್ಮ ಶಾಲೆಯಲ್ಲಿ ಮೊಟ್ಟೆ ತಿನ್ನುವವರ ಸಂಖ್ಯೆ ಕಡಿಮೆ ಇರುವ ಕಾರಣ ಹೊಂದಾಣಿಕೆಯಾಗುತ್ತಿದೆ. ನೆರೆಯ ಶಾಲೆಗಳಲ್ಲಿ ಮೊಟ್ಟೆಗೆ ಬೇಡಿಕೆ ಇದ್ದರೂ, ಅನಿವಾರ್ಯವಾಗಿ ಬಾಳೆಹಣ್ಣು ನೀಡುತ್ತಿದ್ದಾರೆ’ ಎನ್ನುತ್ತಾರೆ ಧಾರವಾಡದ ಸರ್ಕಾರಿ ಶಾಲೆಯೊಂದರ ಶಿಕ್ಷಕಿ.




**ಚಳಿಗಾಲ, ವರ್ಷಾಂತ್ಯದಲ್ಲಿ ಮೊಟ್ಟೆ ಧಾರಣೆ ಏರಿಕೆ ಸಹಜ. ಹಾಗಾಗಿ, ಸರಾಸರಿ ದರ ನಿಗದಿ ಮಾಡಿ 10 ತಿಂಗಳಿಗೆ ನೀಡಲಾಗುತ್ತದೆ. ಚಿಕ್ಕಿ, ಬಾಳೆಹಣ್ಣಿಗೂ ₹6 ಇದೆ. ಎಲ್ಲ ಅಂಶ ಪರಿಗಣಿಸಿದರೆ ಹೊರೆಯಾಗದು**

**ಬಿ.ಬಿ.ಕಾವೇರಿ,** ಆಯುಕ್ತೆ, ಶಿಕ್ಷಣ ಇಲಾಖೆ

**ಪ್ರತಿ ತಿಂಗಳು ಮಾರುಕಟ್ಟೆ ಧಾರಣೆಗೆ ಅನುಗುಣವಾಗಿ ಸರ್ಕಾರ ಹಣ ಬಿಡುಗಡೆ ಮಾಡಬೇಕು. ಟೆಂಡರ್ ಮೂಲಕವೇ ಶಾಲೆಗಳಿಗೆ ಮೊಟ್ಟೆ ಪೂರೈಸಬೇಕು**

**ಶಿವರಾಜ್ ಡಿ.ಪ್ರಭು**

ಪೋಷಕ, ಸಾಮಾಜಿಕ ಕಾರ್ಯಕರ್ತ

## ಮೊಟ್ಟೆ ಪೂರೈಸದ ಇಸ್ಕಾನ್

ಬೆಂಗಳೂರಿನ ಶಾಲೆಗಳಿಗೆ ಇಸ್ಕಾನ್ ಹೊರತುಪಡಿಸಿ, ಬಿಸಿಯೂಟ ಪೂರೈಸುವ ಇತರೆ ಸಂಸ್ಥೆಗಳು ಮೊಟ್ಟೆಯನ್ನೂ ಸರಬರಾಜು ಮಾಡುತ್ತಿವೆ. ಬೆಂಗಳೂರು ನಗರದ ಶೇ 70ರಷ್ಟು ಶಾಲೆಗಳಿಗೆ ಇಸ್ಕಾನ್ ಬಿಸಿಯೂಟ ಪೂರೈಸುತ್ತದೆ. ಇಂತಹ ಶಾಲೆ ಗಳ ಖಾತೆಗೆ ಶಾಲಾ ಶಿಕ್ಷಣ ಇಲಾಖೆ ಮೊಟ್ಟೆಯ ಹಣ ಹಾಕುತ್ತದೆ. ಶಿಕ್ಷಕರೇ ಮೊಟ್ಟೆ ದರದ ವ್ಯತ್ಯಾಸದ ಹೆಚ್ಚುವರಿ ಹಣ ಹೊಂದಾಣಿಕೆ ಮಾಡಿಕೊಳ್ಳುತ್ತಿದ್ದಾರೆ.

**Source: Prajavani, p.1-7, Dec.27, 2023**

ಪ್ರಜಾವಾಣಿ

ಬೆಂಗಳೂರಿನ ಅಂದ್ರಹಳ್ಳಿ ಸರ್ಕಾರಿ ಶಾಲೆಯಲ್ಲಿ ಘಟನೆ • ಪೋಷಕರ ಪ್ರತಿಭಟನೆ • ಮುಖ್ಯ ಶಿಕ್ಷಕಿ ಅಮಾನತು

# ಮಕ್ಕಳಿಂದ ಮತ್ತೆ ಶೌಚಾಲಯ ಸ್ವಚ್ಛತೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಂದ್ರಹಳ್ಳಿ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಶೌಚಾಲಯವನ್ನು ಇಬ್ಬರು ಮಕ್ಕಳಿಂದ ಸ್ವಚ್ಛಗೊಳಿಸಿರುವ ಆರೋಪದ ಮೇಲೆ ಶಾಲೆಯ ಮುಖ್ಯ ಶಿಕ್ಷಕಿ ಟಿ. ಲಕ್ಷ್ಮಿದೇವಮ್ಮ ಅವರನ್ನು ಅಮಾನತು ಮಾಡಲಾಗಿದೆ.

ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿರುವ ಅಂದ್ರಹಳ್ಳಿಯ ಸರ್ಕಾರಿ ಶಾಲೆಯ ಶೌಚಾಲಯ ಗಲೀಜಾಗಿತ್ತು. ಕೆಲ ದಿನಗಳ ಹಿಂದೆಯಷ್ಟೇ ಇಬ್ಬರು ವಿದ್ಯಾರ್ಥಿಗಳು, ಶೌಚಾಲಯ ಸ್ವಚ್ಛಗೊಳಿಸುವ ಆ್ಯಸಿಡ್ ಹಾಕಿ ಪೊರಕೆ ಹಿಡಿದು ಸ್ವಚ್ಛಗೊಳಿಸಿದ್ದರು. ಇದೇ ಸಂದರ್ಭದಲ್ಲಿ ಶೌಚಾಲಯಕ್ಕೆ ಬಂದಿದ್ದ ಇಬ್ಬರು ಸ್ಥಳೀಯರು, ಮೊಬೈಲ್ ಕ್ಯಾಮೆರಾದಲ್ಲಿ ವಿಡಿಯೊ ಚಿತ್ರೀಕರಿಸಿದ್ದರು.

ಮಕ್ಕಳಿಂದ ಶೌಚಾಲಯ ಸ್ವಚ್ಛಗೊಳಿಸಿದ್ದ ಮುಖ್ಯ ಶಿಕ್ಷಕಿ ಹಾಗೂ ಶಿಕ್ಷಕರ ವಿರುದ್ಧ ಪೋಷಕರು ಆಕ್ರೋಶ ವ್ಯಕ್ತಪಡಿಸಿದ್ದರು.

ಈ ಬಗ್ಗೆ ಮಾಹಿತಿ ಗೊತ್ತಾಗುತ್ತಿದ್ದಂತೆಯೇ ಶಾಲೆಗೆ ಭೇಟಿ ನೀಡಿದ ಉತ್ತರ ವಲಯ-01ರ ಕ್ಷೇತ್ರ ಶಿಕ್ಷಣಾಧಿಕಾಅರಿ ಕೆ.ಜಿ. ಆಂಜನಪ್ಪ ಅವರು ವಿದ್ಯಾರ್ಥಿಗಳು ಹಾಗೂ ಇತರರ ಹೇಳಿಕೆ ದಾಖಲಿಸಿಕೊಂಡು, ಉಪ ನಿರ್ದೇಶಕರಿಗೆ ವರದಿ ಸಲ್ಲಿಸಿದ್ದರು. ವರದಿ ಪರಿಗಣಿಸಿದ ಉತ್ತರ ಜಿಲ್ಲೆಯ ಉಪನಿರ್ದೇಶಕ ಲೋಹಿತಾಶ್ವ ರೆಡ್ಡಿ ಅವರು, ಲಕ್ಷ್ಮೀದೇವಮ್ಮ ಅವರನ್ನು ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ.

**ಸಭೆಯಲ್ಲಿ ಪ್ರಸ್ತಾಪ:** 'ಇಲಾಖೆ ಪ್ರಗತಿ ಪರಿಶೀಲನೆ ಸಂಬಂಧ ಕಚೇರಿಯಲ್ಲಿ ಸಭೆ ನಡೆಸಲಾಗುತ್ತಿತ್ತು. ಇದೇ ಸಂದರ್ಭದಲ್ಲಿ ಸಭೆಗೆ ಬಂದಿದ್ದ ಸ್ಥಳೀಯರೊಬ್ಬರು, ಮಕ್ಕಳು ಶೌಚಾಲಯ ಸ್ವಚ್ಛಗೊಳಿಸಿದ್ದ ವಿಡಿಯೊ ತೋರಿಸಿದ್ದರು. ಇಂಥ ಘಟನೆಗಳು ಪದೇ ಪದೆ ನಡೆಯುತ್ತಿರುವುದಾಗಿ ದೂರಿದ್ದರು. ಸಭೆಯನ್ನು ಅರ್ಧಕ್ಕೆ ಮೊಟಕುಗೊಳಿಸಿ ಶಾಲೆಗೆ ಭೇಟಿ ನೀಡಿದೆ' ಎಂದು ಶಿಕ್ಷಣಾಧಿಕಾರಿ ಕೆ.ಜಿ. ಆಂಜನಪ್ಪ ತಿಳಿಸಿದರು.

'ಸ್ಥಳೀಯ ಸಂಘಟನೆಗಳ ಪದಾಧಿಕಾರಿಗಳ ಜೊತೆ ಪೋಷಕರು ಪ್ರತಿಭಟನೆ ನಡೆಸುತ್ತಿದ್ದರು. ಎಲ್ಲರ ಅಹವಾಲು ಆಲಿಸಿದೆ. ಶೌಚಾಲಯ ಸ್ವಚ್ಛಗೊಳಿಸಿದ್ದ ಇಬ್ಬರು ಮಕ್ಕಳ ಪೈಕಿ, ಒಬ್ಬನನ್ನು ಮಾತನಾಡಿಸಿ ಮಾಹಿತಿ ಪಡೆದಿದ್ದೇನೆ. ಇನ್ನೊಬ್ಬ ವಿದ್ಯಾರ್ಥಿ, ಶಾಲೆಗೆ ಗೈರಾಗಿದ್ದಾನೆ. ಆತನನ್ನೂ ಮಾತನಾಡಿಸುವೆ' ಎಂದು ಹೇಳಿದರು.

**ಹಲವು ವರ್ಷಗಳ ಸ್ಥಿತಿ:** 'ಅಂದ್ರಹಳ್ಳಿ ಸರ್ಕಾರಿ ಶಾಲೆಯ ಬಗ್ಗೆ ಎಲ್ಲರೂ ನಿರ್ಲಕ್ಷ್ಯ ವಹಿಸಿದ್ದಾರೆ. ಶೌಚಾಲಯ ಸ್ಥಿತಿ ತುಂಬಾ ಹದಗೆಟ್ಟಿದೆ. ಇಂಥ ಶೌಚಾಲಯವನ್ನು ವಿದ್ಯಾರ್ಥಿಗಳಿಂದಲೇ ಪದೇ ಪದೇ ಸ್ವಚ್ಛಗೊಳಿಸಲಾಗುತ್ತಿದೆ' ಎಂದು ಪೋಷಕರು ಆಕ್ರೋಶ ವ್ಯಕ್ತಪಡಿಸಿದರು.






ಮಕ್ಕಳಿಂದ ಶಾಲೆಯ ಶೌಚಾಲಯ ಸ್ವಚ್ಛಗೊಳಿಸಿರುವುದನ್ನು ಖಂಡಿಸಿ ಅಂದ್ರಹಳ್ಳಿಯ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಮುಂದೆ ವಿದ್ಯಾರ್ಥಿಗಳ ಪೋಷಕರು ಪ್ರತಿಭಟಿಸಿದರು (ಎಡಚಿತ್ರ) ಶಾಲೆಯ ಶೌಚಾಲಯವೊಂದನ್ನು ಬಾಲಕ ಸ್ವಚ್ಛಗೊಳಿಸಿದ ದೃಶ್ಯ

## 'ಮುಖ್ಯ ಶಿಕ್ಷಕಿ ವಿರುದ್ಧ ಎಫ್‌ಐಆರ್'

ಮಕ್ಕಳಿಂದ ಶೌಚಾಲಯ ಸ್ವಚ್ಛಗೊಳಿಸಿದ ಆರೋಪದಡಿ ಶಾಲೆಯ ಮುಖ್ಯ ಶಿಕ್ಷಕಿ ಲಕ್ಷ್ಮಿದೇವಮ್ಮ ವಿರುದ್ಧ ಬ್ಯಾಡರಹಳ್ಳಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಘಟನೆ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿ ಆಂಜನಪ್ಪ ದೂರು ನೀಡಿದ್ದಾರೆ. ಅದರನ್ವಯ ಮುಖ್ಯಶಿಕ್ಷಕಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪುರಾವೆಗಳನ್ನು ಸಂಗ್ರಹಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

## 'ಶಾಲೆಗೆ ಬಂದಾಗಿನಿಂದ ಕೆಲವರ ಗಲಾಟೆ'

'ಶಾಲೆಯಲ್ಲಿ 643 ಮಕ್ಕಳಿದ್ದಾರೆ. ಶೌಚಾಲಯ ಸ್ವಚ್ಛಗೊಳಿಸಲು ಪ್ರತ್ಯೇಕ ಸಿಬ್ಬಂದಿ ಇದ್ದಾರೆ. ಮಕ್ಕಳಿಗೆ ಶೌಚಾಲಯ ಸ್ವಚ್ಛಗೊಳಿಸುವಂತೆ ನಾನು ಹೇಳಿಲ್ಲ. ಅಂದು ನಾನು ರಜೆ ಮೇಲಿದ್ದೆ' ಎಂದು ಮುಖ್ಯ ಶಿಕ್ಷಕಿ ಲಕ್ಷ್ಮಿದೇವಮ್ಮ ಸುದ್ದಿಗಾರರಿಗೆ ತಿಳಿಸಿದರು.

'ವಿಡಿಯೊ ನೋಡಿದಾಗಲೇ ನನಗೂ ವಿಷಯ ಗೊತ್ತಾಗಿದೆ. ನಾನು ಮುಖ್ಯ ಶಿಕ್ಷಕಿಯಾಗಿ ಶಾಲೆಗೆ ಬಂದಾಗಿನಿಂದಲೂ ಕೆಲವರು ಸುಖಾಸುಮ್ಮನೇ ಬಂದು ಗಲಾಟೆ ಮಾಡುತ್ತಿದ್ದಾರೆ' ಎಂದು ಅವರು ದೂರಿದರು.

## ಆಡಳಿತ ಯಂತ್ರ ಕುಸಿದಿದೆ: ಅಶೋಕ ಕಿಡಿ

ರಾಜ್ಯದಲ್ಲಿ ಆಡಳಿತ ಯಂತ್ರ ಸಂಪೂರ್ಣ ಕುಸಿದಿರುವುದರ ಪರಿಣಾಮ ಮಾಲೂರಿನ ಬಳಿಕ ಅಂದ್ರಹಳ್ಳಿಯಲ್ಲಿ ಶಾಲಾ ಮಕ್ಕಳಿಂದಲೇ ಶೌಚಾಲಯವನ್ನು ಸ್ವಚ್ಛ ಮಾಡಿಸಿರುವ ಘಟನೆ ಮರುಕಳಿಸಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದರು.

ಅಂದ್ರಹಳ್ಳಿ ಸರ್ಕಾರಿ ಶಾಲೆಗೆ ಭೇಟಿ ನೀಡಿ, ಪರಿಶೀಲಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಮಾಲೂರಿನ ಪ್ರಕರಣದ ಕಹಿ ನೆನಪು ಮಾಸುವುದಕ್ಕೂ ಮೊದಲೇ ವಿಧಾನಸೌಧದ ಕೂಗಳತೆ ದೂರದಲ್ಲಿರುವ ಶಾಲೆಯಲ್ಲೇ ಅದೇ ರೀತಿಯ ಘಟನೆ ಮರುಕಳಿಸಿದೆ. ಇದು ದುರದೃಷ್ಟಕರ ಎಂದರು.

ಹಿರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾನೂನಿನ ಅರಿವು ಇಲ್ಲದಂತೆ ವರ್ತಿಸುತ್ತಿದ್ದಾರೆ. ಇಲಾಖೆ ಮುಖ್ಯಸ್ಥರು ಸರಿ ಇದ್ದರೆ ಇಡೀ ಇಲಾಖೆಯ ವ್ಯವಸ್ಥೆ ಸರಿ ಇರುತ್ತದೆ. ಈಗಾಗಲೇ ಒಂದು ಘಟನೆ ನಡೆದಿರುವ ಬೆನ್ನಲ್ಲೇ ಮತ್ತೆ ಮಕ್ಕಳ ಕೈಯಲ್ಲೇ ಶೌಚಾಲಯ ಸ್ವಚ್ಛಗೊಳಿಸಲಾಗುತ್ತಿದೆ ಎಂದರೆ ಏನರ್ಥ? ಈ ಸರ್ಕಾರ ಜನತೆಯ ಪಾಲಿಗೆ ಸತ್ತಂತಿದೆ. ಆದ್ದರಿಂದಲೇ ಇಂಥ ಪ್ರಕರಣಗಳು ಮರುಕಳಿಸುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

## ಗಮನಕ್ಕೆ ಬಂದಿಲ್ಲ: ಎಚ್‌ಸಿಎಂ

ಮೈಸೂರು: 'ಬೆಂಗಳೂರಿನ ಯಶವಂತಪುರದ ಅಂದ್ರಹಳ್ಳಿಯ ಸರ್ಕಾರಿ ಶಾಲೆಯಲ್ಲಿ ವಿದ್ಯಾರ್ಥಿಗಳಿಂದ ಶೌಚಾಲಯ ಸ್ವಚ್ಛಗೊಳಿಸಿದ ವಿಷಯ ಗಮನಕ್ಕೆ ಬಂದಿಲ್ಲ' ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಶಾಲೆ ಅಥವಾ ಹಾಸ್ಟೆಲ್ ಹಂತದಲ್ಲಿ ಏನಾಗಿದೆ ಎಂಬುದು ಗೊತ್ತಾಗುವುದಿಲ್ಲ. ಎಲ್ಲವನ್ನೂ ಗಮನಿಸುವುದಕ್ಕಾಗಿಯೇ ವಿಚಕ್ಷಣ ದಳ ರಚಿಸಲು ಸೂಚಿಸಿರುವೆ' ಎಂದರು.

'ಅಲ್ಲೊಂದು, ಇಲ್ಲೊಂದು ಘಟನೆ ನಡೆಯುತ್ತದೆ. ಇಂಥವು ಸಾಮಾನ್ಯವಾಗಿ ಹೋಗಿವೆ ಎನ್ನುವುದು ಬೇಡ. ನಾವು ಯಾರನ್ನೂ ರಕ್ಷಿಸುವುದಿಲ್ಲ' ಎಂದರು.

**Source: Prajavani, 23 Dec, 2023., p.8**

ಪ್ರಜಾವಾಣಿ

## ಎಐಡಿಎಸ್‌ಒ ಸಮೀಕ್ಷೆ: ವಿದ್ಯಾರ್ಥಿಗಳು, ಬೋಧಕರು, ಪೋಷಕರು ಭಾಗಿ

# ವಿದ್ಯಾರ್ಥಿಗಳಿಗೆ ಬೇಡ 4 ವರ್ಷದ ಪದವಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಷ್ಟ್ರೀಯ ಶಿಕ್ಷಣ ನೀತಿಯ ಭಾಗವಾಗಿ ಹಿಂದಿನ ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ನಾಲ್ಕು ವರ್ಷಗಳ ಪದವಿಯನ್ನು ಕೈಬಿಡಬೇಕು ಎಂದು ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು, ಬೋಧಕರು, ಪೋಷಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್' (ಎಐಡಿಎಸ್‌ಒ) ನಡೆಸಿದ ಸಮೀಕ್ಷೆಯಲ್ಲಿ ಶೇ 83ರಷ್ಟು ವಿದ್ಯಾರ್ಥಿಗಳು ನಾಲ್ಕು ವರ್ಷದ ಪದವಿಗೆ ವಿರುದ್ಧವಾಗಿ ಮತ ಚಲಾಯಿಸಿದ್ದಾರೆ.

9 ಸರ್ಕಾರಿ ವಿಶ್ವವಿದ್ಯಾಲಯಗಳು, 82 ಸರ್ಕಾರಿ ಪದವಿ ಕಾಲೇಜುಗಳು, 12 ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳು ಹಾಗೂ 15 ಸರ್ಕಾರಿ ವಸತಿ ನಿಲಯಗಳಲ್ಲಿ ಸಮೀಕ್ಷೆ ನಡೆಸಲಾಗಿತ್ತು. 23,120 ಮಂದಿ ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದರು. ಪ್ರತಿ ವ್ಯಕ್ತಿಗೂ 9 ಪ್ರಶ್ನೆಗಳನ್ನು ಲಿಖಿತ ರೂಪದಲ್ಲಿ ಕೇಳಲಾಗಿದೆ. ಸಂಗ್ರಹಿಸಿದ 1.99 ಲಕ್ಷ ಪ್ರತಿಕ್ರಿಯೆಗಳಲ್ಲಿ ಶೇ 20ರಷ್ಟು ಸರಾಸರಿ ಮಾದರಿಗಳನ್ನು ಪರಿಗಣಿಸಲಾಗಿದೆ.

ಶಿಕ್ಷಣದ ಸಂಪೂರ್ಣ ಆರ್ಥಿಕ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಳ್ಳಬೇಕು, ನವೋದಯ ಚಳವಳಿಯ ಚಿಂತಕರು ಹಾಗೂ ಸುಭಾಷ್‌ಚಂದ್ರ ಬೋಸ್, ಭಗತ್‌ಸಿಂಗ್ ಸೇರಿದಂತೆ ಸ್ವಾತಂತ್ರ್ಯ ಸಂಗ್ರಾಮದ ಕ್ರಾಂತಿಕಾರಿ ಹೋರಾಟಗಾರರ ಕುರಿತು ಹೆಚ್ಚು ಪಾಠಗಳನ್ನು ಅಳವಡಿಸಬೇಕು, ಎಲ್ಲಾ ಜಿಲ್ಲೆಗಳಲ್ಲೂ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳನ್ನು ಸ್ಥಾಪಿಸಬೇಕು ಎಂಬ ಬಗ್ಗೆ ಹೆಚ್ಚಿನ ಒಲವು ವ್ಯಕ್ತವಾಗಿದೆ. ಈ ಸಮೀಕ್ಷಾ ವರದಿಯನ್ನು ರಾಜ್ಯ ಶಿಕ್ಷಣ ನೀತಿ ಆಯೋಗಕ್ಕೆ ಸಲ್ಲಿಸಲಾಗಿದೆ ಎಂದು ಸಂಘಟನೆಯ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಹೇಳಿದ್ದಾರೆ.

ಯಾವುದೇ ಜಾತಿ, ವರ್ಗ, ಲಿಂಗ, ಭಾಷೆಯ ಧರ್ಮದ ಆಧಾರದ ಮೇಲೆ ಶಿಕ್ಷಣ ನೀಡಬಾರದು, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ತಾರತಮ್ಯಗಳಿಗೆ ಅವಕಾಶ ಕೊಡುವ ಪಠ್ಯಗಳನ್ನು ಅಳವಡಿಸಬಾರದು. ರಾಜ್ಯದ ಎಲ್ಲ ಮಕ್ಕಳಿಗೂ ಶಿಕ್ಷಣ ತಲುಪಬೇಕು. ಎಷ್ಟೋ ಕುಟುಂಬಗಳ ಮಕ್ಕಳು ಕೂಲಿ ಮಾಡಿಕೊಂಡು ಕಾಲೇಜು ಶಿಕ್ಷಣ ಪಡೆಯುತ್ತಿದ್ದಾರೆ. ಪರೀಕ್ಷಾ ಶುಲ್ಕ ಪಾವತಿಸಲೂ ಸಾಧ್ಯವಾಗದ ಎಷ್ಟೋ ಮಕ್ಕಳು ಇದ್ದಾರೆ. ಸಮೀಕ್ಷೆ ನಡೆಸಲು ಹೋದಾಗಲೂ ಸಾಕಷ್ಟು ಸಂಖ್ಯೆಯ ಮಕ್ಕಳು ಸಿಗಲಿಲ್ಲ. ಅವರ ಅಭಿಪ್ರಾಯ ದಾಖಲಿಸಲು ಸಾಧ್ಯವಾಗಲಿಲ್ಲ. ಹಾಗಾಗಿ, ಸರ್ಕಾರ ಎಲ್ಲರಿಗೂ ಉಚಿತವಾಗಿ ಸಿಗುವ, ಸೌಹಾರ್ದ ಶಿಕ್ಷಣ ನೀತಿ ರೂಪಿಸಬೇಕು ಎನ್ನುವ ಆಶಯ ಇಟ್ಟುಕೊಂಡು ಸಮೀಕ್ಷೆ ನಡೆಸಲಾಗಿದೆ ಎಂದು ಸಂಘಟನೆ ಹೇಳಿದೆ.

**ಯಾವುದಕ್ಕೆ ಎಷ್ಟು ಅಂಕ**

| ವಿಷಯ | ಸರಿ | ತಪ್ಪು |
|---|---|---|
| | (ಶೇಕಡವಾರು) | |
| ವಿದ್ಯಾರ್ಥಿಗಳಿಂದ ದೇಣಿಗೆ ಪಡೆಯುವುದು | 4.29 | 95.71 |
| ಸರ್ಕಾರಿ ಶಾಲೆಗಳ ಜವಾಬ್ದಾರಿ ಸರ್ಕಾರದ್ದು | 98.52 | 1.48 |
| ನಾಲ್ಕು ವರ್ಷಗಳ ಪದವಿ ಅಳವಡಿಕೆ | 17 | 83 |
| ಶಾಲೆಗಳ ವಿಲೀನ/ಮುಚ್ಚುವುದು | 01 | 99 |
| ಸರ್ಕಾರಿ ಶಾಲೆಗೆ ಕಾರ್ಪೊರೇಟ್ ನೆರವು | 20 | 80 |
| ಶಿಕ್ಷಣಕ್ಕೆ ವಿದೇಶಿ ಬಂಡವಾಳ/ವಿದೇಶಿ ವಿವಿ | 14 | 86 |
| ಕ್ರಾಂತಿಕಾರಿಗಳು, ನವೋದಯ ಚಿಂತಕರ ಪಾಠಗಳು | 97 | 03 |
| ಪಠ್ಯಗಳಲ್ಲಿ ಮೌಲ್ಯಗಳ ಕಡೆಗಣನೆ | 7.24 | 92.76 |
| ಎಲ್ಲ ಜಿಲ್ಲೆಗಳಲ್ಲೂ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಬೇಕು | 96.82 | 3.18 |

**Source: Prajavani, 29 Dec, 2023., p.6**

ರಾಜ್ಯದಲ್ಲಿ 48,293 ಸರಕಾರಿ ಶಾಲೆಗಳು | ಚುರುಕಾಗದ ಆಸ್ತಿ ಸಂರಕ್ಷಣಾ ಅಭಿಯಾನ

# 19 ಸಾವಿರ ಶಾಲೆಗಳ ಆಸ್ತಿ ಲೆಕ್ಕ ಬಾಕಿ


■ **ಆದರ್ಶ ಕೋಡಿ** ಬೆಂಗಳೂರು ಗ್ರಾ.
adarshkodi15@gmail.com

■ **ದೇವರಾಜ್ ಕನಕಪುರ** ಬೆಂಗಳೂರು
devaraj.l@timesgroup.com


ರಾಜ್ಯದ ಸರಕಾರಿ ಶಾಲೆಗಳಲ್ಲಿ ಅರ್ಧಕ್ಕಿಂತ ಹೆಚ್ಚಿನ ಶಾಲೆಗಳ ಆಸ್ತಿ ಪಕ್ಕಾ ಇದ್ದರೆ, ಇನ್ನೂ ಸಾವಿರಾರು ಶಾಲೆಗಳ ಪತ್ರ ಪಕ್ಕಾ ಮಾಡುವುದು ಬಾಕಿ ಉಳಿದಿದೆ. ದಶಕಗಳಿಂದ ಶಾಲೆ ನಡೆಸುತ್ತಿದ್ದರೂ, ದಾಖಲೆ ಪತ್ರಗಳು ಮಾತ್ರ ಶಾಲೆ ಹೆಸರಿಗೆ ಸೇರಿಲ್ಲ.

ರಾಜ್ಯದಲ್ಲಿ 43,564 ಸರಕಾರಿ ಪ್ರಾಥಮಿಕ ಶಾಲೆಗಳ ಪೈಕಿ 17,490 ಶಾಲೆಗಳು ಮತ್ತು 4,729 ಸರಕಾರಿ ಪ್ರೌಢಶಾಲೆಗಳ ಪೈಕಿ 1,446 ಶಾಲೆಗಳು ತಮ್ಮ ಶಾಲಾ ಹೆಸರಲ್ಲಿ ಆಸ್ತಿ ನೋಂದಾಯಿಸುವುದು ಬಾಕಿ ಉಳಿಸಿಕೊಂಡಿವೆ. ಕಂದಾಯ, ಶಿಕ್ಷಣ ಇಲಾಖೆಯ ಸಮನ್ವಯದ ಕೊರತೆಯಿಂದಾಗಿ ಈ ಸಮಸ್ಯೆ ಎದುರಾಗಿದೆ. ಸರಕಾರಿ ಶಾಲೆಗಳ ಆಸ್ತಿ ರಕ್ಷಿಸುವ ಉದ್ದೇಶದಿಂದ ಶಿಕ್ಷಣ ಇಲಾಖೆಯು 'ತ್ರೈಮಾಸಿಕ ಆಸ್ತಿ ಸಂರಕ್ಷಣಾ ಅಭಿಯಾನ' ಆರಂಭಿಸಿದೆ. ಶಿಕ್ಷಣ ಸಚಿವರಾಗಿದ್ದ ಬಿ.ಸಿ.ನಾಗೇಶ್ ಅವರು ಈ ಆಸ್ತಿ ಸಂರಕ್ಷಣೆ ಅಭಿಯಾನ ಆರಂಭಿಸಿದ್ದರು. ಪರಿಣಾಮ ಪ್ರಾಥಮಿಕ ಶಾಲೆಗಳ ಪೈಕಿ 14,990 ಹಾಗೂ ಪ್ರೌಢಶಾಲೆಗಳ ಪೈಕಿ 2,011 ಆಸ್ತಿಗಳ ದಾಖಲೆ ಪಕ್ಕಾ ಮಾಡಲಾಗಿದೆ. ಈ ಹಿಂದೆಲ್ಲಾ ದಾನಿಗಳು ನೀಡುತ್ತಿದ್ದರು. ಆ ರೀತಿಯಾಗಿ ಪ್ರಾಥಮಿಕ ಶಾಲೆಗೆ 4,974 ಮತ್ತು ಪ್ರೌಢ ಶಾಲೆಗೆ 425 ದಾನಿಗಳು ತಮ್ಮ ಆಸ್ತಿಯನ್ನು ದಾನವಾಗಿ ನೀಡಿದ್ದಾರೆ. ಇನ್ನು ಸರಕಾರಿ ಜಾಗ ನೋಡಿದರೆ, 9,679 ಪ್ರಾಥಮಿಕ ಶಾಲೆ ಮತ್ತು 812 ಪ್ರೌಢ ಶಾಲೆಯ ಆಸ್ತಿಯು ಸರಕಾರಕ್ಕೆ ಸೇರಿದ್ದಾಗಿದೆ.



## ಯೋಜನೆ ಉದ್ದೇಶ

- ಶಾಲೆ ಆಸ್ತಿ ಒತ್ತುವರಿ ತೆರವುಗೊಳಿಸುವುದು
- ಜಾಗವನ್ನು ಶಾಲೆಯ ಹೆಸರಿಗೆ ದಾಖಲಿಸುವುದು
- ಸರಕಾರದಿಂದ ಮಂಜೂರಾದ ಜಾಗ ಗುರುತಿಸುವುದು
- ದಾನವಾಗಿ ನೀಡಿದ ನಿವೇಶನಗಳ ಖಾತೆ
- ಶಾಲೆ ಆಸ್ತಿ ಇತರರ ಪಾಲಾಗುವ ಸಾಧ್ಯತೆ ತಪ್ಪಿಸುವುದು

**ಹೆಚ್ಚು-ಕಮ್ಮಿ** ಅತಿ ಹೆಚ್ಚು ಆಸ್ತಿ ಪತ್ರಗಳ ನೋಂದಣಿ ಬಾಕಿ ಉಳಿಸಿಕೊಂಡಿರುವ ಜಿಲ್ಲೆಗಳನ್ನು ಗಮನಿಸಿದರೆ, ಶಿವಮೊಗ್ಗ- 1,112, ತುಮಕೂರು-1,011 ಮತ್ತು ಮಂಡ್ಯದಲ್ಲಿ 963 ಶಾಲೆಗಳಿವೆ. ಗದಗ-81, ದಕ್ಷಿಣ ಕನ್ನಡ-12, ಚಿಕ್ಕೋಡಿ-21 ಕಡಿಮೆ ನೋಂದಣಿಯಾದ ಜಿಲ್ಲೆಗಳ ಪಟ್ಟಿಯಲ್ಲಿವೆ.

### ಆಸ್ತಿ-ಪತ್ರಗಳ ಮಾಹಿತಿ

| ಶಾಲೆ | ಸಂಖ್ಯೆ | ಆಸ್ತಿ ದಾಖಲೆ | ಪಕ್ಕಾ ಬಾಕಿ |
|---|---|---|---|
| ಪ್ರಾಥಮಿಕ | 43,564 | 26,074 | 17,490 |
| ಪ್ರೌಢ | 4,729 | 3,283 | 1,446 |

ಹೆಚ್ಚಿನ ಪ್ರಮಾಣದಲ್ಲಿ ಆಸ್ತಿ ಇರುವ ಶಾಲೆಯ ಆಸ್ತಿ-ಪತ್ರ ನೋಂದಣಿ ಮಾಡಿಸಲು ಅಭಿಯಾನ ಆರಂಭಿಸಿದ್ದೇವೆ. ಕೋರ್ಟ್‌ನಲ್ಲಿರುವ ಕೇಸ್ ಇತ್ಯರ್ಥ ನಂತರ ಕ್ರಮಕೈಗೊಳ್ಳುತ್ತಿದ್ದೇವೆ.

– **ಬಿ.ಬಿ.ಕಾವೇರಿ** ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ

## 17,384 ಶಾಲೆಯಲ್ಲಿಲ್ಲ ಆಟದ ಗ್ರೌಂಡ್


■ **ಸ್ಟೀವನ್ ರೇಗೊ** ಮಂಗಳೂರು
stevan.rego@timesgroup.com


### ಮೈದಾನ ಇಲ್ಲದ ಜಿಲ್ಲೆ, ಶಾಲೆಗಳು

| | |
|---|---|
| ಕೋಲಾರ | 1,278 |
| ತುಮಕೂರು | 1,209 |
| ಹಾಸನ | 1,040 |
| ಕಲಬುರಗಿ | 918 |
| ಬೀದರ್ | 684 |
| ಬೆಳಗಾವಿ | 602 |
| ದ.ಕ. | 77 |
| ಉಡುಪಿ | 42 |

ಶಾಲಾ ವಿದ್ಯಾರ್ಥಿಗಳಿಗೆ ಕಲಿಕೆ ಜತೆ ಆಟವಾಡಲು ವ್ಯವಸ್ಥೆ ಬೇಕು. ಕಲಿಕೆ ಜತೆ ಆಟೋಟ ಇದ್ದರೆ ಅವರ ಶೈಕ್ಷಣಿಕ ಪ್ರಗತಿ ಗಟ್ಟಿಯಾಗಿರುತ್ತದೆ ಎನ್ನುವ ತಜ್ಞರ ಮಾತು ರಾಜ್ಯದ ವಿಚಾರದಲ್ಲಿ ತಾಳೆಯಾಗುತ್ತಿಲ್ಲ. ರಾಜ್ಯದಲ್ಲಿರುವ 46,757 ಶಾಲೆಗಳ ಪೈಕಿ 17,384 ಶಾಲೆಗಳಲ್ಲಿ ಆಟದ ಮೈದಾನಗಳೇ ಇಲ್ಲ. 23ಕ್ಕೂ ಅಧಿಕ ಶಾಲೆಗಳಲ್ಲಿ ಶೌಚಾಲಯ ವ್ಯವಸ್ಥೆ ಇಲ್ಲ. 4,876 ಶಾಲೆಗಳಲ್ಲಿ ಆವರಣ ಗೋಡೆಯೇ ಇಲ್ಲ.

ರಾಜ್ಯದ ಸರಕಾರಿ ಪ್ರಾಥಮಿಕ, ಪ್ರೌಢ, ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ಪದವಿ ಕಾಲೇಜುಗಳ ಪೈಕಿ ಅರ್ಧಕ್ಕೆ ಅರ್ಧದಷ್ಟು ಶಿಕ್ಷಣ ಸಂಸ್ಥೆಗಳಲ್ಲಿ ಮಕ್ಕಳಿಗೆ ಆಟವಾಡಲು ಸೂಕ್ತ ಮೈದಾನವೇ ಇಲ್ಲ, ವಿದ್ಯಾರ್ಥಿಗಳು ಶಾಲೆಗೆ ಬಂದು ಶಿಕ್ಷಣ ಕಲಿತು ಹೋಗಬೇಕು. ಆಡಲು ಮನಸ್ಸಿದ್ದರೂ, ಮೈದಾನವೇ ಇಲ್ಲ, ವಿಶೇಷವೆಂದರೆ ಕೆಲವು ಕಡೆ ಸರಕಾರಿ ಶಾಲೆಗೆ ಸೇರಿದ ಜಾಗವನ್ನು ಖಾಸಗಿಯವರು ಕಬಳಿಸಿ ಆಟದ ಮೈದಾನವನ್ನೇ ಕಿತ್ತುಕೊಂಡರೆ, ಕೆಲವು ಕಡೆ ಕಟ್ಟಡಗಳಿಗೆ ಹೆಚ್ಚು ಮಹತ್ವ ನೀಡಿದ್ದು, ಆಟದ ಮೈದಾನಗಳನ್ನು ಕಡೆಗಣಿಸಲಾಗಿದೆ.

### 4,876 ಶಾಲೆಗಳಿಗೆ ಆವರಣ ಗೋಡೆಗಳೇ ಇಲ್ಲ

ಶಾಲೆ, ಕಾಲೇಜುಗಳಿಗೆ ತಮ್ಮ ವ್ಯಾಪ್ತಿ ಗೊತ್ತಿರಲಿ ಅಥವಾ ಶಾಲಾ ಕ್ಯಾಂಪಸ್‌ನ ಅರಿವು ಇರಲಿ ಎನ್ನುವ ಉದ್ದೇಶದಿಂದ ಆವರಣ ಗೋಡೆ ನಿರ್ಮಿಸಲಾಗುತ್ತದೆ. ಆದರೆ ರಾಜ್ಯದಲ್ಲಿ 4,876 ಶಾಲೆಗಳಿಗೆ ಆವರಣ ಗೋಡೆಗಳೇ ಇಲ್ಲ. ಹಾಸನ-341, ಕಲಬುರಗಿ-312, ತುಮಕೂರು-275, ಯಾದಗಿರಿ-229, ಬೆಳಗಾವಿ, ಚಿಕ್ಕೋಡಿ-222, ದಕ್ಷಿಣ ಕನ್ನಡ-115, ಉಡುಪಿ- 81

### 23 ಶಾಲೆಗಳಿಗೆ ಶೌಚಾಲಯವೇ ಇಲ್ಲ

ರಾಜ್ಯದ 23 ಶಾಲೆಗಳಲ್ಲಿ ಸಮರ್ಪಕ ಶೌಚಾಲಯ ವ್ಯವಸ್ಥೆ ಇಲ್ಲ. ಕೆಲವು ಶಿಕ್ಷಣ ಸಂಸ್ಥೆಗಳಲ್ಲಿ ಶೌಚಾಲಯ ಇದ್ದರೂ, ನೀರು, ಸ್ವಚ್ಛ ಇಲ್ಲದೆ ಬಳಕೆಗೆ ಅಯೋಗ್ಯವಾಗಿದೆ. ಕಲಬುರಗಿಯಲ್ಲಿ 7, ಹಾವೇರಿ 2, ಕೋಲಾರ 5, ತುಮಕೂರು, ಮಧುಗಿರಿಯಲ್ಲಿ ತಲಾ 6, ಚಿಕ್ಕಬಳ್ಳಾಪುರ ಹಾಗೂ ಯಾದಗಿರಿಯಲ್ಲಿ ತಲಾ ಒಂದು ಶಾಲೆಗಳಿಗೆ ಶೌಚಾಲಯ ಸಮಸ್ಯೆ ಇದೆ.

**Source: Vijaya Karnataka., 26 Dec, 2023., p.3**

ರಾಜ್ಯದಲ್ಲಿ ಅತಿಥಿ ಉಪನ್ಯಾಸಕರ ಸಂಖ್ಯೆ 40 ಸಾವಿರಕ್ಕಿಂತಲೂ ಅಧಿಕ. ಡಬಲ್ ಡಿಗ್ರಿ ಓದಿದರೂ ಉದ್ಯೋಗ ಶೂನ್ಯ. ಸಿಕ್ಕರೂ ಚಿಲ್ಲರೆ ಸಂಬಳ. ಪದವಿ ಕಾಲೇಜುಗಳಲ್ಲಿ ಕಾಯಂ ಸೇವೆ ಸಲ್ಲಿಸುವವರಿಗಿಂತ ಅರೆಕಾಲಿಕರೇ ಅಧಿಕ. ಜೀವನವೇ ದುರ್ಬರವೆಂದೆನಿಸಿದಾಗ ಅದು ವೃತ್ತಿಯ ಮೇಲೆ ಪ್ರತಿಕೂಲ ಪರಿಣಾಮ. ಒಟ್ಟಾರೆ ಸಾವಿರಾರು ವಿದ್ಯಾರ್ಥಿಗಳ ಜ್ಞಾನಕ್ಕೆ ಬಲ ಬರುವುದಿಲ್ಲ. ಇದೊಂದು ತೀವ್ರ ಸಮಸ್ಯೆ. ಶಿಕ್ಷಣವೇ ಉಸಿರು ಎನ್ನುವ ಸರಕಾರ ಅದನ್ನು ಬಲಗೊಳಿಸುವುದರಲ್ಲಿ ಏಕೆ ದುರ್ಬಲವಾಗಿದೆ ಎಂಬುದು ಉತ್ತರ ಸಿಗದ ಪ್ರಶ್ನೆ. ಇದರತ್ತ ವಿಕ ನೋಟ.

# ಇನ್ನೆಷ್ಟು ದಿನ ಸಂಕಟ?

## ಅತಿಥಿ ಉಪನ್ಯಾಸಕರ ತೀರದ ಬವಣೆ

ವಿಕ ಫೋಕಸ್

■ ಆತೀಶ್ ಬಿ.ಕನ್ನಾಳೆ

ಜೀವನ ಪೂರ್ತಿ ದುಡಿದರೂ ನಿವೃತ್ತಿಯಾದ್ರೆ ಏನೂ ಸಿಗಲ್ಲ. ಸತ್ತರೂ ಕುಟುಂಬಕ್ಕೆ ಸರಕಾರದಿಂದ ಸಂಯಾಪ್ಸೆ ಪರಿಹಾರ ಕೊಡಲ್ಲ. ಹತ್ತು ತಿಂಗಳು ಬೋಧನೆ ಮಾಡಿ ಇನ್ನೆರಡು ತಿಂಗಳು ಸಂಬಳವಿಲ್ಲದೇ ಜೀವನ ನಡೆಸಬೇಕು. 20 ವರ್ಷದಿಂದ ನಮ್ದು ಇದೇ ಪರಿಪಾಟ್ಲು. ಬೋಧನೆ ಬಿಟ್ಟ ಬೇರೆ ಕಸುಬೂ ಗೊತ್ತಿಲ್ಲ. ಆದ್ರೆ, ಸರಕಾರ ನಮ್ಮ ನ್ಯಾಯ ಕೊಡಲು ಮೀನಮೇಷ ಎಣಿಸುತ್ತಿದೆ. ಇದು ಪದವಿ ಕಾಲೇಜು ಅತಿಥಿ ಉಪನ್ಯಾಸಕರೊಬ್ಬರ ಅಳಲು.

ಇದು ಒಬ್ಬರ ಕತೆಯಲ್ಲ, ಸಹಸ್ರಾರು ಮಂದಿಯ ಗೋಳು. ಸರಕಾರಗಳು ನಡೆಸಿಕೊಳ್ಳುತ್ತಿರುವ ರೀತಿಯಿಂದ ಬೇಸತ್ತು ಕೆಲ ವರ್ಷಗಳ ಹಿಂದೆ ತೀರ್ಥಹಳ್ಳಿಯಲ್ಲಿ ಅತಿಥಿ ಉಪನ್ಯಾಸಕರೊಬ್ಬರು ಆತ್ಮಹತ್ಯೆ ಮಾಡಿಕೊಂಡರು. ಕೊನೆಪಕ್ಷ ಆ ಕುಟುಂಬಕ್ಕೆ ಸರಕಾರ ಸಂಯಾಪ್ಸೆ ಪರಿಹಾರವನ್ನೂ ಕೊಡಲಿಲ್ಲ! ಸುಮಾರು 40 ಸಾವಿರ ಅತಿಥಿ ಉಪನ್ಯಾಸಕರಿದ್ದು, ಅವರನ್ನು ಸರಕಾರಗಳು ನಡೆಸಿಕೊಳ್ಳುತ್ತಿರುವ ರೀತಿ ಪ್ರಶ್ನಾರ್ಹವಾಗಿದೆ. ಅತಿಥಿ ಉಪನ್ಯಾಸಕರ ರೋಷಾಗ್ನಿ ಮುಗಿಲು ಮುಟ್ಟಿದಾಗಷ್ಟೇ ತಾತ್ಕಾಲಿಕ ಪರಿಹಾರದ ಮುಲಾಮು ಸವರಿ ಸರಕಾರಗಳು ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳುತ್ತಿವೆ. ಮೂಲ ಬೇಡಿಕೆಗಳ ಈಡೇರಿಕೆಗೆ ಯಾರೊಬ್ಬರೂ ಮುಂದಾಗಿಲ್ಲ.

ಅತಿಥಿ ಉಪನ್ಯಾಸಕರು ರೊಚ್ಚಿಗೆದ್ದಾಗ ಕಳೆದ ಸರಕಾರ ಕಾರ್ಯಭಾರದ ಆಧಾರದಲ್ಲಿ ವೇತನ ಹೆಚ್ಚಿಸಿತ್ತು. ಇದು ಮತ್ತಷ್ಟು ಸವಾಲುಗಳನ್ನು ಸೃಷ್ಟಿಸಿ 2021ರಲ್ಲಿ 4-5 ಸಾವಿರ ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಂಡರು. ಇದರಲ್ಲಿ 10 ವರ್ಷ ಮತ್ತು ಅದಕ್ಕಿಂತ ಕಡಿಮೆ ಸೇವಾನುಭವ ಹೊಂದಿದ್ದವರೇ ಅಧಿಕ ಪ್ರಮಾಣದಲ್ಲಿದ್ದರು.

ರಾಜ್ಯದ 430 ಸರಕಾರಿ ಪದವಿ ಕಾಲೇಜುಗಳಲ್ಲಿ ಸುಮಾರು 6 ಸಾವಿರ ಕಾಯಂ ಉಪನ್ಯಾಸಕರಿದ್ದರೆ 11 ಸಾವಿರ ಅತಿಥಿ ಉಪನ್ಯಾಸಕರಿದ್ದಾರೆ. ಇದರಲ್ಲಿ 15 ವರ್ಷ ಸೇವಾನುಭವದವರಿಗೆ 16 ಗಂಟೆ ಕಾರ್ಯಭಾರ ನೀಡಲಾಗಿದೆ. ಈ ನಿಯಮದ ಪ್ರಕಾರ 4 ಸಾವಿರ ಮಂದಿಗೆ ಮಾತ್ರ ಪೂರ್ಣ ಕಾರ್ಯಭಾರ ಸಿಗುತ್ತದೆ. ಉಳಿದವರಿಗೆ 4-8 ಗಂಟೆ ಮಾತ್ರ ಸಿಗುತ್ತದೆ. ಇಂತಹವರು ಸುಮಾರು 6 ಸಾವಿರ ಮಂದಿ ಇದ್ದಾರೆ. ಕಡಿಮೆ ಕಾರ್ಯಭಾರದ ಕಾರಣಕ್ಕೆ ಕಡಿಮೆ ಗೌರವಧನ ಸಿಗುವುದರಿಂದ ಜೀವನ ನಡೆಸುವುದೇ ಕಷ್ಟವಾಗಿದೆ. ಫೆಬ್ರವರಿ ಹೊತ್ತಿಗೆ 1242 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಿದ್ದು, ಅಷ್ಟೇ ಪ್ರಮಾಣದ ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಳ್ಳುವ ಆತಂಕದಲ್ಲಿದ್ದಾರೆ.

### ಡಬಲ್ ಡಿಗ್ರಿ ಇದ್ದರೂ ನಿರುದ್ಯೋಗ

ರಾಜ್ಯ ಸರಕಾರ ಯುವನಿಧಿ ಜಾರಿ ಮಾಡಿದ್ದು, ಪ್ರಸಕ್ತ ಸಾಲಿನಲ್ಲಿ ವಿದ್ಯಾಭ್ಯಾಸ ಪೂರ್ಣಗೊಳಿಸಿ, ಉದ್ಯೋಗಕ್ಕಾಗಿ ಕಾಯುತ್ತಿರುವವರಿಗೆ ಇದರ ಲಾಭ ಸಿಗುತ್ತದೆ. ಆದರೆ, ಈಗಾಗಲೇ ಸ್ನಾತಕೋತ್ತರ ಪದವಿ, ಕೆಸೆಟ್, ನೆಟ್ ತೇರ್ಗಡೆಯಾಗಿ ಕೆಲಸವಿಲ್ಲದೆ ಪರದಾಡುತ್ತಿರುವ ಸಹಸ್ರಾರು ಬೋಧನಾ ಸಿಬ್ಬಂದಿ ಇದ್ದಾರೆ. ಸೇವಾ ಭದ್ರತೆ ಇಲ್ಲದ ಅತಿಥಿ ಉಪನ್ಯಾಸಕರು ಯಾವುದೇ ಕ್ಷಣದಲ್ಲಿ ಬೀದಿಪಾಲಾಗುವ ಆತಂಕ ಎದುರಿಸುತ್ತಿದ್ದಾರೆ.






### ಅನುಭವಿಗಳಿಗೆ ಗೇಟ್ ಪಾಸ್

ಕಾಲೇಜುಗಳಲ್ಲಿ ಕಾರ್ಯಭಾರವನ್ನು ಹೆಚ್ಚಿಸಿದ್ದರಿಂದ ಇಬ್ಬರು ಉಪನ್ಯಾಸಕರ ಕೆಲಸವನ್ನು ಒಬ್ಬರು ನಿರ್ವಹಿಸಿ ಅಧಿಕ ಪ್ರಮಾಣದ ಗೌರವ ಧನ ಪಡೆಯುವ ವ್ಯವಸ್ಥೆಯನ್ನು 2021ರಲ್ಲಿ ಸರಕಾರ ಜಾರಿಗೆ ತಂದಾಗ ಸುಮಾರು 5 ಸಾವಿರ ಅತಿಥಿ ಉಪನ್ಯಾಸಕರನ್ನು ಸೇವೆಯಿಂದ ಬಿಡುಗಡೆಗೊಳಿಸಲಾಯಿತು. ಅವರಲ್ಲಿ ಸಾಕಷ್ಟು ಜನ ಖಾಸಗಿ ಕಾಲೇಜುಗಳಲ್ಲಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಜತೆಗೆ, ವಾಣಿಜ್ಯ ಶಿಸ್ತಿನ ಇರುವವರು ಕಚೇರಿಗಳಲ್ಲಿ ಖಾತೆ ನಿರ್ವಹಣೆಯ ಕೆಲಸ ಮಾಡುತ್ತಿದ್ದಾರೆ. ಹಲವರು ಹೊಲಗದ್ದೆ ಮತ್ತು ದಿನಸಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದಾರೆ.

### ಯಾರಿಗೆಷ್ಟು ಗೌರವ ಧನ?

ಪದವಿ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಅತಿಥಿ ಉಪನ್ಯಾಸಕರಿಗೆ 20-25 ವರ್ಷ ಸೇವಾನುಭವ ಇದ್ದು ನೆಟ್, ಕೆ-ಸೆಟ್ ಉತ್ತೀರ್ಣರಾಗಿದ್ದರೆ 32 ಸಾವಿರ ರೂ.(15 ಗಂಟೆ ಬೋಧನಾ ಅವಧಿ.), 5 ವರ್ಷ ಮೇಲ್ಪಟ್ಟ ಬೋಧನಾ ಅನುಭವ ಹೊಂದಿ, ನೆಟ್, ಕೆ-ಸೆಟ್ ಉತ್ತೀರ್ಣರಾಗಿದ್ದರೆ 28 ಸಾವಿರ ರೂ., 5 ವರ್ಷದೊಳಗಿನ ಸೇವಾನುಭವ ನೆಟ್, ಕೆಸೆಟ್ ಉತ್ತೀರ್ಣರಾಗಿದ್ದರೆ 30 ಸಾವಿರ ಹಾಗೂ ಇಲ್ಲದಿದ್ದರೆ 26 ಸಾವಿರ ಗೌರವ ಧನ ನೀಡಲಾಗುತ್ತಿದೆ. 20 ವರ್ಷಗಳ ಹಿಂದೆ ನೆಟ್, ಕೆಸೆಟ್ ಉತ್ತೀರ್ಣರಾಗಿದ್ದರೆ 13 ಸಾವಿರ, ಇಲ್ಲದಿದ್ದರೆ 11 ಸಾವಿರ ರೂ. ನೀಡಲಾಗುತ್ತಿತ್ತು. 2021ರ ನಂತರ ಹೊಸ ನಿಯಮದ ಪ್ರಕಾರ, ಕಾರ್ಯಭಾರ ಹೆಚ್ಚಿದ್ದು, ಸರಾಸರಿ 2000ದ 35 ಸಾವಿರ ರೂ. ವೇತನ ಇದೆ. 16 ಗಂಟೆ ಕಾರ್ಯ ನಿರ್ವಹಿಸುವ ಕಾಯಂ ಸಿಬ್ಬಂದಿಗೆ 1.50 ಲಕ್ಷ ರೂ. ವೇತನ ನೀಡಲಾಗುತ್ತದೆ. ಒಂದುವೇಳೆ, ಈಗಿರುವ ಅತಿಥಿ ಉಪನ್ಯಾಸಕರ ಪೈಕಿ ಶೇ.50ರಷ್ಟು ಜನರನ್ನು ಕಾಯಂಗೊಳಿಸಿದಲ್ಲಿ ಸರಕಾರದ ಮೇಲೆ ಅಂದಾಜು ಕಡಿಮೆಯಾಗುವವರಗೆ ಹೊರೆ ಬೀಳಲಿದೆ.

### ಎಲ್ಲೆಲ್ಲಿ ಎಷ್ಟೆಷ್ಟು?

| | |
|---|---|
| ಸುಮಾರು 40 ಸಾವಿರ ಅತಿಥಿ ಉಪನ್ಯಾಸಕರು, ಶಿಕ್ಷಕರ ಸಂಖ್ಯೆ | ಸುಮಾರು 6,500 ಪಿಯುಸಿ |
| | 11,000 ಪದವಿ ಕಾಲೇಜು |
| ಸುಮಾರು 14,500 ಪ್ರಾಥಮಿಕ ಶಾಲೆ, ಹಿರಿಯ ಪ್ರಾಥಮಿಕ | ಸುಮಾರು 6,000 ಪ್ರೌಢ ಶಾಲೆ |

### ಬೇಡಿಕೆಗಳು

- ಕೆ-ಸೆಟ್, ನೆಟ್ ಉತ್ತೀರ್ಣರಾಗಿರುವ ಅತಿಥಿ ಉಪನ್ಯಾಸಕರನ್ನು ಸೇವೆಯಲ್ಲಿ ವಿಲೀನಗೊಳಿಸಲು ಸಚಿವ ಸಂಪುಟದಲ್ಲಿ ಮಂಡಿಸಿ ತೀರ್ಮಾನ ಕೈಗೊಳ್ಳಬೇಕು.
- ತಾತ್ಕಾಲಿಕ ನೌಕರರನ್ನು ಕಾಯಂಗೊಳಿಸಲು ನಿಯಮಗಳನ್ನು ರೂಪಿಸಿಕೊಂಡು ಸೇವೆ ಆಧಾರ ಅಡಿ ಕಾಯಂ ವ್ಯಾಪ್ತಿಗೆ ತರಲು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಇದನ್ನು ಪರಿಗಣಿಸಬೇಕು.



- ಈಗ ಸೇವೆಯಲ್ಲಿರುವ ಅತಿಥಿ ಉಪನ್ಯಾಸಕರನ್ನು ಸೇವೆಯಿಂದ ಹೊರಗುಳಿಯದಂತೆ ನೋಡಿಕೊಳ್ಳಬೇಕು.
- ಕನಿಷ್ಠ 25 ಲಕ್ಷ ರೂ. ಭವಿಷ್ಯ ನಿಧಿ ಮೊತ್ತವನ್ನು ಮಾನವೀಯ ದೃಷ್ಟಿಯಿಂದ ನೀಡಬೇಕು.

### ಇದೆಲ್ಲ ಶುರುವಾಗಿದ್ದು ಯಾವಾಗ?

ಸರಕಾರಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅತಿಥಿ ಉಪನ್ಯಾಸಕರನ್ನು ಶರ್ಮಾ ನೇತೃತ್ವದ ಸಮಿತಿ ನೀಡಿದ ವರದಿ ಆಧಾರದ ಮೇಲೆ 2003ರಲ್ಲಿ ಕಾಯಂ ಮಾಡಲಾಯಿತು. ಆದರೆ, ಅಲ್ಲಿ ರೋಸ್ಟರ್ ಸರಿಯಾಗಿ ನಿರ್ವಹಿಸಿಲ್ಲ ಎಂದು ಕೆಲವರು ಕೋರ್ಟ್ ಮೊರೆ ಹೋಗಿದ್ದರು. ನಾನಾ ಪ್ರಯತ್ನಗಳ ಬಳಿಕ ಸರಕಾರ ರೋಸ್ಟರ್ ನಿರ್ವಹಣೆಗೆ ಮಾನದಂಡ ನಿಗದಿಪಡಿಸಿತ್ತು. ಅದರಂತೆ, 1995ರ ಒಳಗೆ ಸಾಮಾನ್ಯ ವರ್ಗದವರಿಗೆ 2 ವರ್ಷ ಸೇವಾನುಭವ ಹಾಗೂ ಎಸ್‌ಸಿ, ಎಸ್‌ಟಿಯವರಿಗೆ 1 ವರ್ಷ ಸೇವಾನುಭವ ಹೊಂದಿರಬೇಕೆಂದು ನಿರ್ಧರಿಸಿತ್ತು. ಅರೆ ಕಾಲಿಕ ಉಪನ್ಯಾಸಕರನ್ನು ಕಾಯಂ ಮಾಡಲಾಯಿತು. 2005-06ರಿಂದ ಈಚೆಗೆ ನಿರಂತರ ಪ್ರತಿಭಟನೆಗಳು ನಡೆಯುತ್ತಲೇ ಇವೆ. ಫಲಿತಾಂಶ ಶೂನ್ಯ.

### ಸರಕಾರಕ್ಕೆ ಮರೆವು!

ರಾಜ್ಯದಲ್ಲಿ 2009ರೊಳಗೆ ಎಂಫಿಲ್ ಮಾಡಿಕೊಂಡವರು 2500 ಜನರಿದ್ದು, ಅವರಿಗೂ ಯುಜಿಸಿ ಮಾನ್ಯತೆ ದೊರೆತಿದೆ. ಜತೆಗೆ, 4500 ಜನ ಕೆಸೆಟ್, ನೆಟ್, ಪಿಎಚ್‌ಡಿ ಮಾಡಿಕೊಂಡವರಿದ್ದಾರೆ. ಇವರು ಕಳೆದ 10-15 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಇಲ್ಲಿಯೂ ರೋಸ್ಟರ್ ನಿರ್ವಹಣೆ ಸರಿಯಾಗಿ ಆಗಿಲ್ಲ. ಒಂದುವೇಳೆ, ರಾಜ್ಯ ಸರಕಾರ ಕಾಯಂಗೆ ಮುಂದಾದರೆ ಮತ್ತೊಂದು ಹಂತದ ಕಾನೂನಾತ್ಮಕ ಸಮಸ್ಯೆ ಉದ್ಭವಿಸುವ ಸಾಧ್ಯತೆ ಇದೆ. ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಅತಿಥಿ ಉಪನ್ಯಾಸಕರನ್ನು ಕಾಯಂಗೊಳಿಸುವ ಭರವಸೆ ನೀಡಿತ್ತು. ಆದರೆ ಸರಕಾರಕ್ಕೆ ಅದರ ನೆನಪೇ ಇದ್ದಂತೆ ಇಲ್ಲ!

### ಸರಕಾರದಿಂದಲೇ ನಿಯಮ ಉಲ್ಲಂಘನೆ

ಸರಕಾರಿ, ಅರೆ ಸರಕಾರಿ, ಖಾಸಗಿ ಕ್ಷೇತ್ರಗಳಲ್ಲಿ 20 ಜನರಿಗಿಂತ ಹೆಚ್ಚು ನೌಕರರಿದ್ದರೆ, ಅವರಿಗೆ ಭವಿಷ್ಯ ನಿಧಿ ನೀಡಬೇಕೆನ್ನುವುದು ಸರಕಾರವೇ ರೂಪಿಸಿರುವ ನಿಯಮ. ಅದನ್ನು ಖಾಸಗಿ ಸಂಸ್ಥೆ, ಕಂಪನಿಗಳಲ್ಲಿ ಕಟ್ಟುನಿಟ್ಟಿನಿಂದ ಪಾಲಿಸಲು ಸರಕಾರ ಒತ್ತಡ ಹೇರುತ್ತಿದೆ. ಪಾಲಿಸದಿದ್ದರೆ ಕ್ರಮಕ್ಕೆ ಗೊಳ್ಳುತ್ತಿದೆ. ಆದರೆ, ಸರಕಾರಿ ಕಾಲೇಜುಗಳಲ್ಲಿ ಸರಕಾರದಿಂದಲೇ ಈ ನಿಯಮ ಉಲ್ಲಂಘಿಸಲಾಗುತ್ತಿದೆ. ಅತಿಥಿ ಉಪನ್ಯಾಸಕರಿಗೆ ಪಿಎಫ್ ಇಲ್ಲ.

aatish.kannale@timesgroup.com

**Source: Vijaya Karnataka., 29 Dec, 2023., p.8**

DH
DECCAN HERALD

# Education dept to take over BBMP schools, PU colleges

## Palike will maintain buildings

BENGALURU, DHNS

Deputy Chief Minister DK Shivakumar on Friday said the Education Department has been tasked with running the BBMP schools and pre-university colleges.

While the department will deploy teachers to these institutions, the Bruhat Bengaluru Mahanagara Palike (BBMP) will maintain the buildings and provide infrastructure.

Shivakumar's announcement came after his meeting with the Education Department. Officials said no decisions have been made about colleges that are run by a separate department.



**A BBMP school in Austin Town.** FOR REPRESENTATION ONLY

**Schools to be handed over to edu dept**

| Primary | High schools | PU |
|---|---|---|
| 16 | 33 | 19 |

SOURCE: BBMP

"We have noticed a decline in the results of students in most BBMP schools. This should not be allowed. Hence, a decision has been made to take the help of the Education Department so that the BBMP schools provide quality education on par with private schools," the minister said.

### Land for govt schools

The government is also planning to start 2,000 new Karnataka public schools in different parts of the state using corporate social responsibility (CSR) funds.

"We have already identified land for the construction of 500 schools," Shivakumar said, adding that the government is in the process of holding a meeting with large companies for financial support.

"We hope to provide all facilities in these schools including a library, classrooms, laboratory and toilets. We have started a trial project in Ramanagara district," he said. "The new schools will not be located in taluk or district headquarters. We will take these schools to villages and panchayat limits."

**Source: Deccan Herald, 23 December, 2023., p.3**

# Government school students forced to clean toilet in city



Parents and residents outside the Government Model Primary School at Andhrahalli in Bengaluru. SPECIAL ARRANGEMENT

**The Hindu Bureau**
BENGALURU

Following the incident of students of the Morarji Desai Residential School in Malur of Kolar district being made to clean a toilet pit, yet another case of a toilet being cleaned by schoolchildren has emerged, this time in the Government Model Higher Primary School, Andhrahalli, North Zone-1, Bengaluru.

The Department of School Education and Literacy (DSEL) suspended Lakshmidevamma T., senior headmistress of the school, on Friday.

As a video of the students cleaning the toilet, using acid and brooms, went viral on social media, parents reached the school and questioned the headmistress. They also staged a protest.

Anjinappa, the Block Education Officer (BEO) of Bengaluru North-1, visited the school and enquired about the incident with teachers and students, and recommended disciplinary action. On the basis of his recommendation, the Deputy Director of Public Instruction (DDPI), Bengaluru North zone, suspended Lakshmidevamma.

The children and the parents alleged that the headmistress used to ask the children to clean the toilet daily by offering them chikkis, chocolates, and sweets as rewards.

A class VI student said: "We have been asked to clean the toilet for the last few months. If we did not follow the instruction, she would threaten to punish us."

Another student stated that they were never provided gloves or slippers to clean the toilet. "Every morning, they used to ask who will clean the toilet for the day and we used to clean with bleaching powder, phenyl, and other cleaners," said the student.

"We are sending our children to school so they can learn, not to clean toilets. The government is providing funds for toilet cleaning and other activities, but these teachers are misusing our children. The government should take action against the teachers," a parent demanded.

Madhu Bangarappa, Minister of the Department of School Education and Literacy, said there is "no question of tolerating such behaviour by teachers." "We will initiate strict action against those responsible for this," he said.

Speaking to reporters in Bengaluru, Deputy Chief Minister D.K. Shivakumar said that a report has been sought on the incident. Opposition leader R. Ashok and local MLA S.T. Somashekar visited the school and demanded a probe into the incident.

This is the second such incident in Karnataka in the last 10 days.

On December 17, three staff members, including the principal of a Morarji Desai School in Yaluvalli in Malur, Kolar district, were suspended by the Karnataka Residential Educational Institutions Society (KREIS) for making students manually clean toilet pits as well as the school premises.







**Source: The Hindu, 23 December, 2023., p.3**

# Kannada to be 1st or 2nd language, not 3rd, for class VIII from 2024-25

KTBS has decided not to print third language Kannada textbooks as all schools, including those affiliated to CBSE and ICSE, have to teach Kannada as the first or second language from next year

**Jayanth R.**
BENGALURU

Following the implementation of the Kannada Language Learning Act, 2015, the Karnataka government has decided not to print third language Kannada textbooks for class VIII from the academic year 2024-25.

From the next academic year, NCERT curriculum schools, including those affiliated to the Central Board of Secondary Education (CBSE) and the Indian Certificate of Secondary Education (ICSE), will have to teach Kannada as the first or second language.

The Karnataka Textbook Society (KTBS) has invited indents from schools to supply textbooks for the 2024-25 academic year and said that, as part of the implementation of the Kannada Language Learning Act, 2015, the third language Kannada textbooks for class VIII will not be in force from 2024-25.

Hence, schools have been advised not to indent the third language Kannada textbooks for class VIII.

Suma B.K., Senior Assistant Director of KTBS, told *The Hindu*, "The three-language formula is in force in Karnataka. Kannada is being taught in schools as the first, second, or third language.

"Since 2017, the Kannada Language Learning Act, 2015, has been in force in Karnataka, according to which it is mandatory to teach Kannada as the first or second language in all schools in the State. Therefore, since 2017, the teaching of Kannada as a third language has been phased out. In the year 2023-24, the teaching of the third language, Kannada, in class VII was stopped, and textbooks were not even printed. Teaching of a third language for class VIII students is being stopped for 2024-25, so textbooks will not be printed. In the next two years, the teaching of Kannada as a third language will be stopped for classes IX and X. This is the decision of the Department of School Education and Literacy (DSEL). According to their order, action has been taken to print the textbooks," she said.



A file photo of school textbooks. The Karnataka Textbook Society has invited indents from schools to supply textbooks for the 2024-25 academic year.

**Decision opposed**

The government's decision is being opposed by private school managements and a section of parents.

In the wake of strong opposition from private schools to teach Kannada as the first or second language, the State government enacted the Karnataka Educational Institutions (Issue of No Objection Certificate and Control) Rules 2022. According to these rules, the government has made a provision to teach Kannada as a second or third language, which is being followed by most of the private schools managements.

In addition, around 20 parents moved the High Court questioning making Kannada a compulsory language from class I to X even in the CBSE and the CISCE schools on August 2, 2023, and the case is pending. In such a situation, the government's decision not to print third language Kannada textbooks has created confusion among school managements.

**'Arbitrary orders'**

"Without withdrawing the 2022 rules, deciding to stop the printing of third language Kannada textbooks is like the government defying its own order.

The authorities are issuing arbitrary orders. The department should not take away the right of private schools teaching Kannada as a third language without any official order from the government," said Shashikumar D., General Secretary of Associated Managements of Schools in Karnataka (KAMS).

**Around 20 parents moved the High Court questioning making Kannada a compulsory language from class I to X even in the CBSE and the CISCE schools on August 2, 2023**

"None of the parents are against teaching Kannada as a first, second, or third language. But the government has allowed us to teach Kannada as a second or third language, which we are complying with. Many children from other States join class VIII in Karnataka. If Kannada is suddenly imposed as a first or second language on these children, it will cause severe problems.

The government should call a meeting of private school managements and parents' associations, and take an appropriate decision in this regard," said Mansoor Ali Khan, chairman of Delhi Public School.

B.B. Cauvery, Commissioner of School Education, said, "The school textbooks will be printed and distributed as per the order issued by the KTBS. We have already submitted a proposal to the State Government to amend the Karnataka Educational Institutions (Issue of No Objection Certificate and Control) Rules 2022."

**Source: The Hindu, 25 December, 2023., p.2**

# Schools complain of lack of staff and funds to clean toilets

**Teachers' body is demanding that maintenance of school toilets be entrusted to local bodies**

**Jayanth R.**
BENGALURU

Shortage of funds and non-availability of cleaning staff has resulted in children being forced to clean toilets in many government schools across Karnataka, allege stakeholders. As a result, toilets in most schools are being cleaned only two or three times in a month.

The issue is back in focus following incidents of students being forced to clean school toilets. One case was reported from Malur in Kolar district and another from Andrahalli in Bengaluru city.

This is despite the Department of School Education and Literacy revising the sum for maintenance of government schools to a maximum of ₹45,000 per annum in September 2023, depending on the number of students.

Earlier, the department provided a measly ₹2,500 to ₹5,000 per annum, irrespective of the number of students. This fund is to be used for drinking water, cleaning of toilets, maintenance of libraries, playgrounds, laboratories, and other activities. Recently, the government announced that government schools would not have to pay for electricity.

Stating that this sum is inadequate, school authorities want either the sum to be hiked, or want the work to be entrusted to local bodies.



Incidents of students being forced to clean school toilets were reported recently. One case was reported from Malur in Kolar district and another from Andrahalli in Bengaluru city. FILE PHOTO

**Student strength**

As per the revised allocation, a government school that has up to 50 students is eligible for ₹20,000 per annum for maintenance. A school that has up to 100 students is eligible for ₹28,000 per annum, up to 500 students ₹33,000, and above 501 students, the sum is ₹45,000 per annum.

But many government schools authorities argue that this sum is inadequate.

The headmaster of a Government Higher Primary School in Ramanagara district told *The Hindu*, "We have about 270 students in our school every year. Recently, the government released ₹9,000. We don't even know exactly how much overall fund has been allocated to our school and whether we will get another instalment of money."

Many schools complain that even when there is money, workers are not available. .

The Karnataka State Primary School Teachers' Association (KSPSTA) has demanded that the State government entrust school maintenance, including cleaning of toilets and classrooms, to local bodies.

Chandrashekara Nuggali, general secretary of KSPSTA, said, "All local bodies have appointed cleaning labourers within their limits.

Therefore, we requested the State Government to entrust the cleaning of school toilets and classrooms to local bodies, including BBMP, corporations, town municipalities and gram panchayats at the rural level. We will submit a memorandum to the Chief Minister soon."

Umesh G. Gangavadi, State president of the Schools Development and Monitoring Committee, said, "The toilets are not cleaned even once a week in the majority of schools. It affects the health of students, particularly girls. So, we requested private companies, donors and alumni to donate for school maintenance."

**Source: The Hindu, 26 December, 2023., p.4**

# A year of many reversals and reforms in education sector

**Jayanth R.**
BENGALURU

As the new Congress-led government took charge in the State in May 2023, the education sector, which had been a hub of controversies during the previous BJP regime, saw many reversals.

**NEP-2020 scrapped**

The incumbent Congress government announced that it would scrap the National Education Policy (NEP) - 2020, a policy framed by the BJP-led Union government and the party's State government took pride in claiming they were the first State to implement it. However, NEP - 2020 has been controversial since its inception.

Multiple entries and exits from courses, four years of Honours degree, and selection of core and non-core subjects are said to be unscientific and hastily implemented. "The NEP emphasized privatization of higher education, which would deprive students coming from oppressed communities of higher education. Steps have been taken to saffronise the education sector in the name of holistic education," said development educationist V.P. Niranjanaradhya, who petitioned Rahul Gandhi to scrap NEP-2020 if they came to power in the State, during Bharat Jodo Yatra's Karnataka leg. This made it to the Congress manifesto.

**State Education Policy**

The incumbent government said it would come out with a Karnataka State Education Policy by the next academic year. The State government constituted a 15-member committee to formulate KSEP under the chairmanship of Sukhdev Thorat, educationist, economist, and former chairman of the University Grant Commission. They are expected to submit their report by February 28, 2024.

**Revision of textbooks**

The Congress government also formed five committees led by Prof. M.G. Hegde, a retired professor at Rani Chennamma University, Belagavi, for revision of school textbooks in time for the next academic year.

REWIND 2023

The previous BJP regime had formed a committee led by Hindutva activist Rohith Chakratirtha to revise school textbooks drafted by a committee led by writer Baragur Ramachandrappa. This exercise included lessons written by several Hindutva icons, including Rashtriya Swayamsevak Sangh founder K.B. Hedgewar, among other changes, that turned controversial.

Once the Congress came to power, with little time to completely revise textbooks for this academic year, it re-revised them to make some "corrections, additions, and deletions" under the guidance of Mr. Ramachandrappa again, promising to bring revised textbooks for the next academic year.

**Ban on hijab**

A few days ago, Chief Minister Siddaramaiah announced that the government would withdraw the ban on hijab in educational institutions that was imposed by the previous BJP regime in 2022. However, following intense opposition from the BJP, the Chief Minister backtracked and said a final decision would be taken after discussing it in the Cabinet and with the Law Department.

**Three annual exams**

The State government decided to bring major reforms to the Class X and II Pre-University exams from 2023-24. The government abolished supplementary exams, and instead, it would hold three annual exams. Students can write all three exams and the best of their marks will be considered for the marks-sheet, which will not mention which exam the marks came from. .

**Distribution of eggs**

Earlier, the government was providing eggs/banana/groundnut chikki as an additional input along with midday meals to the students from classes I to VIII across the State. Upon public demand, the new Congress government extended this to even class IX and X students.

**Placements affected**

Characterised by the economic crisis on a global level and the growing gap between industry and academia, the job placements of thousands of students – both engineering and non-engineering were affected this year.

In May this year, engineering students in tier-2 and tier-3 colleges were not able to secure jobs as companies did not even turn up on campuses for recruitment, barring those who had taken up Computer Science and Information Science courses. There was also an uproar around the same time as some engineering colleges demanded placement fees from students.

Coming to non-engineering courses in fields like chemistry, botany, physics, and social sciences, even the students who had secured higher grades also struggled to find jobs due to a lack of industry knowledge. This year's placement patterns yet again highlighted the need to shorten the academia-industry gap.

Many MBA colleges also saw a drop in the number of recruitments done by MNC companies due to a dip in the number of projects.


**INDIAN INSTITUTE OF MANAGEMENT INDORE**
Prabandh Shikhar, Rau-Pithampur Road, Indore – 453556

**NOTICE FOR ADMISSION INTO THE EXECUTIVE DOCTORAL PROGRAMME IN MANAGEMENT (EDPM) - 2024**

**Specialization:** Communication, Economics, Finance and Accounting, Humanities and Social Sciences, Information Systems, Marketing Management, Operations Management and Quantitative Techniques, Organizational Behaviour and Human Resource Management, Strategic Management.

Last date for submission of the online application form is **February 15, 2024**.
For detailed information, please visit **www.iimidr.ac.in**

EQUIS ACCREDITED | AACSB ACCREDITED | AMBA ACCREDITED


Mahaveer Road, Bengaluru-560001 and Printed by C. Sridhar at Plot No. 13-D, Bommasandra-Jigani Link Road, KIADB Industrial Area, Bommasandra, Anekal Taluk, Bengaluru-560099 on behalf of THG PUBLISHING PVT LTD., Chennai-600002. Editor: Suresh Nambath (Responsible for selection of news under the PRB Act).

**Source: The Hindu, 26 December, 2023., p.5**

# IISc Bengaluru faculty selected as EMBO global investigator for 2023

Dr. Debasis Das, Assistant Professor, is among the scientists to have been selected for his project

**The Hindu Bureau**
BENGALURU

A member of the Indian Institute of Science (IISc.) faculty has been selected as one of the 10 European Molecular Biology Organization (EMBO) Global Investigators in 2023 for his project on enzymatic dispersion of biofilms to combat biofilm-mediated microbial infections.

Dr. Debasis Das, Assistant Professor, Department of Inorganic and Physical Chemistry is among the scientists to have been selected to join the EMBO Global Investigator Network, an initiative that enables excellent early-stage group leaders based in Chile, India, Singapore and Taiwan, to access a wide range of collaboration, networking, and training activities.


The Indian Institute of Science in Bengaluru. SPECIAL ARRANGEMENT

**A serious threat**

"Antimicrobial resistance (AMR) by pathogenic microbes is a serious threat to human health. We have been working on reversing antibiotic resistance of pathogenic bacteria. Biofilm is a major line of microbial defense against drugs, and a prime virulence factor for chronic diseases," Dr. Das told *The Hindu*.

Biofilm-associated conditions are ubiquitous, manifested as soft tissue infections, and on medical implants.

"Using enzymes, we are preventing biofilm formation and degrading preformed biofilms. We are developing the first-in-kind enzyme-antibiotic combination therapy for the facile treatment of biofilm-associated infections in humans," Dr. Das said.

His work would benefit millions of people, particularly Indian citizens, who suffer from various biofilm-associated infections, and would improve their day-to-day lives.

"Being selected as one of the EMBO Global Investigators would tremendously help us expedite the work and take our invention to the global stage."

"The EMBO platform would help us connect with leading scientists worldwide, build a global network, visit state-of-the-art laboratories, and initiate productive collaborations," he explained.

**On neurodegenerative disorders**

According to EMBO, the selected scientists explore fundamental research questions relating to neurodegenerative disorders, drug-resistant bacteria, precision immunology, leaf epidermal development, single-cell proteomics, and other fields.

Dr. Das said that EMBO would provide funds to visit other institutions, attend, speak at, and organise scientific meetings, participate in various training programs, and invite members of EMBO's communities for lectures, and engage in scientific discussions.

**Source: The Hindu, 28 December, 2023., p.7**

Back to Content

## Environment

ಪ್ರಜಾವಾಣಿ



# ಕೊಳೆಯುವ ಪ್ಲಾಸ್ಟಿಕ್ ಶೋಧ



ಕಲೆ: ಗಣೇಶ ಅರಳಿಕಟ್ಟಿ

ನೇಸರ ಕಾಡನಕುಪ್ಪೆ

ಪರಿಸರ ಮಾಲಿನ್ಯಕ್ಕೆ ಅತಿ ದೊಡ್ಡ ಕೊಡುಗೆಯನ್ನು ನೀಡುತ್ತಿರುವುದು ಪ್ಲಾಸ್ಟಿಕ್. ಪ್ಲಾಸ್ಟಿಕ್ ನೂರಾರು ವರ್ಷಗಳಾದರೂ ಕೊಳೆಯದೇ ಮಣ್ಣಿನಲ್ಲೇ ಉಳಿಯುವ ಗುಣಲಕ್ಷಣವನ್ನು ಹೊಂದಿರುವುದು ಅತಿ ದೊಡ್ಡ ಶಾಪವೆಂದೇ ಪರಿಗಣಿಸಲಾಗಿದೆ. ಆದರೆ, ಇದೀಗ ಕೊಳೆಯಬಲ್ಲ ಪ್ಲಾಸ್ಟಿಕ್‌ನ ಶೋಧವಾಗಿದೆ. ಇದು ತನ್ನ ನಿಗದಿತ ಅವಧಿ ಮುಗಿದ ಬಳಿಕ ಬಹುಬೇಗ ಕೊಳೆಯುವ ಲಕ್ಷಣವನ್ನು ಹೊತ್ತು ಬಂದಿದೆ.

ಪ್ಲಾಸ್ಟಿಕ್‌ನ ಶೋಧವಾಗಿ ಬಹುತೇಕ 100 ವರ್ಷಗಳು ಮುಗಿದಿವೆ. ಪ್ಲಾಸ್ಟಿಕ್‌ನ ಸಂಶೋಧನೆಯಾದಾಗ ಅದನ್ನು ಅತಿ ದೊಡ್ಡ ವಿಸ್ಮಯವೆಂದೇ ಕರೆಯಲಾಗಿತ್ತು. ಬಹುಕಾಲ ಬಾಳಿಕೆ ಬರುವ, ಮಣ್ಣಿನಲ್ಲಿ ಬಟ್ಟೆ ಅಥವಾ ಕಾಗದದ ಹಾಗೆ ಕರಗದ ಅಥವಾ ಕೊಳೆಯದ ಈ ವಸ್ತು ಅತಿ ಅಗ್ಗದ, ಜನಸಾಮಾನ್ಯರಿಗೆ ಅನುಕೂಲಕಾರಿಯಾದ ವಸ್ತುವೆಂದು ಗಣನೆಗೆ ಒಳಪಟ್ಟಿತ್ತು.

> ಇದೀಗ ಅಮೆರಿಕದ 'ನಾರ್ತ್‌ವೆಸ್ಟರ್ನ್ ಯೂನಿವರ್ಸಿಟಿ'ಯ ರಸಾಯನ ವಿಜ್ಞಾನಿಗಳು ಕೊಳೆಯಬಲ್ಲ ಪ್ಲಾಸ್ಟಿಕ್ ಕಂಡುಹಿಡಿದಿದ್ದಾರೆ. ಈಗಾಗಲೇ ಅತಿ ಹೆಚ್ಚು ಬಳಕೆಯಲ್ಲಿರುವ ನೈಲಾನ್–6 ಪ್ಲಾಸ್ಟಿಕ್ ಅನ್ನು ಕೊಳೆಯುವಂತೆ ತಯಾರಿಸಿದ್ದಾರೆ.

However, a BBMP official said the government has every power to amend the rules with retrospective effect and there were many instances of it in the past.

The one fruitful outcome of the exercise is that the government has now agreed to slash the plan approval fee.

The government has to now frame rules to the amended provisions. It is said that fee will be reduced while framing the rules.

**Source: The Hindu, 27 December, 2023., p.7**

Back to Contents

# Social Issues

ವಿಶ್ವವಾಣಿ

## ಬೆಂಗಳೂರಿನ ಅಂದ್ರಹಳ್ಳಿ ಸರಕಾರಿ ಶಾಲೆಯಲ್ಲಿ ಕೃತ್ಯ | ಶಾಲಾ ಮುಖ್ಯ ಶಿಕ್ಷಕಿ ಅಮಾನತು

# ಮಕ್ಕಳಿಂದ ಮತ್ತೆ ಶೌಚಾಲಯ ಸ್ವಚ್ಛತೆ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಕೋಲಾರ ಜಿಲ್ಲೆ ಮಾಲೂರು ತಾಲೂಕಿನ ವಸತಿ ಶಾಲೆಯೊಂದರಲ್ಲಿ ಮಕ್ಕಳನ್ನು ಶೌಚ ಗುಂಡಿಗೆ ಇಳಿಸಿ ಸ್ವಚ್ಛಗೊಳಿಸಿದ ಪ್ರಕರಣದ ಬೆನ್ನಲ್ಲೇ, ಬೆಂಗಳೂರಿನಲ್ಲಿ ಸರಕಾರಿ ಮಾದರಿ ಶಾಲೆ ಮಕ್ಕಳಿಂದ ಶೌಚಾಲಯ ಸ್ವಚ್ಛಗೊಳಿಸಿದ ಪ್ರಕರಣ ಬೆಳಕಿಗೆ ಬಂದಿದೆ.

ಯಶವಂತಪುರ ವಿಧಾನಸಭಾ ಕ್ಷೇತ್ರದ ಅಂದ್ರಹಳ್ಳಿ ಸರಕಾರಿ ಮಾದರಿ ಪ್ರಾಥಮಿಕ ಪಾಠಶಾಲೆಯಲ್ಲಿ ಈ ಪ್ರಕರಣ ನಡೆದಿದ್ದು, ಮಕ್ಕಳಿಗೆ ಚಾಕೋಲೇಟ್ ಮತ್ತು ಚಿಕ್ಕಿ ಆಮಿಷ ತೋರಿಸಿ ಅವರಿಂದ ಶೌಚಾಲಯ ಸ್ವಚ್ಛಗೊಳಿಸಲಾಗಿದೆ. ಶಾಲೆಯ ಮುಖ್ಯ ಶಿಕ್ಷಕಿ ಲಕ್ಷ್ಮೀದೇವಮ್ಮ ಅವರನ್ನು ಅಮಾನತುಗೊಳಿಸಿ ಡಿಡಿಪಿಐ ಆದೇಶ ಹೊರಡಿಸಿದ್ದಾರೆ.

ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ಪೋಷಕರು ಶಾಲೆ ಮುಂದೆ ಜಮಾಯಿಸಿ ಪ್ರತಿಭಟನೆ ನಡೆಸಿದ್ದಾರೆ. ಶಾಲೆಯಲ್ಲಿ 600 ಮಕ್ಕಳಿದ್ದು, ಅವರೇ ಶೌಚಾಲಯ ಸ್ವಚ್ಛಗೊಳಿಸಬೇಕು, ಶಿಕ್ಷಕರು ಊಟ ಮಾಡುವ ತಟ್ಟೆಗಳನ್ನೂ ಮಕ್ಕಳೇ ತೊಳೆಯಬೇಕು ಎಂಬ ಅಲಿಖಿತ ಕಾನೂನು ಜಾರಿಯಲ್ಲಿದೆ ಎಂಬ ಆರೋಪ ಕೇಳಿಬಂದಿದೆ.

ಮಕ್ಕಳಿಂದ ಶೌಚಾಲಯ ಸ್ವಚ್ಛತೆ ಮಾಡಿಸುವುದು ಮತ್ತು ಶಿಕ್ಷಕರ ತಟ್ಟೆ ತೊಳೆಸುವುದರ ವಿರುದ್ಧ ಈ ಹಿಂದೆಯೇ ಪೋಷಕರು ದೂರು ನೀಡಿದ್ದರೂ ಸಾಕ್ಷಿ ಇಲ್ಲ ಎಂಬ ಕಾರಣಕ್ಕೆ ಪ್ರಕರಣ ಕೈಬಿಡಲಾಗಿತ್ತು. ಇದೀಗ ಸಾಕ್ಷಿ ದೊರೆಯುತ್ತಿದ್ದಂತೆ ಮುಖ್ಯ ಶಿಕ್ಷಕಿಯನ್ನು ಅಮಾನತುಗೊಳಿಸಿರುವ ಶಿಕ್ಷಣ ಇಲಾಖೆ, ಉಳಿದ ಶಿಕ್ಷಕರ ವಿಚಾರಣೆ ಮಾಡುತ್ತಿದೆ. ಅಲ್ಲದೆ, ಶಾಲಾ ವಿದ್ಯಾರ್ಥಿಗಳು ಮತ್ತು ಪೋಷಕರಿಂದಲೂ ಮಾಹಿತಿ ಪಡೆಯುತ್ತಿದೆ.



ಕೈಗೆ ಗ್ಲೌಸ್, ಕಾಲಿಗೆ ಚಪ್ಪಲಿ ಇಲ್ಲದೆ ಆ್ಯಸಿಡ್ ಬಳಸಿ ಶೌಚಾಲಯ ಸ್ವಚ್ಛಗೊಳಿಸುತ್ತಿರುವ ಶಾಲಾ ವಿದ್ಯಾರ್ಥಿಗಳು.

ಸರಕಾರ ಕಾನೂನು ಕ್ರಮಕೈಗೊಂಡಿದ್ದು, ಸಂಬಂಧಪಟ್ಟವರನ್ನು ಅಮಾನತು ಮಾಡಲಾಗಿದೆ. ಈ ಪ್ರಕರಣದಲ್ಲಿ ಎಫ್ಐಆರ್ ದಾಖಲಿಸಲಾಗಿದ್ದು, ನಮ್ಮ ದೇಶದಲ್ಲಿ ಇಂತಹ ಘಟನೆಗಳಿಗೆ ಅವಕಾಶವಿಲ್ಲ.

– **ಡಿ.ಕೆ.ಶಿವಕುಮಾರ್**, ಉಪಮುಖ್ಯಮಂತ್ರಿ

→ 8

## ಕಠಿಣ ಕ್ರಮ ಕೈಗೊಳ್ಳಲು ಸೂಚನೆ

ಘಟನೆ ಬಗ್ಗೆ ಡಿಸಿಎಂ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ.ಜಿ.ಪರಮೇಶ್ವರ್, ಶಿಕ್ಷಣ ಸಚಿವ ಮಧು ಬಂಗಾರಪ್ಪ ಆಘಾತ ವ್ಯಕ್ತಪಡಿಸಿದ್ದಾರೆ.

ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಈ ಮಧ್ಯೆ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ, ಸ್ಥಳೀಯ ಶಾಸಕ ಎಸ್.ಟಿ.ಸೋಮಶೇಖರ್ ಶಾಲೆಗೆ ತೆರಳಿ ಮಾಹಿತಿ ಪಡೆದಿದ್ದಲ್ಲದೆ, ಸಂಬಂಧಿಸಿದ ಶಿಕ್ಷಕರ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸಿದ್ದಾರೆ. ಸರಕಾರ ನಿರ್ಲಕ್ಷ್ಯ ವಹಿಸುತ್ತಿದೆ ಎಂದು ಆರೋಪಿಸಿದ್ದಾರೆ.

Continued...

# ಮಕ್ಕಳಿಂದ ಮತ್ತೆ ಶೌಚಾಲಯ ಸ್ವಚ್ಛತೆ

← ಮೊದಲಪುಟದಿಂದ

**ಆ್ಯಸಿಡ್ ಬಳಸಿ ಸ್ವಚ್ಛತೆ:** ಮಕ್ಕಳು ಸ್ವಚ್ಛ ಮಾಡುತ್ತಿರುವ ವಿಡಿಯೋ ಬಹಿರಂಗ ವಾಗಿದ್ದು, ಆ್ಯಸಿಡ್ ಬಳಸಿ ಸ್ವಚ್ಛ ಮಾಡಿದ್ದಾರೆ. ಒಬ್ಬ ಬಾಲಕ ಆ್ಯಸಿಡ್ ಹಾಕಿದರೆ, ಇನ್ನೊಬ್ಬ ನೀರು ಹಾಕುತ್ತಾನೆ. ಮತ್ತೊಬ್ಬ ಅದನ್ನು ಗುಡಿಸುತ್ತಾನೆ. ಆದರೆ, ಈ ವೇಳೆ ಮಕ್ಕಳು ಕೈಗೆ ಗ್ಲೌಸ್ ಹಾಕಿಲ್ಲ, ಕಾಲಿಗೆ ಚಪ್ಪಲಿ ಕೂಡ ಧರಿಸಿಲ್ಲ. ಆರನೇ ತರಗತಿ ಮಕ್ಕಳಿಂದ ಈ ಕೆಲಸ ಮಾಡಿಸಿದ್ದಾರೆ ಎಂದು ಹೇಳಲಾಗಿದೆ. ಶಿಕ್ಷಣ ಇಲಾಖೆ ಮೂಲಗಳ ಪ್ರಕಾರ ಈ ಶಾಲೆಯ ಸ್ವಚ್ಛತಾ ಕಾರ್ಯಕ್ಕೆ ಸಂಬಂಧಿಸಿದಂತೆ ವಾರ್ಷಿಕ 32 ಸಾವಿರ ರು. ನೀಡಲಾಗುತ್ತಿದೆ. ಆದರೆ, ಅದನ್ನು ಬಳಸಿ ಕೊಳ್ಳದೆ ವಿದ್ಯಾರ್ಥಿಗಳ ಮೂಲಕ ಸ್ವಚ್ಛಗೊಳಿಸಲಾಗುತ್ತಿದೆ. ಮೇಲ್ನೋಟಕ್ಕೆ ಪ್ರಕರಣದಲ್ಲಿ ಮುಖ್ಯ ಶಿಕ್ಷಕಿ ಸೇರಿದಂತೆ ಇತರೆ ಶಿಕ್ಷಕರ ಕೈವಾಡವೂ ಇದ್ದಂತಿದ್ದು, ಈ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**Source: Vishwavani, p.1-8, Dec.23,2023**

ಪ್ರಜಾವಾಣಿ

## ನಾಮಫಲಕ: ಕಾಯ್ದೆ ತಿದ್ದುಪಡಿಗೆ ಸುಗ್ರೀವಾಜ್ಞೆ–ಸಿ.ಎಂ

# ಶೇ 60ರಷ್ಟು ಕನ್ನಡ ಕಡ್ಡಾಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿರುವ ಎಲ್ಲ ಅಂಗಡಿ, ಆಸ್ಪತ್ರೆ, ಹೋಟೆಲ್, ವ್ಯಾಪಾರಿ ಸಂಸ್ಥೆಗಳ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಭಾಷೆ ಇರಬೇಕು. ಇದರ ಅನುಷ್ಠಾನಕ್ಕೆ 2024ರ ಫೆ.28ರ ಗಡುವು ವಿಧಿಸಲು ಸರ್ಕಾರ ನಿರ್ಧರಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ನಾಮಫಲಕಗಳಲ್ಲಿ ಕನ್ನಡ ಬಳಕೆ ಕುರಿತು ಗುರುವಾರ ಉನ್ನತ ಮಟ್ಟದ ಸಭೆ ನಡೆಸಿದರು. ಬಳಿಕ ಮಾತನಾಡಿದ ಅವರು, ‘ನಾಮ ಫಲಕಗಳಲ್ಲಿ ಕನ್ನಡ ಕಡ್ಡಾಯ ಗೊಳಿಸಲು ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಕಾಯ್ದೆ ತಿದ್ದುಪಡಿಗೆ ಸುಗ್ರೀವಾಜ್ಞೆ ಹೊರಡಿಸಲಾಗುವುದು. ಕಾಯ್ದೆಯ ಸೆಕ್ಷನ್ 17 (6)ಕ್ಕೆ ತಿದ್ದುಪಡಿ ತಂದು ಅಧಿಸೂಚನೆ ಹೊರಡಿಸಲು ಮತ್ತು ನಿಯಮಗಳನ್ನು ರೂಪಿಸಲು ತಕ್ಷಣ ಕ್ರಮ ಕೈಗೊಳ್ಳಲಾಗುವುದು’ ಎಂದರು.

4ನೇ ಪುಟ ನೋಡಿ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗೃಹ ಸಚಿವ ಜಿ.ಪರಮೇಶ್ವರ ಅವರು ಸಭೆಯಲ್ಲಿ ವಿವರಣೆ ನೀಡಿದರು

## ಆಸ್ತಿಪಾಸ್ತಿಗೆ ಹಾನಿ ಸಹಿಸಲ್ಲ– ಡಿಕೆಶಿ

‘ಕನ್ನಡ ಉಳಿಸಿ, ಬೆಳೆಸುವ ಹೋರಾಟಕ್ಕೆ ಅಭ್ಯಂತರವಿಲ್ಲ. ಆದರೆ, ಹೋರಾಟದ ಹೆಸರಿನಲ್ಲಿ ಆಸ್ತಿಗೆ ಹಾನಿ ಮಾಡುವುದನ್ನು ಸಹಿಸುವುದಿಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಚ್ಚರಿಕೆ ನೀಡಿದರು.

‘ನಾಮಫಲಕ ಶೇ 60ರಷ್ಟು ಕನ್ನಡದಲ್ಲಿರಬೇಕು ಎನ್ನುವುದನ್ನು ಕೇಳಲು ಇತಿಮಿತಿ ಇದೆ. ಹಿಂದೆ ಯಾರೋ ದೂರು ನೀಡಿದ್ದರು ಎಂದು ಕರವೇ ಅಧ್ಯಕ್ಷ ನಾರಾಯಣಗೌಡರ ಮೇಲೆ ಪ್ರಕರಣ ದಾಖಲಾದಾಗ, ಅವರ ವಿರುದ್ಧ ಪ್ರಕರಣ ದಾಖಲಿಸುವುದು ಸರಿಯಲ್ಲ ಎಂದು ಪೊಲೀಸ್ ಅಧಿಕಾರಿಗಳ ಜತೆ ನಾನೇ ಮಾತನಾಡಿದ್ದೆ. ಕನ್ನಡ ಭಾಷೆ ಕಡ್ಡಾಯಕ್ಕೆ ನೋಟಿಸ್ ನೀಡೋಣ. ಆದರೆ, ಕಾನೂನು ಕೈಗೆತ್ತಿಕೊಳ್ಳಬಾರದು. ನಾರಾಯಣಗೌಡರಿಗೆ ಈ ಮಾತನ್ನು ಇವತ್ತೂ ಹೇಳುತ್ತೇನೆ, ಮುಂದೆಯೂ ಹೇಳುತ್ತೇನೆ’ ಎಂದರು.

ಪ್ರಜಾವಾಣಿ

# ‘ಶೇ 60ರಷ್ಟು ಕನ್ನಡ ಕಡ್ಡಾಯ’

ಒಂದನೇ ಪುಟದಿಂದ

‘ಹಿಂದೆ 2018ರಲ್ಲಿ ಹೊರಡಿಸಿದ್ದ ಸುತ್ತೋಲೆಯಲ್ಲಿ ನಾಮಫಲಕಗಳು ಶೇ 60 ಕನ್ನಡ ಭಾಷೆ, ಶೇ 40ರಷ್ಟು ಇತರ ಭಾಷೆಯಲ್ಲಿ ಇರಬಹುದು ಎಂದು ತಿಳಿಸಲಾಗಿದೆ. ಅದರಂತೆ ಸುಗ್ರೀವಾಜ್ಞೆ ಹೊರಡಿಸಿ, ಅನುಷ್ಠಾನಗೊಳಿಸಲು ಗಡುವು ನೀಡಲಾಗುವುದು. ಖಾಸಗಿ ಸಂಸ್ಥೆಯವರು ಶೇ 60:40ರ ಅನುಪಾತದಲ್ಲಿ ಗಡುವಿನೊಳಗೆ ನಾಮಫಲಕ ಅಳವಡಿಸಬೇಕು’ ಎಂದು ಸೂಚಿಸಿದರು.

‘ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ 2022ರ ಸೆಕ್ಷನ್ 17 (6)ರ ಪ್ರಕಾರ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಅನುಮೋದನೆಯೊಂದಿಗೆ ನಡೆಸುತ್ತಿರುವ ವಾಣಿಜ್ಯ ಕೈಗಾರಿಕೆ, ವ್ಯಾಪಾರ ಸಂಸ್ಥೆ, ಸಮಾಲೋಚನೆ ಕೇಂದ್ರಗಳು, ಆಸ್ಪತ್ರೆಗಳು, ಪ್ರಯೋಗಾಲಯಗಳು, ಹೋಟೆಲ್ ಮುಂತಾದವುಗಳ ಹೆಸರನ್ನು ಪ್ರದರ್ಶಿಸುವ ಫಲಕಗಳ ಮೇಲಿನ ಅರ್ಧ ಭಾಗವು ಕನ್ನಡದಲ್ಲಿ ಇರತಕ್ಕದ್ದು ಎಂದು ತಿಳಿಸಲಾಗಿದೆ. ಈ ಕಾಯ್ದೆಯ ನಿಯಮ 17(8)ರಲ್ಲಿ ರಾಜ್ಯದಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾದ ಜಾಹೀರಾತು, ಸೂಚನೆ ಪ್ರದರ್ಶಿಸುವ ಎಲ್ಲ ಫಲಕಗಳಲ್ಲಿ ವಿಷಯಗಳ ನಿಗದಿತ ಶೇಕಡಾವಾರು ಪ್ರಮಾಣವು ಕನ್ನಡ ಭಾಷೆಯಲ್ಲಿ ಇರತಕ್ಕದ್ದು ಎಂದೂ ಇದೆ. ಜಾಹೀರಾತುಗಳ ವರ್ಗೀಕರಣ, ಕನ್ನಡದಲ್ಲಿ ಪ್ರದರ್ಶಿಸಬೇಕಾದ ಜಾಹೀರಾತು ವಿಷಯಗಳ ಶೇಕಡಾವಾರು ಪ್ರಮಾಣವು ಸರ್ಕಾರವು ನಿಗದಿ ಮಾಡಿದಂತೆ ಇರತಕ್ಕದ್ದು ಎಂದು ತಿಳಿಸಲಾಗಿದೆ. ಇದನ್ನು ಸಹ ಅನುಷ್ಠಾನಗೊಳಿಸಲಾಗುವುದು’ ಎಂದು ಮುಖ್ಯಮಂತ್ರಿ ವಿವರಿಸಿದರು.

‘ಬೆಂಗಳೂರಿನಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಮಾತ್ರ ಪ್ರತಿಭಟನೆಗಳನ್ನು ನಡೆಸಬೇಕು, ಸರ್ಕಾರ ಇದನ್ನು ಖಾತರಿಪಡಿಸಬೇಕು ಎಂದು ಹೈಕೋರ್ಟ್ 2022ರ ಮಾರ್ಚ್ 3ರಂದು ಆದೇಶಿಸಿದೆ. ರಾಜ್ಯದ ಹಿತದೃಷ್ಟಿಯಿಂದ ಶಾಂತಿಯುತವಾಗಿ ಪ್ರತಿಭಟಿಸಿದರೆ ನಾವು ವಿರೋಧಿಸುವುದಿಲ್ಲ. ಆದರೆ, ಕಾನೂನು ಕೈಗೆ ತೆಗೆದುಕೊಂಡರೆ ಕ್ರಮ ಜರುಗಿಸುತ್ತೇವೆ’ ‘ ಎಂದು ಹೇಳಿದರು.

ಸಭೆಯಲ್ಲಿ ಗೃಹ ಸಚಿವ ಜಿ. ಪರಮೇಶ್ವರ, ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್, ಡಿಜಿ–ಐಜಿಪಿ ಅಲೋಕ್ ಮೋಹನ್ ಹಾಜರಿದ್ದರು.

**ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆ, ಆಡಳಿತ ಭಾಷೆ. ಇದರಲ್ಲಿ ರಾಜಿ ಇಲ್ಲ. ಆದರೆ, ಕಾನೂನಿಗೆ ವಿರುದ್ಧವಾಗಿ ಯಾರಾದರೂ ನಡೆದುಕೊಂಡರೆ ಸಹಿಸುವುದಿಲ್ಲ**

**ಸಿದ್ದರಾಮಯ್ಯ,** ಮುಖ್ಯಮಂತ್ರಿ

## ಕನ್ನಡ ಪರ ತೀರ್ಮಾನಗಳಿಗೆ ಬದ್ಧ: ಪರಮೇಶ್ವರ

‘ಕನ್ನಡದ ಪರವಾದ ಎಲ್ಲ ರೀತಿಯ ತೀರ್ಮಾನಗಳನ್ನು ತೆಗೆದುಕೊಳ್ಳುವ ಕೆಲಸವನ್ನು ನಮ್ಮ ಸರ್ಕಾರ ಹಿಂದೆಯೂ ಮಾಡಿದೆ. ಅದಕ್ಕೆ ಈಗಲೂ ಬದ್ಧ. ಬರಗೂರು ರಾಮಚಂದ್ರಪ್ಪನವರು ಕೂಡಾ ಕನ್ನಡ ಕಡ್ಡಾಯಕ್ಕೆ ಆಗ್ರಹಿಸಿದ್ದಾರೆ. ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತರನ್ನು ಪೊಲೀಸರು ಸರಿಯಾಗಿ ನಡೆಸಿಕೊಂಡಿಲ್ಲ ಎಂದಿದ್ದಾರೆ. ಹೇಗೆ ನಡೆಸಿಕೊಳ್ಳಬೇಕು? ಪ್ರತಿಭಟನೆಗೆ, ಅರ್ಧಗಂಟೆ ಸಮಯ ಕೊಡುತ್ತಾರೆ. ನಂತರ ಏನು ಮಾಡಬೇಕೊ ಅದನ್ನು ಪೊಲೀಸರು ಮಾಡಿದ್ದಾರೆ’ ಎಂದು ಜಿ.ಪರಮೇಶ್ವರ ಹೇಳಿದರು.

**Source: Prajavani, 29 Dec, 2023., p.1**

ಪ್ರಜಾವಾಣಿ

24ನೇ ವೀರಶೈವ–ಲಿಂಗಾಯತ ಮಹಾ ಅಧಿವೇಶನದಲ್ಲಿ ಒಕ್ಕೊರಲ ಆಗ್ರಹ

# ಹೊಸದಾಗಿ ಜಾತಿಗಣತಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ವೈಜ್ಞಾನಿಕ ಹಾಗೂ ವಾಸ್ತವದ ನೆಲೆಗಟ್ಟಿನಲ್ಲಿ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯನ್ನು (ಜಾತಿ ಗಣತಿ) ಪುನಃ ಮಾಡಬೇಕು. ವೀರಶೈವ–ಲಿಂಗಾಯತ ಸಮುದಾಯದ ಎಲ್ಲಾ ಒಳಪಂಗಡಗಳನ್ನು ಕೇಂದ್ರದ ಒಬಿಸಿ ಪಟ್ಟಿಗೆ ಸೇರಿಸಬೇಕು...'

ಇಲ್ಲಿ ಶನಿವಾರ ಶುರುವಾದ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾ ಸಭಾದ 24ನೇ ಮಹಾ ಅಧಿವೇಶನದಲ್ಲಿ ಕೇಳಿಬಂದ ಒಕ್ಕೊರಲ ಆಗ್ರಹವಿದು.

'ವೀರಶೈವ-ಲಿಂಗಾಯತ ಸಮುದಾಯದಲ್ಲಿ 90ರಿಂದ 100 ಒಳಪಂಗಡಗಳಿವೆ. ವಾಸ್ತವಾಂಶದ ಆಧಾರದಲ್ಲಿ ಹೊಸದಾಗಿ ಜಾತಿ ಗಣತಿ ನಡೆಸಬೇಕು ಎಂಬುದು ನಮ್ಮ ಬೇಡಿಕೆ. ಇದಕ್ಕೆ ಸಮುದಾಯದ ಎಲ್ಲಾ ಶಾಸಕರು ಪಕ್ಷಾತೀತವಾಗಿ ಸಮ್ಮತಿ ಸೂಚಿಸಿದ್ದಾರೆ. ನಾವು ಯಾರ ಹಕ್ಕನ್ನೂ ಕಸಿಯುತ್ತಿಲ್ಲ' ಎಂದು ಮಹಾಸಭಾದ ಕಾರ್ಯದರ್ಶಿಯೂ ಆಗಿರುವ ಸಚಿವ ಈಶ್ವರ ಖಂಡ್ರೆ ಹೇಳಿದರು.

'ರಾಜ್ಯದ ಒಬಿಸಿ ಪಟ್ಟಿಯಲ್ಲಿ ವೀರಶೈವ ಲಿಂಗಾಯತರಿಗೆ ಶೇ 5ರಷ್ಟು ಮೀಸಲಾತಿ ಇದೆ. ಸಮುದಾಯದ ಎಲ್ಲಾ ಒಳಪಂಗಡಗಳನ್ನು ಕೇಂದ್ರದ ಒಬಿಸಿ ಪಟ್ಟಿಗೆ ಸೇರಿಸಬೇಕು. ರಾಜ್ಯ ಸರ್ಕಾರ ಈ ಸಂಬಂಧ ಕೇಂದ್ರಕ್ಕೆ ಶಿಫಾರಸು ಮಾಡಬೇಕು' ಎಂದು ಒತ್ತಾಯಿಸಿದರು.

'ಸಮಾಜ ಅಭಿವೃದ್ಧಿ ಹೊಂದಿದ್ದರೂ, ಅನೇಕ ಜ್ವಲಂತ ಸಮಸ್ಯೆಗಳನ್ನು ಎದುರಿಸುತ್ತಿದೆ. ಮೊದಲ ಬಾರಿಗೆ ಜಾತಿ ಗಣತಿಯ ಪರವಾಗಿ ಧ್ವನಿ ಎತ್ತಿದ್ದೇ ವೀರಶೈವ ಮಹಾಸಭಾ. ಜಾತಿ ಗಣತಿ ವೈಜ್ಞಾನಿಕ ನೆಲೆಗಟ್ಟಿನಲ್ಲಿ ನಡೆಯಬೇಕು. ಈ ಕಾರಣಕ್ಕಾಗಿಯೇ ಹೊಸದಾಗಿ ಜಾತಿ ಗಣತಿ ನಡೆಸುವಂತೆ ಆಗ್ರಹಿಸುತ್ತಿದ್ದೇವೆ. ಇದಕ್ಕೆ ವಿಶೇಷ ಅರ್ಥ ಕಲ್ಪಿಸುವುದು ಬೇಡ' ಎಂದು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

'ಒಳಪಂಗಡಗಳ ಆಧಾರದಲ್ಲಿ ಮೀಸಲಾತಿ ನೀಡುತ್ತಾ ಹೋದರೆ ಸಮಾಜವನ್ನು ಒಡೆದಂತಾಗುತ್ತದೆ. ಎಲ್ಲಾ ಒಳಪಂಗಡಗಳನ್ನು ಒಟ್ಟುಗೂಡಿಸಿ ಮೀಸಲಾತಿ ಒದಗಿಸುವುದರಿಂದ ನಾವೆಲ್ಲಾ ಒಂದೇ ಎಂಬ ಭಾವನೆ ಒಡಮೂಡುತ್ತದೆ. ರಾಜ್ಯದ 16 ಒಳಪಂಗಡಗಳು ಕೇಂದ್ರದ ಒಬಿಸಿ ಮೀಸಲಾತಿ ಪಟ್ಟಿಯಲ್ಲಿ ಸ್ಥಾನ ಹೊಂದಿವೆ. ಇತರ ಒಳಪಂಗಡಗಳನ್ನೂ ಆ ಪಟ್ಟಿಗೆ ಸೇರ್ಪಡೆ ಮಾಡಬೇಕು' ಎಂದು ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಆಗ್ರಹಿಸಿದರು.

'ಸಮುದಾಯದವರ ಜನಸಂಖ್ಯೆ ಕುಸಿಯುತ್ತಿದೆ ಎಂಬ ಮಾತು ಕೇಳಿ ಬರುತ್ತಿದೆ. ಮಿತ ಸಂತಾನ ಇದಕ್ಕೆ ಕಾರಣ ವಲ್ಲ. ಮಹಾಸಭಾದವರು ಆನ್‌ಲೈನ್ ಮೂಲಕ ಸಮುದಾಯದ ಜನ ಗಣತಿ ನಡೆಸಿ ಸರ್ಕಾರಕ್ಕೆ ಸಲ್ಲಿಸಲಿ' ಎಂದು ಸಿರಿಗೆರೆ ಬೃಹನ್ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

**ವ್ಯಕ್ತಿ ನಿಂದನೆಗೂ ಪ್ರಕರಣ ದಾಖಲಿಸುವಂತಾಗಲಿ:** 'ಜಾತಿ ನಿಂದನೆ ಹಾಗೆ ವ್ಯಕ್ತಿ ನಿಂದನೆ ಮಾಡುವವರ ವಿರುದ್ಧವೂ ಪ್ರಕರಣ ದಾಖಲಿಸುವಂತಾಗಬೇಕು. ಇದಕ್ಕಾಗಿ ಕಾನೂನಿನಲ್ಲಿ ಮಾರ್ಪಾಡು ಮಾಡಬೇಕು' ಎಂದು ಸ್ವಾಮೀಜಿ ಸಲಹೆ ನೀಡಿದರು.

**'856' ನಮ್ಮೆಲ್ಲರ ಕೋಡ್ ಆಗಲಿ:** 'ಪ್ರತಿಯೊಂದು ಧರ್ಮಕ್ಕೂ ಒಂದೊಂದು ಕೋಡ್ ಇದೆ. ವೀರಶೈವ ಲಿಂಗಾಯತರು 856 ಸಂಖ್ಯೆಯನ್ನು ಕೋಡ್ ಆಗಿ ಬಳಸಬೇಕು. '8' ಅಷ್ಟಾವರಣಗಳನ್ನು, '5' ಪಂಚಾಚಾರ್ಯರನ್ನು ಹಾಗೂ '6' ಷಟ್‌ಸ್ಥಳಗಳನ್ನು ಸೂಚಿಸುತ್ತದೆ. ಇವು ನಮ್ಮ ಮೂಲತತ್ವಗಳಾಗಿವೆ' ಎಂದು ಶ್ರೀಶೈಲದ ಚನ್ನಸಿದ್ದರಾಮ ಪಂಡಿತಾರಾಧ್ಯ ಸ್ವಾಮೀಜಿ ಹೇಳಿದರು.



ದಾವಣಗೆರೆಯಲ್ಲಿ ಶನಿವಾರ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾದ 24ನೇ ಮಹಾ ಅಧಿವೇಶನಕ್ಕೆ ಚಾಲನೆ ನೀಡಲಾಯಿತು. (ಎಡದಿಂದ) ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ದೇವರಮನೆ ಶಿವಕುಮಾರ್, ಸಚಿವ ಮಲ್ಲಿಕಾರ್ಜುನ, ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿರಿಗೆರೆ ಬೃಹನ್ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಶ್ರೀಶೈಲ ಪೀಠದ ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ, ಪ್ರಧಾನ ಕಾರ್ಯದರ್ಶಿ ಈಶ್ವರ ಖಂಡ್ರೆ, ಉದ್ಯಮಿ ಅಥಣಿ ವೀರಣ್ಣ, ಶಾಸಕರಾದ ಬಿ.ಪಿ.ಹರೀಶ್, ಡಿ.ಜಿ.ಶಾಂತನಗೌಡ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

## ಒಡಕು ಮೂಡಿಸಿ 'ಕೈ' ಸುಟ್ಟುಕೊಳ್ಳದಿರಿ

'ಈ ಹಿಂದೆ ಕೆಲವರು ವೀರಶೈವ–ಲಿಂಗಾಯತರ ನಡುವೆ ಒಡಕು ಮೂಡಿಸಲು ಹೋಗಿ ಕೈಸುಟ್ಟುಕೊಂಡರು. ಮತ್ತೊಮ್ಮೆ ಸಮಾಜದ ಜೊತೆ ಚೆಲ್ಲಾಟವಾಡ ಬೇಡಿ' ಎಂದು ಶ್ರೀಶೈಲ ಜಗದ್ಗುರು ಚನ್ನಸಿದ್ದರಾಮ ಪಂಡಿತಾರಾಧ್ಯ ಸ್ವಾಮೀಜಿ, ಪರೋಕ್ಷವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಎಚ್ಚರಿಸಿದರು.

'ರಾಜ್ಯದಲ್ಲಿ ವೀರಶೈವ–ಲಿಂಗಾಯತ ಸಮಾಜದ ಜನಸಂಖ್ಯೆ ಶೇ 17ರಷ್ಟಿದೆ ಎಂದು 1990ರಲ್ಲಿ ಚಿನ್ನಪ್ಪ ರೆಡ್ಡಿ ಆಯೋಗ ವರದಿ ಸಲ್ಲಿಸಿತ್ತು. ಇದು ಶೇ 10.68ಕ್ಕೆ ಕುಸಿದಿದೆ ಎಂದು ಈಗಿನ ಜಾತಿ ಗಣತಿ ವರದಿಯಲ್ಲಿ ಉಲ್ಲೇಖಿಸ ಲಾಗಿದೆ ಎಂಬ ಊಹಾಪೋಹಗಳು ಕೇಳಿಬಂದಿವೆ. ಜನಸಂಖ್ಯೆ ಕಡಿಮೆಯಾಗಲು ಹೇಗೆ ಸಾಧ್ಯ' ಎಂದು ಪ್ರಶ್ನಿಸಿದರು.

ತಾತ್ವಿಕ ವಿಚಾರಗಳಲ್ಲಿ ಭಿನ್ನಾಭಿಪ್ರಾಯ ಇರಬಹುದು. ದೊಡ್ಡವ, ಸಣ್ಣವ ಎಂಬ ಭಾವನೆ ಬಿಟ್ಟು ಮೊದಲು ನಾವು ಒಂದಾಗಬೇಕು. ಆಗ ಮಾತ್ರ ಸಮುದಾಯ ಒಗ್ಗೂಡಲಿದೆ

**ವಚನಾನಂದ ಸ್ವಾಮೀಜಿ,** ಹರಿಹರ ಪಂಚಮಸಾಲಿ ಪೀಠ

ವೀರಶೈವ ಲಿಂಗಾಯತರಿಗೆ ವೀರಶೈವ ಲಿಂಗಾಯತರೇ ಶತ್ರುಗಳು. ಸಮುದಾಯಕ್ಕೆ ಒಳಗಿನ ಶತ್ರುಗಳೇ ಹೆಚ್ಚು. ಸಮಾಜ ಅಧಃಪತನದತ್ತ ಸಾಗಲು ವೀರಶೈವರೇ ಕಾರಣ

**ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ,** ಸಿರಿಗೆರೆ ಬೃಹನ್ಮಠ

**Source: Prajavani, 24 Dec, 2023., p.5**

## ನಷ್ಟಕ್ಕೆ ಸಿಲುಕಿಸಿದ ದರ ಪರಿಷ್ಕರಣೆ, ಕ್ಷೀರಭಾಗ್ಯ ಯೋಜನೆ

# ಸಂಕಷ್ಟದಲ್ಲಿ ಹಾಲು ಒಕ್ಕೂಟಗಳು

■ **ಸಂತೋಷ್ ಕಾಚಿನಕಟ್ಟೆ** ಶಿವಮೊಗ್ಗ
lakshmikanthakumar.boraiah@timegroup.com

ಹಾಲಿನ ದರ ಪರಿಷ್ಕರಣೆ ಮತ್ತು ಕ್ಷೀರ ಭಾಗ್ಯ ಯೋಜನೆಯಲ್ಲಿ ರಾಜ್ಯ ಸರಕಾರ ಕೈಗೊಂಡ ತೀರ್ಮಾನಗಳು ರಾಜ್ಯದ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಗಳನ್ನು ಆರ್ಥಿಕ ಸಂಕಷ್ಟಕ್ಕೆ ಸಿಲುಕಿಸಿದೆ.

ರಾಜ್ಯ ಸರಕಾರವು ಆಗಸ್ಟ್‌ನಲ್ಲಿ ಗ್ರಾಹಕರ ಹಾಲಿನ ದರವನ್ನು ಲೀಟರ್‌ಗೆ 3 ರೂ. ಹೆಚ್ಚಿಸಲು ಒಪ್ಪಿಗೆ ಸೂಚಿಸಿ ಹೆಚ್ಚುವರಿ ಪೂರ್ಣ ದರವನ್ನು ಉತ್ಪಾದಕರಿಗೆ ವರ್ಗಾಯಿಸಲು ಆದೇಶಿಸಿದ್ದು ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಗಳು ನಷ್ಟದ ಕೂಪಕ್ಕೆ ಬೀಳಲು ಕಾರಣವಾಯಿತು.

ರಾಜ್ಯದ 15 ಹಾಲು ಒಕ್ಕೂಟಗಳಲ್ಲಿ ಪ್ರತಿದಿನ ಸರಾಸರಿ 84ರಿಂದ 85 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಆದರೆ, 41ರಿಂದ 43 ಲಕ್ಷ ಲೀಟರ್ ಹಾಲು ಮಾರಾಟವಾಗುತ್ತದೆ. ಪ್ರತಿದಿನ 42ರಿಂದ 43ಲಕ್ಷ ಲೀಟರ್ ಹಾಲು ಉಳಿಕೆಯಾಗುತ್ತದೆ. ಹೆಚ್ಚಿಸಲಾದ 3 ರೂ. ದರ ಮಾರಾಟವಾಗುವಂತಹ 43 ಲಕ್ಷ ಲೀಟರ್‌ಗೆ ಮಾತ್ರ ಸಿಗುತ್ತದೆ. ಮಾರಾಟವಾಗದ 42ರಿಂದ 43 ಲಕ್ಷ ಲೀಟರ್ ಹಾಲಿಗೆ ಹೆಚ್ಚುವರಿಯಾದ 3 ರೂ. ದರವನ್ನು ಹಾಲು ಒಕ್ಕೂಟಗಳು ಭರಿಸಬೇಕಾಗಿದೆ. ಅಂದರೆ ಒಕ್ಕೂಟಗಳು ಹಾಲು ಉತ್ಪಾದಕ ರೈತರಿಗೆ 1.29 ಕೋಟಿ ರೂ.ಗಳನ್ನು ಪಾವತಿಸಬೇಕಾಗಿದೆ.

ಹಾಲು ಉತ್ಪಾದನೆ ಮತ್ತು ಮಾರಾಟವು ಸಮ ಪ್ರಮಾಣದಲ್ಲಿರುವ ದಕ್ಷಿಣ ಕನ್ನಡ, ಧಾರವಾಡ, ಬಳ್ಳಾರಿ ಮತ್ತು ಕಲಬುರಗಿ ಒಕ್ಕೂಟಗಳು ಲಾಭ ನಷ್ಟ ಇಲ್ಲದೆ ಸರಿದೂಗಿಸಿಕೊಂಡು ಹೋಗುತ್ತಿವೆ. ಆದರೆ, ಅತಿಹೆಚ್ಚು ಹಾಲಿನ ಉತ್ಪಾದನೆ ಮತ್ತು ಕಡಿಮೆ ಮಾರಾಟ ಇರುವಂತಹ ಬೆಂಗಳೂರು, ಹಾಸನ, ಕೋಲಾರ, ಮಂಡ್ಯ, ತುಮಕೂರು, ಮೈಸೂರು, ಶಿವಮೊಗ್ಗ, ಚಾಮರಾಜನಗರ, ವಿಜಯಪುರ ಮತ್ತು ಹಾವೇರಿ ಹಾಲು ಒಕ್ಕೂಟಗಳು ಕಳೆದ ಐದು ತಿಂಗಳಿಂದ ನಿರಂತರವಾಗಿ ನಷ್ಟಕ್ಕೆ ಸಿಲುಕಿವೆ.

ಸಾಂದರ್ಭಿಕ ಚಿತ್ರ



**ರೈತರಿಗೆ ಮತ್ತೆ ಬರೆ**

**ನಷ್ಟವನ್ನು ಕಡಿಮೆ ಮಾಡಲು ಕೆಲ ಒಕ್ಕೂಟಗಳು ಉತ್ಪಾದಕ ರೈತರ ಹಾಲಿನ ದರವನ್ನು ಲೀಟರ್‌ಗೆ 1.50ರಿಂದ 3.65 ರೂ.ವರೆಗೆ ಕಡಿತ ಮಾಡಿವೆ. ಇದರಿಂದಾಗಿ ಸರಕಾರ ನೀಡಿದ 3 ರೂ. ದರ ಕೊಟ್ಟಂತೆ ಮಾಡಿ ವಾಪಸು ಪಡೆದಂತಾಗಿದೆ. ಗಾಯದ ಮೇಲೆ ಬರೆ ಎಳೆದಂತೆ ಇದೇ ಸಮಯದಲ್ಲಿ ಪಶು ಆಹಾರದ ಧಾರಣೆಯನ್ನು ಸಹ ಒಕ್ಕೂಟಗಳು ಏರಿಕೆ ಮಾಡಿವೆ. 51 ಕೆ.ಜಿ.ಯ ಆಹಾರದ ಚೀಲದ ದರ 1,180ರಿಂದ 1,231 ರೂ.ಗೆ ಏರಿಕೆ ಮಾಡಲಾಗಿದೆ. ಬರದಿಂದಾಗಿ ಮೆಕ್ಕೆಜೋಳದ ಉತ್ಪಾದನೆ ಕುಸಿದು ಧಾರಣೆ ಏರಿಕೆಯಾದ ಹಿನ್ನೆಲೆಯಲ್ಲಿ ಪಶು ಆಹಾರದ ಬೆಲೆಯನ್ನೂ ಹೆಚ್ಚಳ ಮಾಡಲಾಗಿದೆ ಎಂದು ಒಕ್ಕೂಟಗಳು ಹೇಳಿವೆ.**

### ಕ್ಷೀರಭಾಗ್ಯದಲ್ಲೂ ನಷ್ಟ

ಮಕ್ಕಳಲ್ಲಿ ಅಪೌಷ್ಟಿಕತೆ ನಿವಾರಣೆಗಾಗಿ ರಾಜ್ಯದ 48 ಸಾವಿರ ಸರಕಾರಿ ಹಾಗೂ 6 ಸಾವಿರ ಅನುದಾನಿತ ಶಾಲೆಗಳ 53 ಲಕ್ಷ ಮಕ್ಕಳಿಗೆ ಕ್ಷೀರಭಾಗ್ಯ ಯೋಜನೆಯಡಿ ಪ್ರತಿದಿನ 1.50 ಮಿ.ಲೀ.ನಂತೆ ವಾರದಲ್ಲಿ 5 ದಿನ ಹಾಲು ವಿತರಿಸಲಾಗುತ್ತಿದೆ. ಹಾಲಿನ ಪುಡಿ ಉತ್ಪಾದನೆಗೆ ಪ್ರತಿದಿನ 8 ಲಕ್ಷ ಲೀಟರ್ ಹಾಲು ಬಳಕೆಯಾದರೆ, ಒಂದು ಕೆ.ಜಿ. ಹಾಲಿನ ಪುಡಿ ಉತ್ಪಾದಿಸಲು 361 ರೂ. ವೆಚ್ಚವಾಗುತ್ತಿದೆ. ಆದರೆ, ಸರಕಾರ ಒಕ್ಕೂಟಗಳಿಗೆ ಸರಕಾರ ಕೊಡುತ್ತಿರುವುದು ಕೆ.ಜಿ.ಗೆ 283 ರೂ. ಮಾತ್ರ. ಇದರಿಂದಾಗಿ ಒಕ್ಕೂಟಗಳಿಗೆ ಪ್ರತಿ ಕೆ.ಜಿ. ಹಾಲಿನ ಪುಡಿಗೆ 78 ರೂ. ನಷ್ಟವಾಗುತ್ತಿದೆ. ಈ ಕಾರಣಕ್ಕೆ ಕೆಲ ಒಕ್ಕೂಟಗಳು ಕ್ಷೀರಭಾಗ್ಯ ಯೋಜನೆಗೆ ಹಾಲಿನಪುಡಿ ಪೂರೈಕೆಯನ್ನೇ ಸ್ಥಗಿತಗೊಳಿಸಿವೆ. ಹೀಗಾಗಿ ಹಾಸನ ಮತ್ತು ಬೆಂಗಳೂರು ಒಕ್ಕೂಟಗಳಿಂದ ಹೆಚ್ಚಿನ ಜಿಲ್ಲೆಗಳಿಗೆ ಹಾಲಿನ ಪುಡಿ ಪೂರೈಕೆಯಾಗುತ್ತಿದೆ. ನಷ್ಟವನ್ನು ಕಡಿಮೆ ಮಾಡಲು ಆರು ತಿಂಗಳ ಹಿಂದೆಯೇ ಹಾಲಿನ ಪುಡಿ ದರವನ್ನು ಕನಿಷ್ಠ 50 ರೂ. ಹೆಚ್ಚಳ ಮಾಡಬೇಕೆಂಬ ಬೇಡಿಕೆಗೆ ಸರಕಾರ ಇದೂವರೆಗೆ ಸ್ಪಂದಿಸಿಲ್ಲ. ಈ ಎರಡು ಕಾರಣಗಳಿಂದಾಗಿ ಒಂದೊಂದು ಒಕ್ಕೂಟಗಳು 10ರಿಂದ 50 ಕೋಟಿ ರೂ. ನಷ್ಟ ಅನುಭವಿಸಿವೆ.

**ಹಾಲಿನ ದರವನ್ನು 3 ರೂ. ಹೆಚ್ಚಳ ಮಾಡಿದಾಗ ಉತ್ಪಾದಕರಿಗೆ ಪೂರ್ಣ ಪ್ರಮಾಣದ ಬದಲಾಗಿ ಶೇ.50ರಷ್ಟು ವರ್ಗಾಯಿಸಿದ್ದಲ್ಲಿ ಒಕ್ಕೂಟಗಳಿಗೆ ಪೆಟ್ಟು ಬೀಳುತ್ತಿರಲಿಲ್ಲ.**

**-ಎನ್.ಎಚ್.ಶ್ರೀಪಾದರಾವ್** ಅಧ್ಯಕ್ಷರು, ಶಿಮುಲ್.

### ಶಿಮುಲ್‌ಗೆ 27 ಕೋಟಿ ರೂ. ನಷ್ಟ

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಹಾಲು ಉತ್ಪಾದಕರಿಗೆ ರಾಜ್ಯದ ಬೇರೆಲ್ಲಾ ಒಕ್ಕೂಟಗಳಿಗಿಂತ ಅತಿಹೆಚ್ಚು ಲೀಟರ್‌ಗೆ 34.97 ರೂ. ನೀಡಿದ್ದ ಶಿಮುಲ್ ಈಗ 27 ಕೋಟಿ ರೂ. ನಷ್ಟಕ್ಕೆ ಒಳಗಾಗಿದೆ. ನಷ್ಟವನ್ನು ಸರಿದೂಗಿಸುವ ಉದ್ದೇಶದಿಂದ ಉತ್ಪಾದಕರ ಹಾಲಿನ ದರವನ್ನು ಅಕ್ಟೋಬರ್ 1ರಿಂದ 1.65 ರೂ. ಮತ್ತು ಡಿಸೆಂಬರ್ 21ರಿಂದ 2 ರೂ. ಕಡಿತ ಮಾಡಿದೆ. 3 ತಿಂಗಳ ಅಂತರದಲ್ಲಿ ರೈತರ ಹಾಲಿನ ದರವನ್ನು ಲೀಟರ್‌ಗೆ 3.65 ರೂ. ಕಡಿಮೆ ಮಾಡಿದಂತಾಗಿದೆ. ಬರದ ಸಮಯದಲ್ಲಿ ಹಾಲು ಉತ್ಪಾದಿಸುವ ರೈತರಿಗೆ ದರ ಕಡಿಮೆ ಮಾಡಿರುವುದು ದೊಡ್ಡ ಪೆಟ್ಟು ನೀಡಿದಂತಾಗಿದೆ.**

**Source: Vijaya Karnataka, 23 Dec, 2023., p.4**

# ಸತ್ತಂತಿಹರನು ಬಡಿದೆಚ್ಚರಿಸು...

■ ಹೊರೆಯಾಲ ದೊರೆಸ್ವಾಮಿ



ಕನ್ನಡ ನವೋದಯ ಪಂಥದ ಅಗ್ರಗಣ್ಯ ಸಾಹಿತಿಯಾದ ಕುವೆಂಪು (ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಜ.29-12-1904) ಈ ನಾಡು ಕಂಡ ಮೇರು ಸದೃಶ ವ್ಯಕ್ತಿ. [illegible]

ಇಂದು ಕುವೆಂಪು ಜನ್ಮದಿನ



[illegible]

**ಕುವೆಂಪು ಸಾತ್ವಿಕ ಮೌಲ್ಯದ ಪ್ರತಿನಿಧಿ**

[illegible]

**ಬರಲಿ ವಿಜ್ಞಾನ ಬುದ್ಧಿ**

[illegible]

**ರೈತನಿಗೆ ಯೋಗಿ ಪಟ್ಟ**

[illegible]

**ನೋವುಂಡವರಿಗೆ ದನಿ**

[illegible]

**ಬಾರಿಸು ಕನ್ನಡ ಡಿಂಡಿಮವ...**

[illegible]

ಲೇಖಕರು: ಮೈಸೂರಿನ ಹಿರಿಯ ಸಾಹಿತಿ.

**Source: Vijaya Karnataka, 29 Dec, 2023., p.8**

ಪ್ರಜಾವಾಣಿ

# ಸಾಂಸ್ಕೃತಿಕ ಕರ್ನಾಟಕ ಸವಾಲು–ಸಾಧ್ಯತೆ

ರಾಜಪ್ರಭುತ್ವದೊಳಗೆ ಹುಟ್ಟಿದ ಕವಿರಾಜಮಾರ್ಗವು ಪ್ರಸ್ತಾಪಿಸುತ್ತಿರುವ ಈ ಸ್ವೈರಣೆ, ಬಹುಭಾಷೆ ಬಹುಧರ್ಮ ಬಹುಸಂಸ್ಕೃತಿಗಳಿರುವ ಸಮಾಜದಲ್ಲಿ ಇರಬೇಕಾದ ಸಾಂಸ್ಕೃತಿಕ ಡೆಮಾಕ್ರಸಿಗೆ ಸಂಬಂಧಿಸಿದ ಮೌಲ್ಯ. ಸ್ತ್ರೀಸಂವೇದನೆ ಮತ್ತು ಅಂಬೇಡ್ಕರ್ ಚಿಂತನೆಗಳ ಮೂಲಕ ಲೋಕವನ್ನು ನೋಡುವ ದೃಷ್ಟಿಕೋನಗಳು, ಹಿಂದಿಗಿಂತ ಹೆಚ್ಚು ಮುಂಚೂಣಿಗೆ ಬರುತ್ತಿವೆ

• ರಹಮತ್ ತರೀಕೆರೆ



**ಕೆಂಗಲ್** ಅವರು ಮುಖ್ಯಮಂತ್ರಿಯಾಗಿದ್ದಾಗ, ಸರ್ಕಾರವು ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆ ಸ್ಥಾಪಿಸಿತು. ಇಲಾಖೆಯ ಮೂಲಕ ಪ್ರಾಚೀನ ಕಾವ್ಯಗಳನ್ನು ಮುದ್ರಿಸಿ ಕಡಿಮೆ ಬೆಲೆಗೆ ವಿತರಿಸಲು ನಿರ್ಧರಿಸಿತು. ಆದರೆ ಸಂಸ್ಕೃತಿ ಹೆಸರಲ್ಲಿ ಸರ್ಕಾರದ ಕೆಲಸ ಸಾಂಪ್ರದಾಯಿಕ ಜೀವನ ಮೌಲ್ಯಗಳನ್ನು ಹರಡುವ ಪುಸ್ತಕಗಳನ್ನು ಮುದ್ರಿಸಿ ಒದಗಿಸುವುದಲ್ಲ ಎಂದು ಅನೇಕರು ಟೀಕಿಸಿದರು. ನಾಗರಿಕ ಸರ್ಕಾರವು ಪ್ರಜೆಗಳಲ್ಲಿ ಆಧುನಿಕ ಮೌಲ್ಯಗಳನ್ನು ಬಿತ್ತುವ ಕೆಲಸ ಮಾಡಬೇಕು ಎಂಬುದು ಅವರ ಆಶಯವಾಗಿತ್ತು. ಡಿಎಂಕೆ ಪಕ್ಷವು ತಮಿಳುನಾಡಿನಲ್ಲಿ ಅಧಿಕಾರಕ್ಕೆ ಬಂದಾಗ ಜಗತ್ತಿನ ಚಿಂತಕರನ್ನು ಕುರಿತ ಪುಸ್ತಕಗಳನ್ನು ತಮಿಳಿನಲ್ಲಿ ಪ್ರಕಟಿಸಿದ್ದು, ಅವರ ಗಮನದಲ್ಲಿದ್ದಿರಬಹುದು.

ಇದೇ ಕಾಲಕ್ಕೆ ಸಂಸ್ಕೃತಿ ಇಲಾಖೆಯಿಂದ ಸಂಸ್ಕೃತಿ ಪರಿಕಲ್ಪನೆಯನ್ನು ವ್ಯಾಖ್ಯಾನಿಸುವ ಪುಸ್ತಕಗಳು ಪ್ರಕಟವಾದವು. ಪ್ರಾಚೀನ ಪ್ರಭುತ್ವಗಳು ಕಲಾಪೋಷಣೆ ಮಾಡಿದ ಇತಿಹಾಸವನ್ನು ಕಟ್ಟಿಕೊಡುತ್ತ, ಈ ಕಾರ್ಯವನ್ನು ಆಧುನಿಕ ಸರ್ಕಾರಗಳೂ ಮಾಡಬೇಕೆಂಬುದು ಅವುಗಳ ಸಾರವಾಗಿತ್ತು. ಈಗಲೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬಹುತೇಕ ಕಾರ್ಯಕ್ರಮಗಳು ಈ ವ್ಯಾಖ್ಯೆಯ ಚೌಕಟ್ಟಿನಲ್ಲೇ ಇರುವುದು ಗಮನಾರ್ಹ. ಆದರೆ ಉಚ್ಚವರ್ಗಗಳ ಜೀವನ ಮೌಲ್ಯಗಳ ನೆಲೆಯಿಂದ ರೂಪುಗೊಂಡಿದ್ದ ಈ ಸಂಸ್ಕೃತಿ ವ್ಯಾಖ್ಯೆ ಸಮಸ್ಯಾತ್ಮಕವಾಗಿತ್ತು. ಇದು ಸಾಹಿತ್ಯ ಸಂಗೀತ ನೃತ್ಯವೇ ಮೊದಲಾದ ಲಲಿತಕಲೆಗಳನ್ನು ತನ್ನ ಕಣ್ಣೆದುರು ಇರಿಸಿಕೊಂಡಿತ್ತು. ಸಂಸ್ಕೃತಿಯ ವಿಮರ್ಶಾತ್ಮಕ ಅನುಸಂಧಾನಕ್ಕೆ ಬದಲಾಗಿ ವೈಭವೀಕರಣ ಮಾಡುತ್ತಿತ್ತು. ನಾಡಿನ ದುಡಿವ ವರ್ಗದ ವಿವಿಧ ಜನಸಮುದಾಯಗಳಲ್ಲಿರುವ ಜೀವನಪದ್ಧತಿಯನ್ನಾಗಲಿ ಅಲ್ಲಿರುವ ಲೋಕದೃಷ್ಟಿಗಳನ್ನಾಗಲಿ ಒಳಗೊಂಡಿರಲಿಲ್ಲ.

ಸಂಸ್ಕೃತಿಯ ಈ ಸಾಂಪ್ರದಾಯಿಕ ಚೌಕಟ್ಟನ್ನು ಭಗ್ನಗೊಳಿಸಿ, ಅದಕ್ಕೆ ಹೊಸ ತಿರುವು ಕೊಟ್ಟಿದ್ದು ಬಸವಲಿಂಗಪ್ಪನವರ ಬೂಸಾಸಾಹಿತ್ಯ ಪ್ರಕರಣ. ಈ ಪ್ರಕರಣದಿಂದ ಹೊಮ್ಮಿದ ಚಿಂತನೆಗಳಿಂದ ಪ್ರೇರಿತರಾಗಿ, ಲಂಕೇಶ್, ತೇಜಸ್ವಿ, ಚಂಪಾ, ಆಲನಹಳ್ಳಿ ಮೊದಲಾದ ಲೇಖಕರು 'ಬರೆಹಗಾರ ಮತ್ತು ಕಲಾವಿದರ ಒಕ್ಕೂಟ'ದ ಹೆಸರಲ್ಲಿ ಕಾರ್ಯಕ್ರಮ ಹಮ್ಮಿಕೊಂಡರು. ಇದನ್ನು ಉದ್ಘಾಟಿಸುತ್ತ ಕುವೆಂಪು 'ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ' ಭಾಷಣ ಮಾಡಿದರು. ಇಲ್ಲಿ ಸಾಮಾಜಿಕ ಅಥವಾ ರಾಜಕೀಯ ಪರಿಕಲ್ಪನೆಗಳಿಗೆ ಲಗತ್ತಾಗುವ 'ಕ್ರಾಂತಿ' ವಿಶೇಷಣವನ್ನು ಸಂಸ್ಕೃತಿಗೆ ಜೋಡಿಸಿದ್ದು ವಿಶೇಷವಾಗಿತ್ತು. ಕುವೆಂಪು ಪ್ರಕಾರ, ಜನರ ಚಿಂತನ ಕ್ರಮವನ್ನು ಪ್ರಭಾವಿಸುವ ಧರ್ಮ, ಸಾಹಿತ್ಯ, ಲಲಿತಕಲೆ, ನಂಬಿಕೆ, ಆಚರಣೆ, ಪುರಾಣಗಳಿಗೆ ವರ್ತಮಾನವು ತೋರಬೇಕಾದ್ದು, ಕುರುಡು ಅನುಸರಣೆಯಲ್ಲ. ಒರಟು ನಿರಾಕರಣೆಯೂ ಅಲ್ಲ. ಅವನ್ನು ವಿಮರ್ಶಾತ್ಮಕ ನೆಲೆಯಲ್ಲಿ ಮುಖಾಮುಖಿ ಮಾಡುತ್ತ, ಹೊಸ ಮೌಲ್ಯಪ್ರಜ್ಞೆಯನ್ನು ಸೃಷ್ಟಿಸಬೇಕು. ಬಳಿಕ ಮುಂದೆ ಅನಂತಮೂರ್ತಿಯವರ ಜತೆಗಿನ ತೀಕ್ಷ್ಣ ವಾಗ್ವಾದದಲ್ಲಿ ತೇಜಸ್ವಿಯವರು 'ಕರ್ನಾಟಕ ಸಂಸ್ಕೃತಿಯ ವಿಶ್ಲೇಷಣೆ' ಲೇಖನ ಬರೆದರು.

ಸಂಸ್ಕೃತಿ ಎಂದರೆ, ನಾಡಿನ ಜನ ಸಮುದಾಯಗಳ ಆಲೋಚನಕ್ರಮ, ಜೀವನವಿಧಾನ ಹಾಗೂ ಮೌಲ್ಯಪ್ರಜ್ಞೆಯ ಅಭಿವ್ಯಕ್ತಿ ಎಂಬ ಗ್ರಹಿಕೆ ಮುನ್ನೆಲೆಗೆ ಬಂದಿತು. ಇದು ನಾಡಿನ ಸಮಸ್ತ ಸಮುದಾಯಗಳ ಭಾಷೆ, ಧರ್ಮ, ಆಚರಣೆ, ನಂಬಿಕೆ, ಕಲಾಭಿವ್ಯಕ್ತಿಯ ಲೋಕಗಳನ್ನು ಒಳಗೊಳ್ಳಲು ಯತ್ನಿಸಿತು. ಸಂಸ್ಕೃತಿಯ ಭಾಗವಾಗಿರುವ ಸಂಗತಿಗಳು ಹಿಂದೆಂದೊ ರೂಪುಗೊಂಡ ಪರಿಯಲ್ಲೇ ಇರುವುದಿಲ್ಲ. ಚಾರಿತ್ರಿಕ ಒತ್ತಡಗಳಲ್ಲಿ ಬದಲಾಗುತ್ತವೆ. ಪ್ರಭಾವಶಾಲಿ ಚಿಂತಕರ, ಸಾಮಾಜಿಕ- ರಾಜಕೀಯ ಸಿದ್ಧಾಂತ ಮತ್ತು ಸಂಘಟನೆಗಳ ಮೂಲಕ ಅನುಸಂಧಾನಗೊಳ್ಳುತ್ತ ರೂಪಾಂತರ ಪಡೆಯುತ್ತವೆ ಎಂದು ಭಾವಿಸಿತ್ತು. ಇಂತಹ ಸಾಂಸ್ಕೃತಿಕ ಮಧ್ಯಪ್ರವೇಶವನ್ನು ಯಾರು ಮಾಡಬೇಕು, ಅದರ ಹಿಂದಿನ ತತ್ವ ಯಾವುದು, ಅದರ ಪರಿಣಾಮ ಯಾವುವು ಎಂಬ ಪ್ರಶ್ನೆಗಳನ್ನೂ ಇದು ಹುಟ್ಟಿಸಿತು.

ಕರ್ನಾಟಕ ೫೦

25 ವರ್ಷಗಳ ಮುನ್ನೋಟ

ಮೈಸೂರು ರಾಜ್ಯಕ್ಕೆ 'ಕರ್ನಾಟಕ'ವೆಂದು ನಾಮಕರಣವಾದ ಆಸುಪಾಸಲ್ಲಿ ಹುಟ್ಟಿದ ಈ ವಾಗ್ವಾದಗಳು, ಸಂಸ್ಕೃತಿಯನ್ನು ಪ್ರಶ್ನೆ ಮತ್ತು ಎಚ್ಚರದಲ್ಲಿ ಅನುಸಂಧಾನ ಮಾಡುವುದನ್ನು ತಿಳಿಸಿದವು. ಅವುಗಳಲ್ಲಿ ನಾಡನ್ನು ಸಮಾನತೆ, ವೈಚಾರಿಕತೆಯ ಮೂಲಕ ಪ್ರಜಾಸತ್ತಾತ್ಮಕವಾಗಿ ಕಟ್ಟುವ ಮುಂಗಾಣ್ಕೆಯಿತ್ತು. ಇದೇ ಕಾಲಕ್ಕೆ ಅವುಗಳಿಂದ ಪ್ರಭಾವಿತರಾದ ಕೆಲವು ತಳಸ್ತರದ ಚಿಂತಕರು, ಪ್ರಚಲಿತದಲ್ಲಿರುವ ಸಂಸ್ಕೃತಿಯ ಚೌಕಟ್ಟಿನಲ್ಲಿ, ತಮ್ಮ ಸಮುದಾಯಗಳ ಜೀವನಕ್ರಮಗಳ ಗೈರುಹಾಜರಿಯನ್ನು ಗುರುತಿಸಿದರು. ದಲಿತ, ಮುಸ್ಲಿಂ, ಮಹಿಳಾ ನೆಲೆಗಳಿಂದ ಬಂದ ಲೇಖಕರು, ತಮ್ಮ ಅನುಭವ ಲೋಕದ ಮೂಲಕ ಬರೆಯಲು ಆರಂಭಿಸಿದರು. ತಮ್ಮ ಸಮುದಾಯಗಳ ಸಂಸ್ಕೃತಿ, ಚರಿತ್ರೆ, ಪರಂಪರೆಗಳಲ್ಲಿ ಹೊಸ ಜೀವನ ಮೌಲ್ಯ ವಿಮರ್ಶಾತ್ಮಕವಾಗಿ ಹುಡುಕಿದರು. ಇರುವುದು ಸಂಸ್ಕೃತಿಯಲ್ಲ, ಸಂಸ್ಕೃತಿಗಳು ಎಂದು ಕಾಣಿಸಿದರು. ಅವರ ಯತ್ನಗಳಿಗೆ ಬೌದ್ಧಿಕ ಚೌಕಟ್ಟನ್ನು ಕೊಡುವ ಕೆಲಸವನ್ನು ವಿಶ್ವವಿದ್ಯಾಲಯಗಳು ಮಾಡಿದವು.

ಸಂಸ್ಕೃತಿ ಪರಿಕಲ್ಪನೆಯ ವಿಮರ್ಶಾತ್ಮಕ ಅನುಸಂಧಾನ ಮತ್ತು ಒಳಗೊಳ್ಳುವಿಕೆಯ ಪ್ರಕ್ರಿಯೆಯು, ಕೇವಲ ಅಕಡೆಮಿಕ್ ಪ್ರಯತ್ನ ಆಗಿರಲಿಲ್ಲ. ಜಾತ್ಯತೀತತೆ, ಸಮಾನತೆ, ಸ್ವಾತಂತ್ರ್ಯ, ಸೌಹಾರ್ದತೆ, ಮಾನವೀಯ ಪ್ರಜ್ಞೆಯನ್ನು ಒಳಗೊಂಡ ಹೊಸ ಸಮಾಜ ಕಟ್ಟುವ ಯತ್ನವೂ ಆಗಿತ್ತು. ಇದಕ್ಕೆ ಇದೇ ದಶಕಗಳಲ್ಲಿ ಸಾಮಾಜಿಕ ನ್ಯಾಯದ ಪ್ರಶ್ನೆಯಿಂದ ಹುಟ್ಟಿದ ರಾಜಕೀಯ ಸಾಮಾಜಿಕ ಚಳವಳಿಗಳು ಇಂಬಾದವು. ಸಂಸ್ಕೃತಿಯ ಮರುವ್ಯಾಖ್ಯಾನ, ನಾಗರಿಕ ಆಂದೋಲನ ಮತ್ತು ಸಾಮಾಜಿಕ, ರಾಜಕೀಯ, ಆರ್ಥಿಕ ವ್ಯವಸ್ಥೆಗಳ ಮರುರಚನೆಗಳು ಒಟ್ಟೊಟ್ಟಿಗೆ ನಡೆಯುತ್ತವೆ.

20ನೇ ಶತಮಾನದ ಕೊನೆಯ ವರ್ಷಗಳಲ್ಲಿ ಭಾರತ ಮುಕ್ತಮಾರುಕಟ್ಟೆಯ ಆರ್ಥಿಕ ವ್ಯವಸ್ಥೆಗೆ ಪ್ರವೇಶಿಸಿತು. ಈ ಕಾಲಘಟ್ಟದಲ್ಲಿ ಧರ್ಮ, ನಂಬಿಕೆ, ಶ್ರದ್ಧೆ ಹೆಸರಲ್ಲಿ ಭಾವನಾತ್ಮಕ ಅಲೆಗಳನ್ನು ಎಬ್ಬಿಸಿದ ರಾಜಕೀಯ ಚಳವಳಿಯೂ ಪ್ರಧಾನಧಾರೆಗೆ ಬಂದಿತು. ಇದು ಸಾಂಸ್ಕೃತಿಕ ರಾಷ್ಟ್ರೀಯತೆಯ ಹೆಸರಲ್ಲಿ ಮೇಲ್ಜಾತಿ-ಮೇಲ್ವರ್ಗಗಳ ಧರ್ಮ ಭಾಷೆ ಆಚರಣೆ ನಂಬಿಕೆಗಳನ್ನು ದೇಶದ ಸಂಸ್ಕೃತಿಯೆಂದು ಮಂಡಿಸಿತು. ಇದಕ್ಕೆ ಹೊಂದುವಂತೆ, ತಳಸ್ತರದ ಸಮುದಾಯಗಳ ಮತ್ತು ಬುಡಕಟ್ಟುಗಳ ಲೋಕಗಳನ್ನು ಪಳಗಿಸಿತು. ಬೌದ್ಧ, ಇಸ್ಲಾಂ, ಕ್ರೈಸ್ತ ಧಾರ್ಮಿಕ-ಸಾಮಾಜಿಕ ಸಮುದಾಯಗಳ ಚರಿತ್ರೆ ಪರಂಪರೆ ಸಂಸ್ಕೃತಿಗಳು ಅನ್ಯೀಕರಣಗೊಂಡವು. ಈ ಪ್ರಕ್ರಿಯೆಯಲ್ಲಿ ಸಿನಿಮಾ, ರಂಗಭೂಮಿ, ಸಾಹಿತ್ಯ, ಭಾಷೆ, ಧಾರ್ಮಿಕ ಆಚರಣೆ ಸೋಂಕಿಗೆ ಒಳಗಾದವು. ಈ ಸೋಂಕು ಯಕ್ಷಗಾನದಲ್ಲಿ ಹೆಚ್ಚು ಕಾಣಿಸಿತು. ವೈಚಾರಿಕತೆ, ಸಹನಶೀಲತೆ ಮತ್ತು ವಿವೇಚನೆ ಕಳೆದುಕೊಂಡ, ದ್ವೇಷ ಹರಡುವ ಜ್ಞಾನವಿರೋಧಿ ಯುವ ತಲೆಮಾರು ಸೃಷ್ಟಿಯಾಯಿತು. ಮಾಧ್ಯಮಗಳು ಮಾರುಕಟ್ಟೆ ಸಂಸ್ಕೃತಿಯ ಭಾಗವಾದವು. ಜಾತಿ ಸಮುದಾಯಗಳು ಅಸ್ಮಿತೆಯ ರಾಜಕಾರಣದ ಹಾದಿಯಲ್ಲಿ ತಮ್ಮದೇ ಸಾಂಸ್ಕೃತಿಕ ನಾಯಕರನ್ನು ರೂಪಿಸಿಕೊಂಡು ಸಂಘಟಿತವಾದವು; ಕರ್ನಾಟಕದ ಶಕ್ತಿರಾಜಕಾರಣವು ದಂಧೆಯ ಲಕ್ಷಣವನ್ನು ಮೈಗೂಡಿಸಿಕೊಂಡಿತು. ಹೊಸಚಿಂತನೆ ಹುಟ್ಟಿಸಬೇಕಿದ್ದ ವಿಶ್ವವಿದ್ಯಾಲಯಗಳು ನಿಷ್ಕ್ರಿಯವಾದವು.

ಆದರೆ ಇಂತಹ ಪ್ರತಿಕ್ರಾಂತಿಕಾರಕ ಬೆಳವಣಿಗೆಗಳ ಜತೆಯಲ್ಲೇ, ಸಮಾಜವನ್ನು ಮರುಕಟ್ಟುವ ಸಾಂಸ್ಕೃತಿಕ ಯತ್ನಗಳು ನಿಲ್ಲಲಿಲ್ಲ. ಈಚಿನ ಸಾರ್ವಜನಿಕ ಚರ್ಚೆಗಳಲ್ಲಿ ಕುವೆಂಪು ಅವರ 'ಸರ್ವಜನಾಂಗದ ಶಾಂತಿಯ ತೋಟ' ಮತ್ತು ಕವಿರಾಜಮಾರ್ಗದ 'ಪರ ಧರ್ಮಮುಮಂ ಪರ ವಿಚಾರಮುಮಂ ನೆರೆ ಸೈರಿಸಲಾರ್ಪುದು' ಹೇಳಿಕೆಗಳು ಬಳಕೆಯಾದವು ಎಂಬುದು ಗಮನಾರ್ಹ. ರಾಜಪ್ರಭುತ್ವದೊಳಗೆ ಹುಟ್ಟಿದ ಕವಿರಾಜಮಾರ್ಗವು ಪ್ರಸ್ತಾಪಿಸುತ್ತಿರುವ ಈ ಸ್ವೈರಣೆ, ಬಹುಭಾಷೆ ಬಹುಧರ್ಮ ಬಹುಸಂಸ್ಕೃತಿಗಳಿರುವ ಸಮಾಜದಲ್ಲಿ ಇರಬೇಕಾದ ಸಾಂಸ್ಕೃತಿಕ ಡೆಮಾಕ್ರಸಿಗೆ ಸಂಬಂಧಿಸಿದ ಮೌಲ್ಯ. ಸ್ತ್ರೀಸಂವೇದನೆ ಮತ್ತು ಅಂಬೇಡ್ಕರ್ ಚಿಂತನೆಗಳ ಮೂಲಕ ಲೋಕವನ್ನು ನೋಡುವ ದೃಷ್ಟಿಕೋನಗಳು, ಹಿಂದಿಗಿಂತ ಹೆಚ್ಚು ಮುಂಚೂಣಿಗೆ ಬರುತ್ತಿವೆ. ಪಶುಪಕ್ಷಿಗಳ ಬದುಕುವ ಹಕ್ಕನ್ನು ಮನ್ನಿಸುವ, ಲೈಂಗಿಕ ಅಲ್ಪಸಂಖ್ಯಾತರ ಸಂವೇದನೆಗೆ ಮಿಡಿವ ಸಂವೇದನಶೀಲತೆ ಹೆಚ್ಚುತ್ತಿದೆ. ಕೂಡುಬಾಳಿನ ಆಶಯದಲ್ಲಿ ಎಲ್ಲ ಸಮುದಾಯಗಳನ್ನು ಒಳಗೊಂಡು ಸಮಾಜವನ್ನು ಕಟ್ಟುವ ಬಹುತ್ವದ ಪ್ರಜ್ಞೆಯನ್ನು ಮತ್ತು ಅಸಮಾನತೆ ತೊಡೆಯಲು ಬೇಕಾದ ಸಂಘರ್ಷ ತತ್ವವನ್ನು ಏಕಕಾಲಕ್ಕೆ ಜಾಗೃತಗೊಳಿಸುವುದು ಕುವೆಂಪು ಹೇಳುವ 'ಸಂಸ್ಕೃತಿ ಕ್ರಾಂತಿ'ಯ ಕೆಲಸ. ಈ ಹಿನ್ನೆಲೆಯಲ್ಲಿ ಬರುವ ದಶಕಗಳಲ್ಲಿ ಕರ್ನಾಟಕವು ಕೈಗೊಳ್ಳಬೇಕಾದ ಕೆಲವು ಹೊಣೆಗಳನ್ನು ಹೀಗೆ ಹೇಳಬಹುದು:

ಒಕ್ಕೂಟ ಸರ್ಕಾರವು ರಾಜ್ಯಗಳ ಮೇಲೆ ಭಾಷೆ, ಶಿಕ್ಷಣನೀತಿ, ಕಾನೂನುಗಳನ್ನು ಹೇರಿಕೆ ಮಾಡುತ್ತಿರುವ ಈ ಹೊತ್ತಿನಲ್ಲಿ, ಕರ್ನಾಟಕದ ಅಸ್ಮಿತೆ-ಸ್ವಂತಿಕೆ ಉಳಿಸುವ ಕ್ರಮ ಕೈಗೊಳ್ಳುವುದು; ನಾಡಿನ ಸಮಾಜ, ರಾಜಕಾರಣ, ಧರ್ಮ, ಆರ್ಥಿಕತೆಗಳ ಪ್ರಜಾಪ್ರಭುತ್ವೀಕರಣ ಮಾಡುವ ಚಿಂತನೆಗಳನ್ನು ಪಸರಿಸುವುದು (ಇದಕ್ಕಾಗಿ ಆರೋಗ್ಯಕರ ಚಿಂತನೆಯುಳ್ಳ ಪುಸ್ತಿಕೆಗಳನ್ನು ಪ್ರಕಟಿಸಬಹುದು; ವಿಡಿಯೊಗಳನ್ನು ಹಂಚಬಹುದು); ದಿಟ್ಟವಾಗಿ ಪ್ರಶ್ನೆ ಕೇಳುವ, ಭಿನ್ನಮತ ಹೇಳಲು ಹಿಂಜರಿಯದ ಮತ್ತು ಅದನ್ನು ಆಲಿಸುವ ಸಹನೆಯುಳ್ಳ 'ನಿರಂಕುಶಮತಿ'ತ್ವದ ವಾತಾವರಣ ನಿರ್ಮಿಸುವುದು; ದ್ವೇಷಭಾಷಣ ಮಾಡದಂತೆ, ಸಾಮಾಜಿಕ ಜಾಲತಾಣಗಳು ದ್ವೇಷಸಾಧನೆಯ ಉಪಕರಣಗಳಾಗದಂತೆ ನಿಯಮ ರೂಪಿಸುವುದು; ನಾಡಿನ ಸಾಮಾಜಿಕ ಧಾರ್ಮಿಕ ಬುಡಕಟ್ಟು ಸಮುದಾಯಗಳ ಆರೋಗ್ಯಕರ ಲೋಕದೃಷ್ಟಿ ಮತ್ತು ಸೃಜನಶೀಲತೆ ಒಳಗೊಂಡಿರುವಂತಹ ಸಾಂಸ್ಕೃತಿಕ ಅಭಿವ್ಯಕ್ತಿಗಳನ್ನು ಶೈಕ್ಷಣಿಕ ವಲಯದಲ್ಲಿ ಅಳವಡುವಂತೆ ಮಾಡುವುದು; ಸಾರ್ವಜನಿಕ ಉತ್ಸವಗಳಲ್ಲಿ ಜನಪದ ಕಲಾವಿದರನ್ನು ನಡೆಸಿಕೊಳ್ಳುವುದರಲ್ಲೂ ಕಾಣುವ ಕಲಾಲೋಕದ ತರತಮಗಳನ್ನು ಇಲ್ಲವಾಗಿಸುವುದು; ಮತೀಯ ಜಾತೀಯ ದ್ವೇಷ, ಲಿಂಗತಾರತಮ್ಯ ಹಾಗೂ ಹಿಂಸೆಯನ್ನು ಪ್ರಚೋದಿಸುವ ಬರೆಹ ಸಿನಿಮಾ ರಂಗಪ್ರದರ್ಶನಗಳನ್ನು ಬಹಿಷ್ಕರಿಸುವ ಪ್ರಜ್ಞೆ ಕಾಮನ್‌ಸೆನ್ಸಾಗುವಂತೆ ಮಾಡುವುದು; ಸಂವಿಧಾನದ ಪ್ರಸ್ತಾವನೆಯಲ್ಲಿರುವ ಮೌಲ್ಯಾದರ್ಶಗಳು ಜನರ ಪ್ರಜ್ಞೆಯ ಆಲೋಚನಕ್ರಮದ ಭಾಗವಾಗುವಂತೆ ಕಾರ್ಯಕ್ರಮ ಏರ್ಪಡಿಸುವುದು; (ಕಳೆದ ಕೆಲವು ವರ್ಷಗಳಿಂದ ನ್ಯಾಯಮೂರ್ತಿ ನಾಗಮೋಹನದಾಸ್ ಅವರು ಈ ಕೆಲಸ ಮಾಡಿ ಹಾದಿ ರೂಪಿಸಿದ್ದಾರೆ); ಪದವಿ ನೀಡಿಕೆಗೆ ಸೀಮಿತವಾಗುತ್ತಿರುವ ವಿಶ್ವವಿದ್ಯಾಲಯಗಳು ಮತ್ತು ಮಾಧ್ಯಮಗಳು ಕರ್ನಾಟಕದ ಹದುಳವನ್ನು ಸಾಧಿಸುವ ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಣೆಗಾರಿಕೆಯ ವೇದಿಕೆಗಳಾಗುವುದು.

ಈ ಮುನ್ನೋಟವು ಕಷ್ಟಕರವಾದ ಕನಸಿನಂತೆ ಕಾಣುತ್ತವೆ. ಈ ಕನಸನ್ನು ಕರ್ನಾಟಕದ ಮುಂಬರುವ ದಶಕಗಳು ಹೇಗೆ ಆವಾಹಿಸಿಕೊಳ್ಳುತ್ತವೆ ಮತ್ತು ನಿಭಾಯಿಸುತ್ತವೆ ಎಂಬುದರ ಮೇಲೆ, ನಾಡಿನ ಚಹರೆ ನಿಶ್ಚಯವಾಗಲಿದೆ. ಈ ಕೆಲಸದಲ್ಲಿ ಪ್ರಭುತ್ವದ ಪಾತ್ರವಿದೆ, ನಿಜ. ಆದರೆ ಮತಗಳಿಕೆಯ ರಾಜಕಾರಣದಲ್ಲೇ ಎಲ್ಲವನ್ನು ನೋಡುವ ಸರ್ಕಾರಗಳಿಂದ ಇದನ್ನೆಲ್ಲ ಬಯಸುವುದು ಕಷ್ಟ. ನಾಗರಿಕ ಸಮಾಜವು ಪ್ರಭುತ್ವದ ಮೇಲೆ ನೈತಿಕವಾದ ಒತ್ತಡ ನಿರ್ಮಿಸುವುದು ಮತ್ತು ಪ್ರಭುತ್ವವನ್ನು ಸಂವೇದನಶೀಲಗೊಳಿಸುವುದು ಸಾಧ್ಯವಿದೆ. ಹೀಗೆ ಮಾಡುವುದಕ್ಕೆ ಮೊದಲು ಸ್ವತಃ ಅದು ಸಂವೇದನಶೀಲಗೊಳ್ಳುವುದು ಕೂಡ ಅಗತ್ಯವಾಗಿದೆ.

ಲೇಖಕ: ಸಂಸ್ಕೃತಿ ಚಿಂತಕ

## 'ಅನ್ನದ ಭಾಷೆಯಾಗಿಸಿ'



- ಶಾಸ್ತ್ರೀಯ ಭಾಷಾ ಅಧ್ಯಯನ ಸಂಸ್ಥೆಗೆ ಸ್ವಾಯತ್ತೆ ದೊರಕಿಸಿಕೊಡಬೇಕು. ಸಂಸ್ಥೆಯು ಪ್ರಾಚೀನ ಸಾಹಿತ್ಯಕ್ಕಷ್ಟೇ ಸೀಮಿತವಾಗದೆ, ಹೊಸಗನ್ನಡದ ಇತ್ತೀಚಿನ ಬೆಳವಣಿಗೆಗಳನ್ನೂ ಒಳಗೊಳ್ಳುವಂತೆ ಇದನ್ನು ರೂಪಿಸಬೇಕು
- ಕನ್ನಡೇತರ ರಾಜ್ಯಗಳಲ್ಲಿ ಮತ್ತು ವಿದೇಶಗಳಲ್ಲಿ ಇರುವ ಕನ್ನಡ ಅಧ್ಯಯನ ಪೀಠಗಳಿಗೆ ಯಾವ ಕಾಲಕ್ಕೂ ಅಧ್ಯಾಪಕರ ಕೊರತೆಯಾಗದಂತೆ ನಿಯಮ ರೂಪುಗೊಳ್ಳಬೇಕು
- ಪಂಪ, ರನ್ನ, ಕುಮಾರವ್ಯಾಸರ ಜೊತೆಗೇ ಆಧುನಿಕ ಸಾಹಿತ್ಯದ ಪಥನಿರ್ಮಾತೃ ಲೇಖಕರನ್ನು ಇಂಗ್ಲಿಷಿಗೆ ಅನುವಾದಿಸಲು ಆದ್ಯತೆ ನೀಡಬೇಕು
- ಖಾಸಗಿ ವಲಯದಲ್ಲೂ ಕನ್ನಡಿಗರಿಗೆ ಮೀಸಲಾತಿ ಸಿಗುವಂತೆ ಮಾಡುವ ಮೂಲಕ ಕನ್ನಡವನ್ನು ಅನ್ನದ ಭಾಷೆಯಾಗಿ ಮಾರ್ಪಡಿಸುವ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕು
- ರಾಜ್ಯದ ಪ್ರತಿಯೊಂದು ಪ್ರದೇಶಕ್ಕೂ ಕನ್ನಡದ ಕೆಲಸದಲ್ಲಿ ತನ್ನದೂ ಮಹತ್ವದ ಪಾತ್ರವಿದೆ ಎನ್ನುವ ಭಾವನೆ ಬಲಗೊಳ್ಳುವಂತೆ ಅಕಾಡೆಮಿಗಳು ಬೆಂಗಳೂರಿನಾಚೆ ಬೇರೆ ಬೇರೆ ಕಡೆ ವಿಕೇಂದ್ರೀಕರಣಗೊಳ್ಳಬೇಕು
- ಸದ್ಯ ಕೇಂದ್ರ ಸಾಹಿತ್ಯ ಅಕಾಡೆಮಿಯಲ್ಲಿರುವಂತೆ, ಸರ್ಕಾರ ಬದಲಾದರೂ ಆ ಸಮಿತಿಗಳೇ ಅವಧಿ ಪೂರ್ಣಗೊಳಿಸಬೇಕು. ಈ ದಿಸೆಯಲ್ಲಿ ಪ್ರೊ. ಬರಗೂರು ರಾಮಚಂದ್ರಪ್ಪನವರು ಸಲ್ಲಿಸಿರುವ ಸಾಂಸ್ಕೃತಿಕ ನೀತಿಯು ನಿಜಾರ್ಥದಲ್ಲಿ ಜಾರಿಗೆ ಬರುವಂತಾಗಬೇಕು
- ಸರ್ಕಾರಗಳು ಬದಲಾದಂತೆ ಪಠ್ಯಕ್ರಮಗಳು ಬದಲಾಗುವುದು, ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಬದಲಾಗುವುದು ತಪ್ಪಿ ತಜ್ಞತೆಗೆ ಹೆಚ್ಚಿನ ಪ್ರಾಧಾನ್ಯ ದೊರೆಯಬೇಕು. ಅದಕ್ಕಿಂತ ಮುಖ್ಯವಾಗಿ ರಾಜಕಾರಣಿಗಳು ಮತ್ತು ಉದ್ಯಮಿಗಳು ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತುಗಳಿಗೆ ನೇಮಕಗೊಳ್ಳದಂತೆ ನಿಯಮ ರೂಪಿಸಬೇಕು

**ಚಿದಾನಂದ ಸಾಲಿ**, ಲೇಖಕ

## 'ಕನ್ನಡವಾಗಬೇಕು'



ಸಾಂಸ್ಕೃತಿಕವಾಗಿ ಮುಂದಿನ 25 ವರ್ಷಗಳಲ್ಲಿ ಕರ್ನಾಟಕ ಹೇಗಾಗಬೇಕೆಂದು ನೀವು ಆಶಿಸುವಿರಿ ಎಂಬ ಪ್ರಶ್ನೆಗೆ ನನ್ನ ಒಂದೇ ಸಾಲಿನ ಉತ್ತರ 'ಕನ್ನಡವಾಗಬೇಕು'

ಕನ್ನಡ ಎನ್ನುವಾಗ ಕನ್ನಡದ ಮಣ್ಣು, ಅನ್ನ, ನೀರು, ಗಾಳಿ, ಆರೋಗ್ಯ, ಅಕ್ಷರ, ಉದ್ಯಮ, ಕಲೆ, ವಿಜ್ಞಾನ, ಮನರಂಜನೆ ಮತ್ತೊಂದೂ ಸೇರುತ್ತವೆ. ಈ ಎಲ್ಲವೂ ಸಂಪೂರ್ಣವಾಗಿ ಕನ್ನಡದ ಹಿಡಿತಕ್ಕೆ ದಕ್ಕಬೇಕು. ನಮ್ಮದಾದ ಮೇಲೆ ಇತರರ ಭೋಗ. ಗಣರಾಜ್ಯ ಒಕ್ಕೂಟದ ಮೂಲಮಂತ್ರ ಇದು. ನೀನು ಬೆಳೆದು ದೇಶವನ್ನೂ ಬೆಳೆಯಗೊಡು, ನೀನು ದಿವಾಳಿಯಾಗಿ ದೇಶ ಬೆಳೆಸು ಎಂದಲ್ಲ. ಕನ್ನಡದ ನೀರಿಗೆ ಜಲ ಪ್ರಾಧಿಕಾರಗಳ ಮುಂದೆ ಬೋಸಿ ಹಿಡಿದು ಅಂಗಲಾಚುವ ದೈನೇಸಿ ಸ್ಥಿತಿ, ಕನ್ನಡದ ತೆರಿಗೆ ಆದಾಯಕ್ಕೆ ಗೋಗರೆಯುವ ಪರದೇಸಿತನ, ಕನ್ನಡ ಭಾಷೆಯ ಸಹಜ ಸಾರ್ವಭೌಮತ್ವವನ್ನು ಸಾಮಂತತನಕ್ಕಿಳಿಸಿರುವ ಲಜ್ಜೆಗೇಡಿತನ ನಾಶಗೊಂಡು ಇವು ನನ್ನ ಹಕ್ಕು ಎಂದು ಕಾನೂನಿನ ಅನ್ವಯವೇ ಗಟ್ಟಿಸಿ ಕೇಳುವ ಕೆಚ್ಚು ಕನ್ನಡದ್ದಾಗಬೇಕು.

ಕನ್ನಡವನ್ನು ನಾಲ್ಕನೆಯ ತರಗತಿಯವರಿಗೆ ಶಿಕ್ಷಣ ಮಾಧ್ಯಮವಾಗಿಯೂ ಅಥವಾ ಹತ್ತನೆಯ ತರಗತಿಯವರೆಗೆ ಪ್ರಥಮ ಭಾಷೆಯಾಗಿಯೂ ಓದಿರುವ ವಿದ್ಯಾರ್ಥಿಗೆ ಮಾತ್ರವೆ ಕನ್ನಡ ನೆಲದ ಪದವಿ ತರಗತಿಗೆ ಮೊಮ್ಮೊದಲ ಪ್ರವೇಶ ಹಾಗೂ ಎಲ್ಲ ವರ್ಗದ ಉದ್ಯೋಗಗಳಲ್ಲಿ ಆದ್ಯತೆ, ತರುವಾಯವೇ ಇತರರಿಗೆ ಮಣೆ ಎಂಬುದನ್ನು ಸರ್ಕಾರ ಮೊದಲು ತನಗೆ ತಾನು ಹೇಳಿಕೊಂಡು ತದನಂತರ ಕೋರ್ಟಿಗೆ ಒಪ್ಪಿಸಬೇಕಾಗಿದೆ. ಇದೊಂದು ಆದುದೇ ಆದರೆ ಯಾರ ಸೇವೆಯೂ ಇಲ್ಲದೆ ಕನ್ನಡ ಸಿಂಹಾಸನವೇರುತ್ತದೆ. ಜಾತಿ ಮೀಸಲಾತಿಯ ಕೋಷ್ಟಕದ ನಿಯಮದಲ್ಲೆ ಈ ಎರಡೂ ಆದ್ಯತೆಗಳನ್ನು ಯಾವ ಬಾಧಕವೂ ಇರದೆ ಜಾರಿಗೆ ತರುವುದು ನೂರಕ್ಕೆ ನೂರು ಸಾಧ್ಯ.

ಆದರೆ ಈ ವಿಷಯದಲ್ಲಿ ಪದೇ ಪದೇ ನ್ಯಾಯಾಲಯದಲ್ಲಿ ನಾವು ಸೋಲು ಅನುಭವಿಸುತ್ತಿರುವುದರ ಹಿಂದೆ ಇರುವುದು ಅಪ್ಪಟ ರಾಜಕೀಯ. ಈ ಕಾರ್ಕೋಟಕ ವಿಷ ಕನ್ನಡ ನೆಲವನ್ನು ಸಾವಿರ ವರ್ಷದ ತನಕ ಬಂಜರು ಮಾಡುತ್ತದೆಂಬುದರ ಅರಿವು ನಮಗಿಲ್ಲ. ಇದು ಸರಿಹೋಗದ ಹೊರತು ಎಷ್ಟು ಮಾತನಾಡಿದರೂ ಅದು ಸುಣ್ಣ ಬಿರೆಹುಯ್ದ ಬಾನಿಗೆ ಕನ್ನಡ ಶಿಶು ತಳ್ಳಿ ದೂರ ನಿಂತು ಬಾಯಿ ಬಡಕೊಂಡಂತೆ. ಮುತ್ತುರತ್ನಗಳನು ಬಳ್ಳದಲ್ಲಳೆದು ಮಾರಬೇಕೆಂಬ ಅತಿಯಾಸೆ, ನೀರ ಮೇಲೆ ಬಿಟ್ಟ ಎಣ್ಣೆಯಂತೆ ಪ್ರತ್ಯೇಕ ನಿಲ್ಲುವ ಉದ್ಧಟತನ ನಮಗೆ ಬೇಡ. ಸಾಲಿನ ಕೊನೆಯಲ್ಲಿ ನಿಂತ ಕನ್ನಡ ವ್ಯಕ್ತಿಯೂ ಆತ್ಮಗೌರವದಿಂದ ಬಾಳಬೇಕೆಂಬುದಷ್ಟೆ ಆಶಯ.

**ಲಲಿತಾ ಸಿದ್ಧಬಸವಯ್ಯ**, ಕವಯಿತ್ರಿ

## 'ಸಾಂಸ್ಕೃತಿಕ ರಾಜಕಾರಣ ಕಟ್ಟಬೇಕು'



ಭಾರತೀಯ ಸಂಸ್ಕೃತಿಯೇ ಶ್ರೇಷ್ಠ ಎಂಬ ಸಂಕಥನವನ್ನು ಅತ್ಯಂತ ಪ್ರಚಂಡ ರೀತಿಯಲ್ಲಿ ಇಂದು ಮುನ್ನೆಲೆಗೆ ತರಲಾಗುತ್ತಿದೆ. ಕರ್ನಾಟಕ ಮತ್ತು ಇನ್ಯಾವುದೇ ರಾಜ್ಯಗಳ ಪ್ರಾದೇಶಿಕ ಸಂಸ್ಕೃತಿಗಳನ್ನು ಭಾರತೀಯ ಸಂಸ್ಕೃತಿಯೊಳಗೆ ಸೇರಿಸಿಬಿಡುವ ಅಥವಾ ಅದರ ಒಂದು ಸಣ್ಣ ಭಾಗ ಅನ್ನುವ ಹಾಗೆ ಮಾಡಲಾಗುತ್ತಿದೆ. ಕರ್ನಾಟಕವು ಸಾಂಸ್ಕೃತಿಕವಾಗಿ ಉಳಿದು ಮುಂದುವರಿಯಬೇಕಾದರೆ, ಕರ್ನಾಟಕ ಸಂಸ್ಕೃತಿಯ ವೈಶಿಷ್ಟ್ಯ ಮತ್ತು ಸಂವಿಧಾನವು ನಮಗೆ ಹೇಳಿಕೊಟ್ಟಿರುವಂತೆ ತಳ ಸಂಸ್ಕೃತಿಗಳು, ಪ್ರಾದೇಶಿಕ ಸಂಸ್ಕೃತಿಗಳು ಕೂಡಿಯೇ ಭಾರತೀಯ ಸಂಸ್ಕೃತಿ ಎಂಬುದು ರೂಪುಗೊಂಡಿದೆ ಎಂಬುದನ್ನು ನಾವು ಪ್ರತಿಪಾದಿಸಬೇಕಿದೆ. ಈ ಮೂಲಕ ಭಾರತೀಯ ಸಂಸ್ಕೃತಿ ಎಂಬ ತೀರಾ ಸೀಮಿತವಾದ ಮತ್ತು ವರ್ಣಾಧಾರಿತವಾದಂತಹ ಪರಿಕಲ್ಪನೆಯನ್ನು ವಿರೋಧಿಸಬೇಕಾಗಿದೆ.

ಸಾಂಸ್ಕೃತಿಕ ಆಗುಹೋಗುಗಳು ಇಂದು ಇವೆಂಟ್ ಮ್ಯಾನೇಜ್‌ಮೆಂಟ್‌ಗಳಾಗುತ್ತಿವೆ. ಒಂದು ಪುಸ್ತಕ ಬಿಡುಗಡೆ, ವಿಮರ್ಶೆ, ಸಾಮಾಜಿಕ ಜಾಲತಾಣಗಳಲ್ಲಿ ಆ ಪುಸ್ತಕಕ್ಕೆ ಒಂದು ವೇದಿಕೆ ಕಟ್ಟಿಕೊಡುವವರೆಗೆ ಎಲ್ಲವೂ ವ್ಯಾಪಾರವಾಗಿ ಹೋಗಿದೆ. ಇಂತಹ ವ್ಯಾಪಾರದ ಮೂಲಕ ಬರುವ ಸಂಸ್ಕೃತಿ ಮತ್ತು ಸಾಹಿತ್ಯ ಬಹಳ ತೆಳುವಾಗಿರುತ್ತವೆ. ಅವು ಯಾವ ಆಳವಾದ ಪ್ರಶ್ನೆಗಳನ್ನೂ ಎತ್ತಿಕೊಳ್ಳುವುದಿಲ್ಲ. ಇದು ಕರ್ನಾಟಕದ ಸಂಸ್ಕೃತಿಯನ್ನು ಆಕ್ರಮಿಸಿಕೊಳ್ಳುತ್ತಿದೆ. ಈ ಬಗ್ಗೆಯೂ ನಾವು ಎಚ್ಚರಿಕೆಯಿಂದ ಇರಬೇಕು ಮತ್ತು ಅದಕ್ಕೆ ಬಲವಾದ ಪ್ರತಿರೋಧವನ್ನು ಕಟ್ಟಿಕೊಳ್ಳಬೇಕು. ಕರ್ನಾಟಕ ಸಂಸ್ಕೃತಿಯನ್ನು ಸಂಘರ್ಷವಿಲ್ಲದ ಸಂಸ್ಕೃತಿಯನ್ನಾಗಿ ರೂಪಿಸಲಾಗುತ್ತಿದೆ. ದಲಿತ ಸಂಸ್ಕೃತಿ, ಸ್ತ್ರೀ ಸಂವೇದನೆ, ಲೈಂಗಿಕ ಅಲ್ಪಸಂಖ್ಯಾತತ್ವ... ಇವ್ಯಾವುವೂ ಬೇಡ. ಚರ್ಚೆ, ವಾದ–ವಿವಾದವೇ ಇಲ್ಲದ ಸಂಸ್ಕೃತಿ ನಮ್ಮದು ಎನ್ನುವಂತಹ ಚಟುವಟಿಕೆಗಳು ನಡೆಯುತ್ತಿವೆ. ಈ ಹೊತ್ತಿನಲ್ಲಿ ಸಹಿಷ್ಣುತೆ ಮತ್ತು ಬಹುತ್ವ ಎಂಬುದು ಜನಸಾಮಾನ್ಯರ 'ಕಾಮನ್‌ಸೆನ್ಸ್'ನಿಂದಲೇ ಹೊರಟುಹೋಗಿದೆ. ಇವೆಲ್ಲವನ್ನೂ ನಾವು ನೇರವಾಗಿ ಎದುರಿಸಬೇಕು.

ನಮ್ಮ ಸಂಸ್ಕೃತಿಯ ಆರೋಗ್ಯಕ್ಕೆ ಬೇಕಾಗಿರುವಂತಹ ನಂಬಿಕೆ, ನಿಲುವು, ನಡವಳಿಕೆಗಳನ್ನು ನಾವು ಸ್ಪಷ್ಟವಾಗಿ ಹೇಳಿಕೊಂಡು ಅದಕ್ಕೆ ಪೂರಕವಾದ ಕ್ರಿಯೆಗಳನ್ನು ಮಾಡುವುದೇ ಸಾಂಸ್ಕೃತಿಕ ರಾಜಕಾರಣ. ಸಾಮುದಾಯಿಕವಾಗಿ ಈ ದಿಸೆಯಲ್ಲಿ ನಡೆಯುವಂತಹ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಹೀಗೆ ಈ ಸಾಂಸ್ಕೃತಿಕ ರಾಜಕಾರಣವನ್ನು ನಾವು ಮುಂದಿನ 25 ವರ್ಷಗಳಲ್ಲಿ ಬಹಳ ಗಟ್ಟಿಯಾಗಿ ಕಟ್ಟಿಕೊಡಬೇಕಾಗಿದೆ.

**ರಾಜೇಂದ್ರ ಚೆನ್ನಿ**, ವಿಮರ್ಶಕ

**Source: Prajavani, 23 Dec, 2023., p.11**

# Police interventions reduce crashes on Bengaluru-Mysuru highway

**Increased patrolling has helped exercise caution**

UDBHAVI BALAKRISHNA
BENGALURU, DHNS

Accidents on the Bengaluru-Mysuru highway fell to 12 in November from the high of 92 in May, data shows.

Fatalities in November fell to less than one-fourth of the number in May in the same period, from 28 in May to 6 in November, police data accessed by *DH* shows.

May was the deadliest month for users of the access-controlled road, which opened to the public on March 12.

Police attribute this fall to several reasons.

In July, Ramanagara police began to ramp up patrolling with newly acquired speed radar guns, which helped them keep speeding in check. A month later, National Highways of India (NHAI) officials clarified that the speed limit for the highway was 100 km/h, which helped police officers double down on violators.

Alok Kumar, current Additional Director General of Police (Training) and the former ADGP (Traffic and Road Safety), Karnataka, pointed

**Accidents in 9 months**

| MONTH | TOTAL | FATAL | KILLED |
|---|---|---|---|
| March | 61 | 19 | 20 |
| April | 75 | 19 | 23 |
| May | 92 | 28 | 31 |
| June | 77 | 19 | 29 |
| July | 39 | 9 | 10 |
| Aug | 32 | 10 | 10 |
| Sept | 42 | 13 | 16 |
| Oct | 36 | 11 | 14 |
| Nov | 12 | 6 | 6 |

out that the ban on two-wheelers, auto-rickshaws, tractors, and non-motorised vehicles on the highway since August as a major reason for this fall.

"Since two-wheeler riders made up about 50-60% of the fatalities, banning their entry onto the highway has contributed to the fall in overall accident numbers," he said.

Police in Ramanagara, Mandya, and Mysuru — where the highway snakes through — also took up patrolling for speeding and lane violations, booking heavy vehicle drivers driving on the right lane.

Kumar highlighted that the increased awareness about police patrolling on the highway and the media attention has also helped drivers exercise caution. "We took conscious efforts to bring crashes and fatalities down on the highway, to dispel the notion that was built in the first few months that it is a 'death trap'," he said.

The present ADGP for Traffic and Road Safety, Seemanth Kumar Singh, explained that speeding has come down on the highway, which could also be why the fatalities have fallen to single digits. "With speed radar guns, we are regularly patrolling the highway and ensuring people are not going beyond 100 km/h. This has also reduced the risk of accidents," he said.

Police have been booking drivers for crossing the speed limit along the highway. In the July-September quarter, Ramanagara police registered a total of 3,417 cases against drivers violating the speed limit while Mandya police booked a total of 1,859 people for speeding on the highway.

Source: Deccan Herald, 25 December, 2023., p.2

# CM says he has asked for withdrawal of order banning hijab in classrooms

Matters pertaining to food habits and dress are a matter of personal choice and should not be politicised: Siddaramaiah

**The Hindu Bureau**
MYSURU

In a significant move, Karnataka government is set to revoke the contentious order banning hijab in classrooms, which was passed by the previous BJP government and later led to a legal battle.

Chief Minister Siddaramaiah, who alluded to the hijab issue at a programme in Nanjangud in Mysuru district on Friday, announced that he had asked for withdrawal of the hijab order. ''We will withdraw the hijab circular and there is no restriction and people can wear the dress of their choice," he said.

The previous BJP government had banned wearing hijab in educational institutions. The Department of Primary and



The previous BJP government had banned the wearing hijab in educational institutions. FILE PHOTO

Secondary Education had issued a circular banning hijab in schools and PU colleges which resulted in a political furore. There were protests for and against the move across the State by students' groups as well, starting with a college in Udupi.

Petitions were filed against the order in the Karnataka High Court in 2022, which ruled in favour of the State's circular and said that students in educational institutions should only wear prescribed uniforms, and where no code was prescribed, they should wear "such attire that would accord with equality and integrity and would not disrupt public order." They held that the wearing of hijab was not an essential religious practice. Later in the year, the Supreme Court delivered a split verdict on the issue, and the case is now pending before a larger Bench.

Elaborating on the issue at the event in Nanjangud, Mr. Siddaramaiah said that matters pertaining to food habits and dress are personal. ''I wear dhoti and someone else may wear pants and shirt. What is wrong in it?'' questioned the Chief Minister and said that one should not politicise such issues for political gains.

Though the Congress had hinted that it would revoke the ban if voted to power in the run-up to the elections, it was the first time that the Chief Minister has said in public that the ban was being revoked.

Mr. Siddaramaiah was speaking in Nanjangud after inaugurating three police stations at Kavalande, Antharsante, and Jayapura. Later, on his social media handle, he also said that Prime Minister Narendra Modi's dictum of "Sabka saath, sabka vikas" was hollow.

**BJP responds**

In a quick response, the BJP in its social media handle said that the Chief Minister was "trying to sow the poison of religious bigotry in a harmonious society." They argued that uniform ensures equality among students. The Chief Minister is "creating divisions," the party alleged.

**Source: The Hindu, 23 December, 2023., p.10**

# 17th century Mahasati statue found in Kampli

KIRAN BALANNANAVAR @Ballari



A 17th century Vijayanagara Empire era Mahasati statue was found while doing agricultural work on the outskirts of Kampli town recently. According to historians, the statue beloings to the Vijayanagara era. Officials of the Archaeological Survey of India (ASI) visited the spot. The statue depicts a woman holding weapons. Another woman is also seen standing. Farmers stumbled upon the stone statue. They cleaned it and informed the officials concerned. Immediately, the officials, along with the ASI team, rushed to the spot and took it along with them. Sharanbasappa Kulkar, a researcher and historian, confirmed the discovery of the statue.

"The statue looks like a woman celebrating with another person with weapons and one hand is damaged. We will conduct the carbon dating test to get an exact picture," he said.

**Source: The New Indian Express, 29 December, 2023., p.7**

# Veerashaiva Lingayats demand OBC status

**Davanagere:** The All India Veerashaiva-Lingayat Mahasabha's 24th Maha Adhiveshana has urged the state government to send a proposal to the Union government recommending central OBC status to all sub-communities of Veerashaiva Lingayats. MLA and Mahasabha president Shamanur Shivashankarappa read out the resolutions, which were adopted unanimously.

According to one of the eight resolutions passed at the valedictory here here on Sunday, the central OBC status, if implemented, will help millions of poor members of the communities.

The state government should declare Basavanna to be the cultural leader of the state. His ideology is eternally relevant to the world. The Mahasabha also passed a resolution to support all agitations that are aimed at protecting the unity, integrity of the country and national security.

TOI



Former CM BS Yediyurappa at the valedictory in Davanagere on Sunday

The government must develop former CM S Nijalingappa's house in Chitradurga, into a national monument.

The Mahasabha has urged the community members not to identify themselves as Hindu in the forthcoming population/ caste census. "They should shun names of sub-castes. They should only use terms 'Veerashaiva' or 'Lingayat'," said the resolution. Noted personalities like BY Vijayendra, Basavaraj Bommai, Eshwar Khandre, N Thippanna, Go Ru Channabasappa and others were present. TNN

**Source: Times of India., 25 December, 2023., p.6**

# Amid surge in PV solar units, solar water heaters lose steam

Niranjan.Kaggere
@timesgroup.com

**Bengaluru:** Once a common appliance on household rooftops, solar water heaters are becoming obsolete. Citizens are preferring the profitable photovoltaic (PV) net metering installations instead. The business prospects of generating electricity and selling it for profit to Escoms associated with net-metering installations have disincentivised solar water heaters, which were once the most preferred way for residents to reduce monthly electricity bills.

According to Bescom data, Bengaluru is currently seeing less than 35,000-40,000 solar water heater installations a year, down from 75,000 installations during 2015-16. The near 50% drop comes even though the Karnataka high court had, in 2017, ordered mandatory installation of solar water heaters in every building.

Energy experts attribute the trend to citizens' preference to making a profit rather than merely saving expenditure. "Unlike the PV net-metering units, solar water heaters don't help you monetise energy. They only help cut down on electricity bills by heating the water naturally and in the larger context, reduce the peak load considerably. But the PV units help you earn by selling the electricity generated. But what citizens are missing out is the extent of savings they will get compared to the generation. If you save four units with a solar water heater, PV units will help you generate only one-fourth of the four units," explained Jaideep Malaviya, founder and secretary general of Solar Thermal Federation of India (STFI).

As per solar water heater data, only 22,516 solar water heaters have been installed so far in 2023 in Bescom limits, compared to 40,517 in 2022. Many experts also attributed the trend to the withdrawal of rebate that was extended to households with solar water heaters.

"In the absence of solar water heaters, citizens are switching to conventional electric geysers or gas geysers. While all of us talk about addressing climate change, there are no plans for decarbonising the heating process, which is not only affecting the environment but also adding to the energy crisis with peaking demand," explained MG Prabhakar, a consultant for FKCCI's energy committee.

Besides helping Bengaluru save on the peak load demand, solar water heaters, over the last decade, have helped save 4,151 million units a year. This assuming they work only for 275 days.

## STEADY DROP IN BESCOM LIMITS

| Year | Heaters installed |
|---|---|
| 2013-14 | 72,945 |
| 2014-15 | 72,749 |
| 2015-16 | 76,628 |
| 2016-17 | 64,098 |
| 2017-18 | 56,842 |
| 2018-19 | 42,008 |
| 2019-2020 | 41,543 |
| 2020-2021 | 35,044 |
| 2021-2022 | 31,551 |
| 2022-23 | 40,517 |
| 2023-24 (October) | 22,516 |

Source: Solar Thermal Foundation of India

## IMPACT OF 'BULK' INSTALLATIONS

Bescom officials maintained that the numbers are constant across its limits. Mahantesh Bilagi, MD of Bescom, said: "If you look at the number of installations, there is certainly a drop of late. This is largely due to apartment complexes or multiple-unit housing system. Before availing an electricity connection, it's mandatory for any building to install a solar heater. Apartments with multiple units go in for bulk installation, which is considered as one unit regardless of the number of connections. Similarly, individual houses with three or four floors also take one bulk connection. Hence, the installation number appears to be dropping over the years."

**Source: Times of India., 24 December, 2023., p.2**

# For 2nd year in a row, dog-bite cases up in state

**Pearl.Dsouza**@timesgroup.com

**Bengaluru:** Following the Covid-19 pandemic, Karnataka has witnessed an uptick in cases of dog bite. Till November this year, the state had already seen nearly 2.1 lakh dog-bite cases — a 28% increase on last year's 1.6 lakh cases.

The year-on-year spike in dog bites is sharper than the 14% seen in 2022, data from the Integrated Disease Surveillance Programme (IDSP) and Integrated Health Information Platform (IHIP) revealed. However, data showed that Karnataka's cases had dropped year on year by 30-35% during the pandemic years of 2020 and 2021, before turning north.

Karnataka is second worst among the South Indian states when it comes to number of dog bites this year, only behind Tamil Nadu (nearly 4.1 lakh cases).

DH Ashwath Narayana, former president of the Association for the Prevention and Control of Rabies in India, said there was no proper data during the pandemic. However, there are factors contributing now to the increase in reportage of cases, such as awareness and increase in dog population, he added.

But he noted that deaths due to dog bites are certainly coming down, even if the bite load is more. "One of the reasons is that major cities have had mass dog vaccination under the Animal Birth Control programme, using the municipal fund. Hence, rabies is reducing among dogs. Simultaneously, because of increased awareness, those bitten go to the hospital. They get vaccine because of increased availability," he said.

In Bengaluru city for instance, he said, one gets intradermal inoculation of anti-rabies vaccine (IDRV) at health centres, under the free drug initiative of the ministry of health and family welfare in coordination with the state government. One can also bill it under Ayushman Bharat, and roughly Rs 1,250 gets reimbursed. The vaccine is available even at peripheral health centres in urban and rural areas, he added.

To counter the gross under-reporting of deaths, the government of India has written to the states to notify all human rabies deaths, Narayana said.

### Notifiable disease

As per a circular dated October 12, 2023, principal secretary to medical education Naveen Raj Singh has requested all government and private medical colleges and hospitals to notify human rabies on the IHIP portal. The state has declared human rabies as a notifiable disease.

Earlier that month, health commissioner Randeep D had also directed all district health officers to treat animal-bite victims irrespective of APL/BPL card, and to provide the anti-rabies vaccine and rabies immunoglobulin free of cost.

**CANINE THREAT OVER THE YEARS**

| State | 2023* | 2022 | 2021 | 2020 |
|---|---|---|---|---|
| Tamil Nadu | 4,04,488 | 3,64,210 | 3,23,190 | 7,66,988 |
| **Karnataka** | **2,08,656** | **1,63,216** | **1,43,253** | **2,21,669** |
| Andhra Pradesh | 1,89,539 | 1,89,225 | 2,57,714 | 2,99,981 |
| Telangana | 1,08,910 | 92,613 | 53,149 | 82,954 |
| Kerala | 63,458 | 4,000 | 1,19,974 | 83,836 |

Source: IDSP & IHIP | * Till November



**Source: Times of India., 26 December, 2023., p.3**

Back to Contents

# Urban Affairs

## 48 ವರ್ಷದಿಂದ ರಾಜ್ಯದಲ್ಲಿ ಒಂದು ಸ್ಲಂ ಕೂಡ ಕೊಳಚೆ ಮುಕ್ತವಾಗಿಲ್ಲ
## ಹಕ್ಕುಪತ್ರ ಸಿಕ್ಕಿದ್ದು 68,415 ಜನರಿಗೆ, ನಿರೀಕ್ಷೆಯಲ್ಲಿ 2.18 ಲಕ್ಷ ಕುಟುಂಬ

# ಸ್ಲಂಗಳಿಗೆ ಮುಕ್ತಿ ಎಂದು?

**ಸಂತೋಷ್ ಕಾಚಿನಕಟ್ಟೆ** ಶಿವಮೊಗ್ಗ
lakshmikanthakumar.boraiah@timesgroup.com

ವಿಕ ವಿಶೇಷ

ಕರ್ನಾಟಕವನ್ನು ಕೊಳಚೆ ಮುಕ್ತ ಮಾಡುವ ಉದ್ದೇಶದೊಂದಿಗೆ ರಚಿಸಿದ ಕೊಳೆಗೇರಿ ಅಭಿವೃದ್ಧಿ ಮಂಡಳಿಗೆ ಅರ್ಧ ಶತಮಾನ ಸಮೀಪಿಸಿದರೂ ರಾಜ್ಯದಲ್ಲಿ ಒಂದೇ ಒಂದು ಸ್ಲಂ ಅನ್ನು ಕೊಳಚೆ ಮುಕ್ತ ಮಾಡಲು ಸಾಧ್ಯವಾಗಿಲ್ಲ. ರಾಕೆಟ್ ಯುಗದಲ್ಲೂ ಸ್ಲಂಗಳು ಕೊಳಚೆ ಮುಕ್ತವಾಗಿಲ್ಲದಿರುವುದು ನಮ್ಮ ಆಡಳಿತ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ.

ಕೊಳಚೆ ಪ್ರದೇಶಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಿದ ಬಳಿಕ ನಿರ್ವಹಣೆಗಾಗಿ ಆ ಪ್ರದೇಶವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಬೇಕು. ಆದರೆ, ಒಂದೇ ಒಂದು ಕೊಳಚೆ ಪ್ರದೇಶವನ್ನು ನಗರ ಸ್ಥಳೀಯ ಸಂಸ್ಥೆಗೆ ಹಸ್ತಾಂತರ ಮಾಡಿಲ್ಲ. ಹೀಗಾಗಿ ಕೊಳಚೆ ಮುಕ್ತ ಕನಸು ಇದೂವರೆಗೆ ಈಡೇರಿಲ್ಲ ಎನ್ನುತ್ತಾರೆ ಮಂಡಳಿ ಅಧಿಕಾರಿಗಳು.

**ಮಂಡಳಿ ರಚನೆ:** ಖಾಸಗಿ, ಸರಕಾರಿ, ಸ್ಥಳೀಯ ಸಂಸ್ಥೆಗಳ ಭೂಮಿಯಲ್ಲಿ ಆರ್ಥಿಕವಾಗಿ ಹಿಂದುಳಿದವರು ಆಶ್ರಯಕ್ಕಾಗಿ ಜೋಪಡಿ, ಗುಡಿಸಲುಗಳನ್ನು ನಿರ್ಮಿಸಿಕೊಂಡು ವಾಸ ಮಾಡುತ್ತಿದ್ದರು. ಅಲ್ಲಿ ಮೂಲ ಸೌಲಭ್ಯಗಳಿಲ್ಲದೆ ಕೊಳಚೆ ಪ್ರದೇಶ ನಿರ್ಮಾಣವಾಗಿತ್ತು. ಕೊಳಚೆ ನಿರ್ಮೂಲನೆ ಸಲುವಾಗಿ ರಾಜ್ಯ ಸರಕಾರ 1975ನೇ ಜುಲೈನಲ್ಲಿ ಕೊಳಚೆ ನಿರ್ಮೂಲನಾ ಮಂಡಳಿ ರಚಿಸಿತು. 2010ರಲ್ಲಿ ಅದನ್ನು ಕೊಳೆಗೇರಿ ಅಭಿವೃದ್ಧಿ ಮಂಡಳಿ ಎಂದು ಮರು ನಾಮಕರಣ ಮಾಡಿತು. »11



ಶಿವಮೊಗ್ಗದ ರಾಜೀವ್‌ಗಾಂಧಿ ಬಡಾವಣೆಯಲ್ಲಿ ಜನಜೀವನದ ದುಸ್ಥಿತಿ.

**2,992** ಒಟ್ಟು ಕೊಳಚೆ ಪ್ರದೇಶಗಳು

**2,852** ಘೋಷಿತ

**140** ಘೋಷಣೆಗೆ ಬಾಕಿ

**40.50** ಲಕ್ಷ ಒಟ್ಟು ಜನಸಂಖ್ಯೆ

ಸ್ಲಂಗಳು ಅಧಿಕೃತವಾಗಿ ಹಸ್ತಾಂತರವಾಗದಿದ್ದರೂ ನೀರು, ಸ್ವಚ್ಛತೆ, ಚರಂಡಿ, ರಸ್ತೆ ಸೌಲಭ್ಯವನ್ನು ಪಾಲಿಕೆ ಒದಗಿಸುತ್ತಲೇ ಬಂದಿದೆ. ಮಂಡಳಿಯನ್ನು ನಂಬಿ ಕುಳಿತರೆ ಸ್ಲಂಗಳಲ್ಲಿ ಜನರು ಬದುಕುವುದೇ ಕಷ್ಟ.

– **ರಮೇಶ್ ಹೆಗ್ಡೆ** ಮಾಜಿ ಸದಸ್ಯ, ಮಹಾನಗರ ಪಾಲಿಕೆ, ಶಿವಮೊಗ್ಗ

ರಾಜ್ಯವನ್ನು ಕೊಳಚೆ ಮುಕ್ತಗೊಳಿಸಲು ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಯೋಜನಾಬದ್ಧ ಮನೆಗಳ ನಿರ್ಮಾಣಕ್ಕೆ 4.92 ಲಕ್ಷ ಕುಟುಂಬಗಳನ್ನು ಗುರುತಿಸಲಾಗಿದೆ. ಪ್ರಸ್ತುತ 1.80 ಲಕ್ಷ ಮನೆಗಳ ನಿರ್ಮಾಣ ಪ್ರಗತಿಯಲ್ಲಿದೆ.

–**ಜಮೀರ್ ಅಹ್ಮದ್ ಖಾನ್** ಸಚಿವ, ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣಾಭಿವೃದ್ಧಿ ಇಲಾಖೆ

### ಅತಿಹೆಚ್ಚು ಸ್ಲಂಗಳು

| | |
|---|---|
| ಬೆಂಗಳೂರು ನಗರ | 435 |
| ಬೆಳಗಾವಿ | 250 |
| ಬಳ್ಳಾರಿ | 203 |
| ಶಿವಮೊಗ್ಗ | 165 |
| ಕಲಬುರಗಿ | 149 |
| ಧಾರವಾಡ | 130 |
| ತುಮಕೂರು | 130 |
| ವಿಜಯಪುರ | 130 |

ಕೊಳೆಗೇರಿಗಳನ್ನು ಕೊಳಚೆ ಮುಕ್ತಗೊಳಿಸಲು ಕೇವಲ ಸರಕಾರ ಅಥವಾ ಮಂಡಳಿಯಿಂದ ಸಾಧ್ಯವಿಲ್ಲ. ಇದಕ್ಕೆ ಸ್ಥಳೀಯ ನಿವಾಸಿಗಳು ಕೈಜೋಡಿಸಬೇಕು. ಸರಕಾರ ನೀಡುವಂತಹ ಸೌಲಭ್ಯಗಳ ಸಮರ್ಥ ಬಳಕೆಯಾಗಬೇಕು.

– **ಗೀತ ರವೀಂದ್ರ** ನಿರ್ದೇಶಕ, ರಾಜ್ಯ ಕೊಳಗೇರಿ ಅಭಿವೃದ್ಧಿ ಮಂಡಳಿ

# ಸ್ಲಂಗಳಿಗೆ ಮುಕ್ತಿ ಎಂದು?

» ಮೊದಲ ಪುಟದಿಂದ

ರಾಜ್ಯದೆಲ್ಲೆಡೆ 2,992 ಕೊಳಚೆ ಪ್ರದೇಶಗಳಿದ್ದು ಇವುಗಳಲ್ಲಿ 2,852 ಪ್ರದೇಶಗಳನ್ನು ಸ್ಲಂ ಎಂದು ಘೋಷಿಸಲಾಗಿದೆ. ಖಾಸಗಿ ಭೂಮಿಯಲ್ಲಿರುವ ಸ್ಲಂಗಳ ನಿವಾಸಿಗಳನ್ನು ತೆರವುಗೊಳಿಸುವುದರ ಬದಲಾಗಿ ಭೂ ಮಾಲೀಕರಿಗೆ ಪರ್ಯಾಯ ಭೂಮಿ ಒದಗಿಸಲು ಅವಕಾಶವಿದೆ. ಆದರೆ, ಅದಕ್ಕೆ ಅನುದಾನ ಸಾಕಾಗದು ಎನ್ನುತ್ತಾರೆ ಅಧಿಕಾರಿಗಳು. ಹೀಗಾಗಿ ಇನ್ನೂ ಸುಮಾರು 140 ಸ್ಲಂಗಳ ಘೋಷಣೆ ಬಾಕಿ ಉಳಿದಿದೆ.

**ಹಕ್ಕುಪತ್ರ ವಿತರಣೆ**

